ಸೋಮವಾರ, ಡಿಸೆಂಬರ್ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 347 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಕಲಿಕೆಯಲ್ಲಿ ಗ್ಯಾಜೆಟ್‌ಗಳ ಬಳಕೆ ಮಿತಿ ಹೇಗೆ?



ಆಳ-ಅಗಲ
ವಿಶ್ವ ಚೆಸ್: ಏಷ್ಯಾ ರಾಷ್ಟ್ರಗಳ ಪಾರಮ್ಯ

ಮಾಣಿಪ್ಪಾಡಿ ಆರೋಪ: ಸದನದಲ್ಲಿ ಸಂಘರ್ಷ? 4

'ಜಲವಾಹಕ' ಯೋಜನೆಗೆ ಚಾಲನೆ 8

ಎಎಪಿ: 70 ಅಭ್ಯರ್ಥಿಗಳ ಘೋಷಣೆ 9

ವಿಜಯೇಂದ್ರ ಮುಂದುವರಿಕೆಗೆ ಒತ್ತಾಯ 4

1987ರಲ್ಲಿ ಇದ್ದಂತೆ ನಿಯಮ ಮರುಜಾರಿಗೆ ಚಿಂತನೆ, ಸದನದಲ್ಲೂ ಚರ್ಚೆಗೆ ಸಮ್ಮತಿ

ಪಂಚಾಯಿತಿಯಲ್ಲೂ ಪಕ್ಷ ಚಿಹ್ನೆ?

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ಚಿಹ್ನೆಗಳಡಿ ಅಭ್ಯರ್ಥಿಗಳ ಸ್ಪರ್ಧೆಗೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಪ್ರಜಾಪ್ರಭುತ್ವದ ಬುನಾದಿ ಎನಿಸಿಕೊಂಡಿರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮೂರು ದಶಕಗಳ ಹಿಂದೆ ರಾಜಕೀಯ ಪಕ್ಷಗಳ ಚಿಹ್ನೆಗಳನ್ನು ಬಳಸಿಕೊಳ್ಳಲಾಗುತ್ತಿತ್ತು.

ಕರ್ನಾಟಕದಲ್ಲಿ ಮೊದಲ ಬಾರಿ 1987ರಲ್ಲಿ ನಡೆದಿದ್ದ ಗ್ರಾಮ ಪಂಚಾಯಿತಿ (ಆಗ ಮಂಡಲ ಪಂಚಾಯಿತಿ) ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಆ ಬಳಿಕ ರೂಪಿಸಿದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ–1993ರ ಪ್ರಕಾರ ರಾಜಕೀಯ ಪಕ್ಷಗಳ ಚಿಹ್ನೆ ಬಿಟ್ಟು ಚುನಾವಣೆ ನಡೆಸಲು ನಿಯಮ ರೂಪಿಸಲಾಗಿತ್ತು.

1993ರಿಂದ ಇಲ್ಲಿಯವರೆಗೆ ಮೂರು ದಶಕಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ನಡೆದ ಯಾವುದೇ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಚಿಹ್ನೆಗಳನ್ನು ಬಳಸಿಲ್ಲ.

4ನೇ ಪುಟ ನೋಡಿ



ಹಲವು ಶಾಸಕರು, ರಾಜಕೀಯ ತಜ್ಞರು, ಸಂಘಟನೆಗಳ ಪ್ರಮುಖರು ಬೇಡಿಕೆ ಇಟ್ಟಿದ್ದಾರೆ. ಸಾರ್ವಜನಿಕ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಅಭಿಪ್ರಾಯ ಸಂಗ್ರಹದ ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ



ಕೇರಳ ಮಾದರಿಯಲ್ಲಿ ಸದಸ್ಯ ಕ್ಷೇತ್ರಗಳನ್ನು ಮರುನಿಗದಿ ಮಾಡಬೇಕು. ಪಕ್ಷದ ಚಿಹ್ನೆ ಆಧಾರದಲ್ಲೇ ಚುನಾವಣೆ ನಡೆಸಬೇಕು ಎಂಬ ಬೇಡಿಕೆ ಇಟ್ಟಿದ್ದೇವೆ. ಈ ಕುರಿತು ಸದನದಲ್ಲಿ ಚರ್ಚಿಸಲು ಅನುಮತಿ ದೊರೆತಿದೆ

ಮಂಜುನಾಥ ಭಂಡಾರಿ, ವಿಧಾನಪರಿಷತ್ ಸದಸ್ಯ

ಅಂಕಿ ಅಂಶ

5,950 ರಾಜ್ಯದ ಗ್ರಾಮ ಪಂಚಾಯಿತಿಗಳ ಸಂಖ್ಯೆ

95 ಸಾವಿರ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು

ಸ್ಥಾನ	ಗೌರವಧನ
ಅಧ್ಯಕ್ಷ	₹6,000
ಉಪಾಧ್ಯಕ್ಷ	₹4,000
ಸದಸ್ಯ	₹2,000

ಈಗಿರುವ ನಿಯಮಗಳು

- ಪಕ್ಷಗಳ ಚಿಹ್ನೆ ರಹಿತ ಚುನಾವಣೆ
- ಅಭ್ಯರ್ಥಿಗಳಿಗೆ ಮುಕ್ತ ಚಿಹ್ನೆಗಳ ಹಂಚಿಕೆ
- ಪ್ರಚಾರದಲ್ಲಿ ಪಕ್ಷಗಳ ಬಾವುಟ, ಬ್ಯಾನರ್ ನಿಷೇಧ
- ರಾಜಕೀಯ ಪಕ್ಷಗಳ ಸಭೆ, ಸಮಾರಂಭ ನಿಷೇಧ
- ಅಭ್ಯರ್ಥಿಗಳನ್ನು 'ಬೆಂಬಲಿತರು' ಎಂದು ಬಿಂಬಿಸುವಂತಿಲ್ಲ
- ರಾಜಕೀಯ ಮುಖಂಡರ ಭಾವಚಿತ್ರದ ಕರಪತ್ರ ನಿಷೇಧ

1987ರ ನಿಯಮ ಬದಲಿಸಿದ್ದೇಕೆ?

- ಪಕ್ಷ ರಾಜಕೀಯದಿಂದ ಹಳ್ಳಿಗಳ ಸಾಮರಸ್ಯಕ್ಕೆ ಧಕ್ಕೆ
- ಗುಂಪುಗಾರಿಕೆ ಕಾರಣ ಗ್ರಾಮಗಳ ಅಭಿವೃದ್ಧಿಗೆ ಹಿನ್ನಡೆ
- ಗೆದ್ದ ಪಕ್ಷಗಳ ಬೆಂಬಲಿಗರಿಗಷ್ಟೇ ಸೌಲಭ್ಯಗಳು
- ಸೋತ ಪಕ್ಷಗಳ ಬೆಂಬಲಿಗರ ಕಡೆಗಣನೆ
- ಎಲ್ಲರನ್ನೂ ಒಳಗೊಂಡ ಗ್ರಾಮಸ್ವರಾಜ್ ಪರಿಕಲ್ಪನೆ

ಪಕ್ಷ ಚಿಹ್ನೆ ಬೇಕು ಎನ್ನುವವರ ವಾದ

- ಪಕ್ಷಗಳ ಚಿಹ್ನೆ ಇಲ್ಲದಿದ್ದರೂ ಪರೋಕ್ಷವಾಗಿ ಪಕ್ಷಗಳ ಪ್ರವೇಶ
- ಗೆದ್ದ ಅಭ್ಯರ್ಥಿಗಳನ್ನು ತಮ್ಮ ಬೆಂಬಲಿಗರೆಂದೇ ಬಿಂಬಿಸುವ ಪರಿಪಾಟ
- ಗುಂಪುಗಾರಿಕೆಗೆ ಕಡಿವಾಣ ಹಾಕಲು ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ
- ರಾಜಕೀಯ ಪಕ್ಷಗಳ ಬೇರು ಗಟ್ಟಿಮಾಡಲು ಪಕ್ಷಗಳ ಪ್ರವೇಶ ಅಗತ್ಯ
- ಇತರೆ ಚುನಾವಣೆಗಳ ಮೇಲೂ ಹಿಡಿತ ಸಾಧಿಸಲು ಅನುಕೂಲ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಅತುಲ್ ಆತ್ಮಹತ್ಯೆ ಪ್ರಕರಣ ಪತ್ನಿ, ಅತ್ತೆ, ಬಾಮೈದ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ ಸಂಬಂಧ ಅವರ ಪತ್ನಿ ಸೇರಿದಂತೆ ಮೂವರನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅತುಲ್ ಪತ್ನಿ ನಿಖಿತಾ ಸಿಂಘಾನಿಯಾ ಅವರನ್ನು ಹರಿಯಾಣದ ಗುರುಗ್ರಾಮದ ಪಿ.ಜಿಯಲ್ಲಿ ಬಂಧಿಸಿದರೆ, ತಾಯಿ ನಿಶಾ ಸಿಂಘಾನಿಯಾ ಹಾಗೂ ಸಹೋದರ ಅನುರಾಗ್ ಸಿಂಘಾನಿಯಾ ಅವರನ್ನು ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ರಾಮೇಶ್ವರ ಹೋಟೆಲ್ ಬಳಿ ಬಂಧಿಸಿ, ಶನಿವಾರ ರಾತ್ರಿ ಬೆಂಗಳೂರು ನಗರಕ್ಕೆ ಕರೆತರಲಾಗಿದೆ.

ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಅವರು ಆರೋಪಿಗಳನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಎಲ್ಲ ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ. ಮತ್ತೊಬ್ಬ ಆರೋಪಿ ಸುಶೀಲ್ ಸಿಂಘಾನಿಯಾ ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ಅತುಲ್ ಪತ್ನಿ ನಿಖಿತಾ ಮತ್ತು ಇತರೆ ಆರೋಪಿಗಳಿಗಾಗಿ ಎರಡು ದಿನ ಹುಡುಕಾಟ ನಡೆಸಿದ್ದರೂ ಪತ್ತೆಯಾಗಿರಲಿಲ್ಲ.

4ನೇ ಪುಟ ನೋಡಿ

ಜಾಕೀರ್ ಹುಸೇನ್ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ಅವರಿಗೆ ಹೃದಯ ಸಂಬಂಧಿ ಸಮಸ್ಯೆ ಕಾಣಿಸಿಕೊಂಡ ಕಾರಣ ಅವರನ್ನು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊ ದಲ್ಲಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ ಎಂದು ಅವರ ಸ್ನೇಹಿತ ಹಾಗೂ ಕೊಳಲು ವಾದಕ ರಾಕೇಶ್ ಚೌರಾಸಿಯಾ ತಿಳಿಸಿದ್ದಾರೆ. ಹುಸೇನ್ ಅವರನ್ನು ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇರಿಸಲಾಗಿದೆ.



ಜಾಕೀರ್ ಹುಸೇನ್

73 ವರ್ಷ ವಯಸ್ಸಿನ ಹುಸೇನ್ ಅವರು ರಕ್ತದ ಒತ್ತಡಕ್ಕೆ ಸಂಬಂಧಿಸಿದ ಸಮಸ್ಯೆ ಎದುರಿಸುತ್ತಿದ್ದರು ಎಂದು ಮೂಲಗಳು ಹೇಳಿವೆ. 'ಹುಸೇನ್ ಅವರ ಆರೋಗ್ಯ ಸರಿ ಇಲ್ಲ. ಪರಿಸ್ಥಿತಿ ನಮ್ಮನ್ನು ಚಿಂತೆಗೆ ನೂಕಿದೆ' ಎಂದು ಚೌರಾಸಿಯಾ ಹೇಳಿದ್ದಾರೆ.

ಹುಸೇನ್ ಅವರ ಆರೋಗ್ಯ ಬಗ್ಗೆ ಹಲವರು ಕಳವಳ ವ್ಯಕ್ತಪಡಿಸಿದ್ದಾರೆ. 'ಜಾಕೀರ್ ಹುಸೇನ್ ಅವರಿಗೆ ಹುಶಾರಿಲ್ಲ. ಅವರಿಗೆ ಗಂಭೀರ ಆರೋಗ್ಯ ಸಮಸ್ಯೆ ಎದುರಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಅವರ ಸಂಬಂಧಿ ಅಯೂಬ್ ಔಲಿಯಾ ತಿಳಿಸಿದ್ದಾರೆ. ಲಂಡನ್‌ನಲ್ಲಿ ಇರುವ ಔಲಿಯಾ ಅವರು, ಜಾಕೀರ್ ಅವರು ಶೀಘ್ರ ಗುಣವಾಗಲಿ ಎಂದು ಅವರ ಅಭಿಮಾನಿಗಳು ಪ್ರಾರ್ಥಿಸಬೇಕು ಎಂಬ ಮನವಿ ಮಾಡಿದ್ದಾರೆ' ಎಂದು ಹಿರಿಯ ಪತ್ರಕರ್ತ ಪರ್ವೇಜ್ ಆಲಂ ಅವರು 'ಎಕ್ಸ್' ಮೂಲಕ ಹೇಳಿದ್ದಾರೆ.


॥ ಕರುಣೆಯ ಅಂತಃಕರುಣೆಯ ಮಾನವೀಯ ಸೆಲೆ ನೀವು
ಜನರ ಬಲ ನೀವು ಆಶಾಕಿರಣ ನೀವು ॥
ನಮ್ಮ ಹೆಮ್ಮೆಯ ನಾಯಕರು, ಕೇಂದ್ರ ಸರಕಾರದ ಗೌರವಾನ್ವಿತ ಬೃಹತ್ ಕೈಗಾರಿಕೆ
ಮತ್ತು ಉಕ್ಕು ಖಾತೆ ಸಚಿವರು ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರು ಆಗಿರುವ
ಸನ್ಮಾನ್ಯ ಶ್ರೀ
ಹೆಚ್.ಡಿ. ಕುಮಾರಸ್ವಾಮಿ ರವರಿಗೆ
ಜನ್ಮದಿನದ ಶುಭಾಶಯಗಳು
ಆ ಭಗವಂತ ಹೆಚ್ಚಿನ ಆರೋಗ್ಯ ನೀಡಿ ಇನ್ನೂ
ದೀರ್ಘಕಾಲ ಜನಸೇವೆ ಮಾಡುವ ಚೈತನ್ಯವನ್ನು ತಮಗೆ
ಕರುಣಿಸಲಿ ಎಂದು ಮನಸಾರೆ ಪ್ರಾರ್ಥಿಸುತ್ತೇವೆ.
ಪ್ರಕಟಣೆ :
ಶ್ರೀ ಟಿ.ಎನ್. ಜವರಾಯಿಗೌಡರು
ಮಾನ್ಯ ವಿಧಾನ ಪರಿಷತ್ ಸದಸ್ಯರು
ಜೆ.ಡಿ.ಎಸ್. ಅಧ್ಯಕ್ಷರು, ಯಶವಂತಪುರ ವಿಧಾನಸಭಾ ಕ್ಷೇತ್ರ
ಮತ್ತು ಯಶವಂತಪುರ ವಿಧಾನಸಭಾ ಕ್ಷೇತ್ರದ
ಜೆಡಿಎಸ್ ಪಕ್ಷದ ಎಲ್ಲಾ ಗೌರವಾನ್ವಿತ ಮುಖಂಡರು,
ಕಾರ್ಯಕರ್ತರು

18ರಿಂದ 42 ತಿಂಗಳ ನಡುವಿನ ಮಕ್ಕಳ ನಡವಳಿಕೆ ಆಧರಿಸಿ 'ಐಐಐಟಿ–ಬಿ'ಯಿಂದ ಅಧ್ಯಯನ

ಆಟಿಸಂ ಪತ್ತೆಗೆ 'ಕಂಪ್ಯೂಟರ್ ದೃಷ್ಟಿ'

● ವರುಣ ಹೆಗಡೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ಆಧಾರಿತ 'ಕಂಪ್ಯೂಟರ್ ದೃಷ್ಟಿ' ತಂತ್ರಜ್ಞಾನದ ನೆರವಿನಿಂದ ಮಕ್ಕಳಲ್ಲಿನ ಆಟಿಸಂ ಲಕ್ಷಣಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ರೋಗ ಪತ್ತೆ ಮಾಡಲು ಸಂಶೋಧಕರು ಮುಂದಾಗಿದ್ದಾರೆ.

ನಡವಳಿಕೆ ಆಧಾರಿತ ಈ ಅಧ್ಯಯನವನ್ನು ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ–ಬಿ) ಕೈಗೊಂಡಿದೆ. ಇದಕ್ಕೆ ಸೆಂಟರ್ ಫಾರ್ ಅಡ್ವಾನ್ಸ್ಡ್ ರಿಸರ್ಚ್ ಆ್ಯಂಡ್ ಎಕ್ಸಲೆನ್ಸ್ ಇನ್ ಆಟಿಸಂ ಮತ್ತು ಸೇಂಟ್ ಜಾನ್ಸ್ ಆಸ್ಪತ್ರೆಯ ಸಹಯೋಗವಿದೆ. ಕಂಪ್ಯೂಟರ್ ದೃಷ್ಟಿಯ ನೆರವಿನಿಂದ 18ರಿಂದ 42 ತಿಂಗಳ ನಡುವಿನ ಮಕ್ಕಳ ಮೇಲೆ ನಿಗಾ ಇರಿಸಿ, ಆಟಿಸಂನ ವಿವಿಧ ಲಕ್ಷಣಗಳನ್ನು ಗುರುತಿಸಲಾಗುತ್ತದೆ. ಬಳಿಕ ವಿಶ್ಲೇಷಣೆಗೆ ಒಳಪಡಿಸಿ, ಸ್ವಯಂಚಾಲಿತವಾಗಿ ಸಮಸ್ಯೆ ಪತ್ತೆ ಮಾಡಲಾಗುತ್ತದೆ. 2021ರಲ್ಲಿಯೇ ಈ ಅಧ್ಯಯನ ಪ್ರಾರಂಭವಾಗಿದ್ದು, ಈಗಾಗಲೇ ನೂರಕ್ಕೂ ಅಧಿಕ ಮಂದಿಯಲ್ಲಿ ಆಟಿಸಂ ಲಕ್ಷಣಗಳನ್ನು ಗುರುತಿಸಲಾಗಿದೆ. ಇನ್ನೂ ಒಂದು ವರ್ಷ ಈ ಅಧ್ಯಯನ ನಡೆಯಲಿದೆ.

> **ಆಟಿಸಂಅನ್ನು ಬೇಗ ಗುರುತಿಸಿದರೆ ಪರಿಣಾಮಕಾರಿ ಚಿಕಿತ್ಸೆ ಸಾಧ್ಯ. ಹೀಗಾಗಿ ಕಂಪ್ಯೂಟರ್ ದೃಷ್ಟಿ ತಂತ್ರಜ್ಞಾನ ಬಳಸಿ ಅಧ್ಯಯನ ಕೈಗೊಳ್ಳಲಾಗಿದೆ**
> **ದಿನೇಶ್ ಬಾಬು ಜಯಗೋಪಿ,** ದತ್ತಾಂಶ ವಿಜ್ಞಾನ, ಎ.ಐ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ, ಐಐಐಟಿ–ಬಿ

ಆಟಿಸಂ ಎನ್ನುವುದು ನರವ್ಯೂಹಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ. ಮಿದುಳಿನ ಸಾಮಾನ್ಯ ಬೆಳವಣಿಗೆಯನ್ನು ಕುಂಠಿತಗೊಳಿಸಿ, ಸಂವಹನ, ಸಾಮಾಜಿಕ ಒಡನಾಟ, ಗ್ರಹಿಕೆ ಮತ್ತು ವರ್ತನೆಗಳ ಮೇಲೆ ಪರಿಣಾಮ ಬೀರುತ್ತದೆ. ತನ್ನಷ್ಟಕ್ಕೆ ತಾನೇ ಮಗ್ನವಾಗುವುದು, ಯಾವುದರ ಪರಿವೆಯೇ ಇರದಿರುವುದು, ತುಂಟತನ, ಕೋಪ, ಮಾಡಿದ್ದನ್ನೇ ಮಾಡುವುದು ಆಟಿಸಂನ ಪ್ರಮುಖ ಲಕ್ಷಣಗಳಾಗಿದೆ. ಈ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚುವುದು ಸವಾಲಾಗಿದೆ. ಆದ್ದರಿಂದ ಕೃತಕ ಬುದ್ಧಿಮತ್ತೆ ಆಧಾರಿತ ಕಂಪ್ಯೂಟರ್ ದೃಷ್ಟಿ ತಂತ್ರಜ್ಞಾನವನ್ನು ಬಳಸಿಕೊಂಡು ಸ್ವಯಂಚಾಲಿತವಾಗಿ ಪತ್ತೆ ಮಾಡಲಾಗುತ್ತಿದೆ.

ಕ್ಯಾಮೆರಾ ಅಳವಡಿಸಿ ನಿಗಾ: ಸಮಸ್ಯೆಗಳನ್ನು ಪತ್ತೆ ಮಾಡಲು ಸಂಶೋಧಕರು ಆಟದ ಶಿಷ್ಟಾಚಾರವನ್ನು ರೂಪಿಸಿದ್ದಾರೆ. ರಚನಾತ್ಮಕ ಹಾಗೂ ರಚನಾತ್ಮಕ ಅಲ್ಲದ ಚಟುವಟಿಕೆಗಳನ್ನು ಈ ಆಟಗಳು ಹೊಂದಿವೆ. ರಚನಾತ್ಮಕ ಚಟುವಟಿಕೆಗಳಲ್ಲಿ ಅವರು ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ಸ್ಪಷ್ಟವಾದ ಸೂಚನೆ ನೀಡಿದರೆ, ರಚನಾತ್ಮಕವಲ್ಲದ ಚಟುವಟಿಕೆಗಳಲ್ಲಿ ಮಕ್ಕಳಿಗೆ ಯಾವುದೇ ನಿರ್ದೇಶನಗಳನ್ನು ನೀಡುವುದಿಲ್ಲ. ಕ್ಯಾಮೆರಾಗಳನ್ನು ಅಳವಡಿಸಿದ ಕೊಠಡಿಗಳಲ್ಲಿ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಮಗು, ಪೋಷಕರು ಮತ್ತು ವೈದ್ಯರ ನಡುವಿನ ಸಂವಹನವನ್ನೂ ಚಿತ್ರೀಕರಿಸಲಾಗುತ್ತದೆ. ಇದನ್ನು ಕಂಪ್ಯೂಟರ್ ದೃಷ್ಟಿಯ ಮೂಲಕ ವಿಶ್ಲೇಷಿಸಲಾಗುತ್ತದೆ.

'ಈ ಅಧ್ಯಯನದಲ್ಲಿ ಮಕ್ಕಳ ವಿವರವನ್ನು ಗೋಪ್ಯವಾಗಿ ಇಡಲಾಗುತ್ತದೆ. ಆರಂಭಿಕ ಹಂತದಲ್ಲಿಯೇ ಸಮಸ್ಯೆ ಪತ್ತೆ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಮಕ್ಕಳ ಮುಖದ ಹಾವಭಾವ, ಕಣ್ಣಿನ ಸಂಪರ್ಕ, ಸಾಮಾಜಿಕ ಸಂವಹನ ಸೇರಿ ವಿವಿಧ 26 ಸಿದ್ಧ ಮಾದರಿಗಳನ್ನು ಅನುಸರಿಸಿ, ಕಂಪ್ಯೂಟರ್ ದೃಷ್ಟಿ ತಂತ್ರಜ್ಞಾನವು ವಿಶ್ಲೇಷಿಸಲಿದೆ. ಪುನರಾವರ್ತಿತ ವರ್ತನೆಗಳನ್ನೂ ಗುರುತಿಸಲಾಗುತ್ತದೆ' ಎಂದು ಸಂಶೋಧಕರು ತಿಳಿಸಿದರು.

ಸಾಮಾನ್ಯ ಮಕ್ಕಳ ಜತೆಗೆ ಸೇರ್ಪಡೆ

ಆಟಿಸಂ ಪತ್ತೆಯ ವೇಳೆ ರೋಗ ಲಕ್ಷಣ ಹೊಂದಿರುವ ಹಾಗೂ ಹೊಂದಿರದ ಮಕ್ಕಳನ್ನು ನಿಗದಿಪಡಿಸಲಾದ ಕೊಠಡಿಯಲ್ಲಿ ಇರಿಸಿಯೂ ಅಧ್ಯಯನ ನಡೆಸಲಾಗಿದೆ. ಇದು ಅಧ್ಯಯನದ ನಿಖರತೆಯನ್ನು ತಿಳಿಯಲು ಸಹಕಾರಿಯಾಗಿದೆ. ಸಂಶೋಧಕರ ಪ್ರಕಾರ ಈಗಾಗಲೇ ನಡೆಸಲಾದ ಅಧ್ಯಯನದಲ್ಲಿ ಶೇ 82ರಷ್ಟು ನಿಖರ ಫಲಿತಾಂಶ ಸಾಧ್ಯವಾಗಿದೆ. ಮುಂದಿನ ಒಂದು ವರ್ಷ ಕಂಪ್ಯೂಟರ್ ದೃಷ್ಟಿ ತಂತ್ರಜ್ಞಾನದ ನೆರವಿನಿಂದ ಈ ಬಗ್ಗೆ ಇನ್ನಷ್ಟು ಅಧ್ಯಯನ ನಡೆಸಿ, ಶೇ 100ರಷ್ಟು ನಿಖರ ಫಲಿತಾಂಶ ಹೊಂದುವ ಗುರಿಯನ್ನು ಸಂಶೋಧಕರು ಹೊಂದಿದ್ದಾರೆ.

ಇಂಧನ ಸಂರಕ್ಷಣೆ: ರಾಜ್ಯಕ್ಕೆ ಎರಡನೇ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಇಂಧನ ಸಂರಕ್ಷಣೆ ಪ್ರಶಸ್ತಿ 2024'ರಲ್ಲಿನ ರಾಜ್ಯ ಇಂಧನ ದಕ್ಷತೆಯ ಕಾರ್ಯಕ್ಷಮತೆ ಪ್ರಶಸ್ತಿಯ(ಎಸ್‌ಡಿಎ ಗ್ರೂಪ್1) ವಿಭಾಗದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ (ಕ್ರೆಡಲ್) ಎರಡನೇ ಬಹುಮಾನ ಪಡೆದುಕೊಂಡಿದೆ.

ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನದ ಅಂಗವಾಗಿ ದೆಹಲಿಯ ವಿಜ್ಞಾನ ಭವನದಲ್ಲಿ ಶನಿವಾರ (ಡಿ.14) ಬ್ಯೂರೊ ಆಫ್ ಎನರ್ಜಿ ಎಫಿಷಿಯೆನ್ಸಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

ರಾಜ್ಯದಾದ್ಯಂತ ಸುಸ್ಥಿರ ಇಂಧನ ಪದ್ಧತಿಗಳನ್ನು ಉತ್ತೇಜಿಸುವ ಕ್ರೆಡಲ್, ಈ ನಿಟ್ಟಿನಲ್ಲಿ ಅನುಷ್ಠಾನಗೊಳಿಸಿರುವ ಇಂಧನ ದಕ್ಷತೆ ಯೋಜನೆಗಳನ್ನು ಗುರುತಿಸಿ ಕೇಂದ್ರ ಇಂಧನ ಸಚಿವಾಲಯ ಈ ಪ್ರಶಸ್ತಿ ನೀಡಿದೆ.

ಇಂಧನ ದಕ್ಷತೆಗಾಗಿ ವಿವಿಧ ರಾಜ್ಯಗಳಲ್ಲಿ ಜಾರಿಗೊಳಿಸಿರುವ ಕಾರ್ಯಕ್ರಮಗಳ ಕುರಿತು ಆಯಾ ರಾಜ್ಯಗಳ ವಿವಿಧ ಇಲಾಖೆಗಳಿಂದ ಸಂಗ್ರಹಿಸಿದ ಮಾಹಿತಿ ಆಧರಿಸಿ ಈ ಪ್ರಶಸ್ತಿ ನೀಡಲಾಗುತ್ತದೆ. ಇಂಧನ ದಕ್ಷತೆಯಲ್ಲಿ ಉತ್ತಮ ಸಾಧನೆ ಮಾಡಿರುವ ಕರ್ನಾಟಕಕ್ಕೆ ಈ ಬಾರಿ ಎರಡನೇ ಬಹುಮಾನ ದೊರೆತಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಇಂಧನ ಸಚಿವ ಕೆ.ಜೆ.ಜಾರ್ಜ್, 'ಹವಾಮಾನ ಬದಲಾವಣೆ ಸವಾಲು ಎದುರಿಸುವಲ್ಲಿ ಇಂಧನ ಸಂರಕ್ಷಣೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಇಂಧನ ಸಂರಕ್ಷಣೆ, ಸ್ವಚ್ಛ ಮತ್ತು ಹಸಿರು ಇಂಧನದ ಉಪಕ್ರಮಗಳಿಗೆ ಸರ್ಕಾರ ಒತ್ತು ನೀಡುತ್ತದೆ' ಎಂದು ತಿಳಿಸಿದ್ದಾರೆ.



ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಅವರು ಪ್ರಶಸ್ತಿ ಸ್ವೀಕರಿಸಿದರು.

ಚಿತ್ರಾವಳಿ


'ಸಂಗೀತಧಾಮ' ಆಯೋಜಿಸಿದ್ದ 'ಸಂಗೀತಧಾಮದ 21ರ ಸಂಭ್ರಮ' ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಗೀತ ನಿರ್ದೇಶಕ ಎನ್‌.ಎಸ್‌. ಪ್ರಸಾದ್ ಅವರಿಗೆ ಭಾನುವಾರ 'ಸಂಗೀತ ಕೌಸ್ತುಭ' ಪ್ರಶಸ್ತಿ ನೀಡಿ ಗೌರವಿಸಲಾಯಿತು ಗೌರವಿಸಲಾಯಿತು. (ಎಡದಿಂದ) ನೃತ್ಯಗಾರ್ತಿ ಶ್ರೀ ಕಶ್ಯಪ್, ವೈದ್ಯೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಸಾಹಿತಿ ಮನು ಬಳಿಗಾರ್, ತಬಲಾ ವಾದಕ ಡಾ. ಸತೀಶ್ ಹಂಪಿಹೊಳಿ ಮತ್ತು ಸಂಗೀತ ಧಾಮದ ಅಧ್ಯಕ್ಷ ಮೃತ್ಯುಂಜಯ ದೊಡ್ಡವಾಡ ಉಪಸ್ಥಿತರಿದ್ದರು



ಕ್ರಿಯೇಟಿವ್ ಪುಸ್ತಕ ಮನೆ ಪ್ರಕಾಶನ ಭಾನುವಾರ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಪದ್ಮರಾಜ ದಂಡಾವತಿ ಅವರಿಗೆ ಕ್ರಿಯೇಟಿವ್ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಲಕ್ಷ್ಮಣ ವಿ.ಎ., ಕವಿ ಬಿ.ಆರ್. ಲಕ್ಷ್ಮಣರಾವ್, ಪತ್ರಕರ್ತ ಜೋಗಿ (ಗಿರೀಶ್ ರಾವ್ ಹತ್ವಾರ್) ಲೇಖಕ ಡಾ. ನಾ. ಸೋಮೇಶ್ವರ, ಕೆ. ಸತ್ಯನಾರಾಯಣ, ನರೇಂದ್ರ ರೈ ದೇರ್ಲ ಹಾಗೂ ಡಿ.ಎಸ್. ಚೌಗಲೆ ಉಪಸ್ಥಿತರಿದ್ದರು



ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಭಾನುವಾರ ಡಿವಿಜಿ ಬಳಗ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಜಿಎಲ್ ಸ್ವಾಮಿ ಅವರ 'ಹಸುರು ಹೊನ್ನು', ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ಇಂಗ್ಲಿಷ್ ಅನುವಾದದ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) 'ಹಸುರು ಹೊನ್ನು' ಪುಸ್ತಕದ ಅನುವಾದಕಿ ಜ್ಯೋತಿ ನಟರಾಜನ್, ನಿವೃತ್ತ ಪ್ರಾಧ್ಯಾಪಕ ಸಿ.ಆರ್. ನಾಗೇಂದ್ರನ್, ಎಸ್‌ವಿವೈಎಎಸ್‌ಎ ವಿಶ್ವವಿದ್ಯಾಲಯದ ಕುಲಪತಿ ಎಚ್.ಆರ್. ನಾಗೇಂದ್ರ, 'ಮಂಕುತಿಮ್ಮನ ಕಗ್ಗ' ಪುಸ್ತಕದ ಅನುವಾದಕ ಕೆ. ನಟರಾಜನ್, ಪ್ರತಿಷ್ಠಾನದ ಸಂಚಾಲಕ ಸಿ. ಕನಕರಾಜು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರಗಳು

ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಜಾಲಾ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ನಂತರ ಮಾತನಾಡಿದ ಅವರು, 'ಜಾಲಾ ಹೋಬಳಿ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಸ್ಮಶಾನಕ್ಕೆ ಜಾಗ ಕಾಯ್ದಿರಿಸುವುದು, ಪೋಡಿ ದುರಸ್ತಿ, ರಸ್ತೆ ಅಭಿವೃದ್ಧಿ ಸೇರಿದಂತೆ 50ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅವುಗಳನ್ನು ಪರಿಶೀಲಿಸಿ, ಶೀಘ್ರ ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಅಶೋಕನ್, ಜಾಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ.ಮಹೇಶ್‌ಕುಮಾರ್, ಕೆಡಿಪಿ ಸದಸ್ಯ ಬಿ.ಕೆ.ನಾರಾಯಣಸ್ವಾಮಿ, ಕೆಪಿಸಿಸಿ ಸದಸ್ಯ ಶೂಕೂರ್ ಅಹಮದ್ ಖಾನ್, ಕಾಂಗ್ರೆಸ್ ಮುಖಂಡರಾದ ಉದಯಶಂಕರ್, ಸಿಂಗಹಳ್ಳಿ ವೆಂಕಟೇಶ್, ಬೈರೇಗೌಡ, ಕೆಂಪೇಗೌಡ, ವಸಂತ್, ಬಿ.ಆರ್.ಪ್ರವೀಣ್, ಕೃಷ್ಣಮೂರ್ತಿ, ರಾಜಕುಮಾರ್, ದಯಾನಂದ್, ಲಕ್ಷ್ಮೀಪತಿ, ಡಿ.ಜಗನ್ನಾಥ್, ಬಿ.ಎಂ.ನಾಗೇಶ್, ಬಿ.ಕೆ. ರವೀಂದ್ರನಾಥಗೌಡ, ಶಾಂತಕುಮಾರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ನೆಲಮಂಗಲ: ವಿಜೃಂಭಣೆಯ ಪರಿಷೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಸೊಂಡೆಕೊಪ್ಪ ರಸ್ತೆಯಲ್ಲಿರುವ ಬಯಲು ಉದ್ಭವ ಗಣಪತಿಯ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮಾಗಡಿ, ರಾಮನಗರ, ದೊಡ್ಡಬಳ್ಳಾಪುರ, ಬೆಂಗಳೂರಿನ ಭಕ್ತರು ಪರಿಷೆಯಲ್ಲಿ ಭಾಗವಹಿಸಿದ್ದರು. ಶನಿವಾರ ರಾತ್ರಿ ಕಲ್ಯಾಣೋತ್ಸವ ನಡೆಯಿತು.

ಭಾನುವಾರ ಮಧ್ಯಾಹ್ನ ತೇರು ಎಳೆಯುತ್ತಿದ್ದಂತೆ ಭಕ್ತರ ಜಯಘೋಷ ಮುಗಿಲು ಮುಟ್ಟಿತು. ಸೂರು ಬಾಳೆಹಣ್ಣು ಎಸೆದು ಭಕ್ತಿ ಮೆರೆದರು.

ಶುಕ್ರವಾರದಿಂದಲೇ ಸೊಂಡೆಕೊಪ್ಪ ರಸ್ತೆಯ ಇಕ್ಕೆಲಗಳಲ್ಲಿ ಅಂಗಡಿಗಳನ್ನು ತೆರೆಯಲಾಗಿತ್ತು. ಮಕ್ಕಳು ವಿವಿಧ ಮನರಂಜನಾತ್ಮಕ ಕ್ರೀಡೆಗಳನ್ನು ಆಡಿ ಸಂಭ್ರಮಿಸಿದರು.

ಶನಿವಾರದಿಂದಲೇ ದೇವಸ್ಥಾನ ಟ್ರಸ್ಟ್ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಊಟ-ಉಪಚಾರ ವ್ಯವಸ್ಥೆ ಮಾಡಿದ್ದರು. 10 ಸಾವಿರಕ್ಕೂ ಹೆಚ್ಚು ಭಕ್ತರು ದಾಸೋಹ ಸ್ವೀಕರಿಸಿದರು.

ವಿವಿಧ ಸಂಘಟನೆಗಳು ಹಾಗೂ ಸಮುದಾಯಗಳು ಅಲ್ಲಲ್ಲಿ ಅರವಂಟಿಗೆಗಳನ್ನು ನಿರ್ಮಿಸಿಕೊಂಡು ಭಕ್ತರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಿದವು.


ನೆಲಮಂಗಲ ಪಟ್ಟಣದ ಸೊಂಡೆಕೊಪ್ಪ ರಸ್ತೆಯಲ್ಲಿರುವ ಬಯಲು ಉದ್ಭವ ಗಣಪತಿ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

ರೊಬೋಟಿಕ್ ಶಸ್ತ್ರಚಿಕಿತ್ಸೆ: ಮಂಡಿ ಚಿಪ್ಪು ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟಿಯೋ ಆರ್ಥರೈಟಿಸ್ (ಅಸ್ಥಿ ಸಂಧಿವಾತ) ಸಮಸ್ಯೆಯಿಂದ ಬಳಲುತ್ತಿದ್ದ ಕಲಬುರಗಿಯ ರವೀಂದ್ರ ಇತ್ತಂಗುಡಿ (57) ಎಂಬುವವರಿಗೆ ರೊಬೋಟಿಕ್ ಶಸ್ತ್ರಚಿಕಿತ್ಸೆ ನಡೆಸಿ ಮಂಡಿ ಚಿಪ್ಪು ಬದಲಾವಣೆ ಮಾಡಲಾಗಿದೆ ಎಂದು ನಾರಾಯಣ ಹೆಲ್ತ್ ಸಿಟಿ ಮೂಳೆ ರೋಗ ತಜ್ಞ ಡಾ.ಬಿ.ಎನ್.ಪ್ರಶಾಂತ್ ಹೇಳಿದರು.

'ಹಲವು ವರ್ಷಗಳಿಂದ ತೀವ್ರ ಮಂಡಿ ನೋವಿನಿಂದ ಬಳಲುತ್ತಿದ್ದು, ನಡೆದಾಡುವುದಕ್ಕೂ ಕಷ್ಟ ಪಡುತ್ತಿದ್ದ 3.5 ಅಡಿ ಎತ್ತರದ ರವೀಂದ್ರ ಅವರಿಗೆ ಸಣ್ಣ ಇಂಪ್ಲಾಂಟ್‌ನೊಂದಿಗೆ ಮಂಡಿ ಚಿಪ್ಪು ಬದಲಿಸಲಾಗಿದೆ. ರೋಗಿ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು, ಯಾರ ನೆರವೂ ಇಲ್ಲದೆ ಓಡಾಡುತ್ತಿದ್ದಾರೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಹಿಂದೆ ತೊಡೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ರೋಗಿಗೆ ಶಸ್ತ್ರಚಿಕಿತ್ಸೆ ನಡೆಸುವುದು ಸವಾಲಾಗಿತ್ತು. ಆರಂಭಿಕ ಹಂತದ ಪರೀಕ್ಷೆ ವೇಳೆ ರೋಗಿಗೆ ಮೊಣಕಾಲಿನ ನೋವು ವಿಪರೀತ ಇತ್ತು. ತೊಡೆಯ ಮೂಳೆಯು ಹೆಚ್ಚು ಅಸಮಾನತೆಯಿಂದ ಕೂಡಿರುವುದು ಹಾಗೂ ಮಂಡಿಯ ಚಲನವಲನಕ್ಕೆ ಪೂರಕವಾಗಿ ಇರಲಿಲ್ಲ ಎಂಬುದು ಪರೀಕ್ಷೆಗಳಿಂದ ಗೊತ್ತಾಯಿತು. ಇದನ್ನು ಸರಿಪಡಿಸಲು ಸಂಕೀರ್ಣವಾದ ಶಸ್ತ್ರಚಿಕಿತ್ಸೆಯೇ ಸೂಕ್ತ ಎಂಬುದನ್ನು ನಿರ್ಧರಿಸಲಾಯಿತು ಎಂದರು.

ಸಿ.ಟಿ. ಇಮೇಜಿಂಗ್ ಹಾಗೂ 3–ಡಿ ಮಾದರಿಗಳ ಮೂಲಕ ರೋಗಿಯ ಮಂಡಿಯ ಚಲನವಲನಗಳಿಗೆ ಅನುಕೂಲವಾಗಲು ಇಂಪ್ಲಾಂಟ್‌ಗಳನ್ನು ವಿನ್ಯಾಸಗೊಳಿಸಲಾಯಿತು. ಈ ಸುಧಾರಿತ ವಿಧಾನವು ರೋಗಿಯ ಕಾಲಿನ ಸಮಸ್ಯೆ ನಿವಾರಣೆಗೆ ಸಹಕಾರಿ ಆಯಿತು. ಚಿಕಿತ್ಸಾ ವೆಚ್ಚವೂ ದುಬಾರಿಯಲ್ಲ ಎಂದು ಹೇಳಿದರು.

ಮೂಳೆಗೆ ಸಂಬಂಧಿಸಿದ ಕಾಯಿಲೆ ಹಾಗೂ ಅಸ್ಥಿ ಸಂಧಿವಾತ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಆಧುನಿಕ ತಂತ್ರಜ್ಞಾನ ಬಳಸಿ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಇದರಿಂದ ಬಹುತೇಕ ಸಮಸ್ಯೆಗಳು ಬಗೆಹರಿದಿವೆ ಎಂದರು. ಗೋಷ್ಠಿಯಲ್ಲಿ ಡಾ. ಅಭಿನಂದನ್ ಎಸ್. ಪುನೀತ್ ಇದ್ದರು.



ಮಂಡಿ ಚಿಪ್ಪಿನ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿ ರವೀಂದ್ರ (ಮಧ್ಯದಲ್ಲಿರುವವರು) ಜತೆಗೆ ಚಿಕಿತ್ಸೆ ನೀಡಿದ ವೈದ್ಯರ ತಂಡ

ನವಶಿಲಾಯುಗದ ನೆಲೆ ಪಕ್ಕದ 'ಬೂದಿದಿಬ್ಬ' ನಾಶ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಸಂರಕ್ಷಿತ ತಾಣಗಳ' ವ್ಯಾಪ್ತಿಗೆ ಒಳಪಡುವ ಬಳ್ಳಾರಿ ಹೊರ ವಲಯದ ನವಶಿಲಾಯುಗದ ನೆಲೆ ಸಂಗನಕಲ್ಲು ಹಿರೇಗುಡ್ಡದ ಪಕ್ಕದಲ್ಲಿದ್ದ, 4 ಸಾವಿರದಿಂದ 5 ಸಾವಿರ ವರ್ಷಗಳ ಹಿಂದಿನ 'ಬೂದಿ ದಿಬ್ಬ' ಬಹುತೇಕ ನಾಶಗೊಂಡಿದೆ. ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಸ್ಥಳೀಯ ಅಧಿಕಾರಿಗಳು ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಳ್ಳಾರಿ ತಾಲ್ಲೂಕಿನ ಮೋಕಾ ಹೋಬಳಿಯ ಸಿರಿವಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೂದಿದಿಬ್ಬ ಇತ್ತು. ಈ ಪಟ್ಟಾ ಭೂಮಿಯು ವೆಂಕಟೇಶ್ವರಲು ಮತ್ತು ವೆಂಕಟರಾಯುಡು ಎಂಬುವವರ ಜಂಟಿ ಒಡೆತನದಲ್ಲಿದೆ. ಜಮೀನಿನಲ್ಲಿದ್ದ ಗುಂಡಿಯನ್ನು ಮುಚ್ಚಿ ಜಮೀನು ಸಮತಟ್ಟು ಮಾಡಲು ದಿಬ್ಬವನ್ನು ನಾಶ ಮಾಡಲಾಗಿದೆ.

ಕೂಡಲೇ ಸ್ಥಳಕ್ಕೆ ಭೇಟಿ ನೀಡಿದ್ದ ಬಳ್ಳಾರಿಯ 'ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪ್ರಾಗೈತಿಹಾಸಿಕ ವಸ್ತುಸಂಗ್ರಹಾಲಯ'ದ ಸದಸ್ಯರು, ದಿಬ್ಬ ನೆಲಸಮವಾಗಿರುವುದನ್ನು ಕಂಡು ದಿಗ್ಭ್ರಮೆಗೊಂಡರು. ಈ ಕುರಿತು ಜಿಲ್ಲಾಡಳಿತ, ರಾಜ್ಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ವಿಷಯ ತಿಳಿಸಿದ್ದಾರೆ.

'ಬೂದಿದಿಬ್ಬದ ಮಹತ್ವ ತಿಳಿಯದೇ ಜಮೀನು ಮಾಲೀಕರು ಅದನ್ನು ಧ್ವಂಸಗೊಳಿಸಿದ್ದಾರೆ. ದಿಬ್ಬ ಬಹುತೇಕ ನಾಶಗೊಂಡಿದೆ' ಎಂದು ಅಧಿಕಾರಿಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಮಹಿಳೆಯರ ಆಗ್ರಹ ಸಮಾವೇಶದ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಪ್ರಸ್ತಾವನೆ: ಗುಂಡಮ್ಮ, ಅಧ್ಯಕ್ಷತೆ: ಶೋಭಾ ಎಸ್., 'ಮಹಿಳಾ ಘನತೆ-ಮುಂದಿನ ಸವಾಲುಗಳು' ಗೋಷ್ಠಿಯ ವಿಷಯ ಮಂಡನೆ: ನಡಹಳ್ಳಿ ವಸಂತ್, ಮಂಜುಳಾ ಎಂ.ಎನ್., ನಿರ್ವಹಣೆ: ಮಧುಲತಾ ಗೌಡರ್, 'ಮಹಿಳಾ ಸ್ವಾಸ್ಥ್ಯ-ವ್ಯವಸ್ಥೆಯ ಕರಾಳತೆ' ಗೋಷ್ಠಿಯ ಮಂಡನೆ: ಡಾ. ಸುಧಾ ಕಾಮತ್, ರಮಾ ಅಯ್ಯರ್, ನಿರ್ವಹಣೆ: ಕೆ. ಹೇಮಾವತಿ, ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30


ಬರಗೂರು ರಾಮಚಂದ್ರಪ್ಪ

ಅಂಬೇಡ್ಕರ್ ಪರಿನಿಬ್ಬಾಣದ ದಿನದ ಅಂಗವಾಗಿ 'ಶೋಷಿತ ಸಮುದಾಯಗಳ ಮಂಥನಾ' ಸಮಾವೇಶ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಎನ್. ವೆಂಕಟೇಶ್, ನೂರ್ ಶ್ರೀಧರ್, ಆಯೋಜನೆ: ಕರ್ನಾಟಕ ಜನಶಕ್ತಿ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

'ನವೀಕರಿಸಬಹುದಾದ ಶಕ್ತಿಯ ಮೂಲಗಳು' ಉಪನ್ಯಾಸದ ಉದ್ಘಾಟನೆ: ಅಮುಲ್ ರಾಜ್ ಕ್ರಿಸ್ಪಿನ್, ಅತಿಥಿ: ಮರಿಯಾ ಸೆಲ್ವಿ, ಅಧ್ಯಕ್ಷತೆ: ನಾ. ಶ್ರೀಧರ್, ಉಪನ್ಯಾಸ: ಮಾಲತೇಶ ಅಕ್ಕೂರ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ನಗರ ಜಿಲ್ಲೆ ಗಾಂಧಿನಗರ ವಿಧಾನಸಭಾ ಕ್ಷೇತ್ರ, ಸ್ಥಳ: ಸೇಂಟ್ ಫಿಲೋಮಿನಾಸ್ ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆ, ಮಧ್ಯಾಹ್ನ 2

'ಶ್ರೀ ಸಿದ್ಧಗಂಗಾ ಸಿರಿ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಎಲ್. ರೇವಣಸಿದ್ಧಯ್ಯ, ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪುರಸ್ಕೃತರು: ಕುಂ. ವೀರಭದ್ರಪ್ಪ, ಅತಿಥಿ: ಬಿ.ಎಲ್. ಶಂಕರ್, ಅಧ್ಯಕ್ಷತೆ: ಎಸ್. ಮಹಾದೇವಯ್ಯ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಲಂಡನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30


ಕುಂ.ವೀರಭದ್ರಪ್ಪ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

'ಹೋಟೆಲ್ ಉದ್ಯಮಕ್ಕೆ ರಕ್ಷಣೆ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿವಿಧ ಭಾಗಗಳಲ್ಲಿ ಹೋಟೆಲ್ ಹಾಗೂ ಬೇಕರಿ ಉದ್ಯಮಿಗಳ ಮೇಲೆ ದೌರ್ಜನ್ಯ, ಕೊಲೆ, ಹಲ್ಲೆ ಸೇರಿದಂತೆ ಅಪರಾಧಿಕ ಕೃತ್ಯಗಳು ಹೆಚ್ಚುತ್ತಿವೆ. ಈ ಅಪರಾಧಿಕ ಕೃತ್ಯಗಳನ್ನು ನಿಯಂತ್ರಿಸಲು ಸರ್ಕಾರ ಮತ್ತು ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಆಗ್ರಹಿಸಿದ್ದಾರೆ.

'ಮಂಡ್ಯ ಜಿಲ್ಲೆಯ ಪ್ರವಾಸಿ ತಾಣ ಕೆಆರ್‌ಎಸ್‌ನಲ್ಲಿ ಬೇಕರಿ ಮಾಲೀಕ ಚೇತನ್ ಅವರನ್ನು ಇತ್ತೀಚೆಗೆ ರೌಡಿಗಳು ಮಾರಾಕಸ್ತ್ರಗಳಿಂದ ಇರಿದು ಕೊಲೆ ಮಾಡಿರುವ ಘಟನೆ ಹೋಟೆಲ್ ಮಾಲೀಕರಲ್ಲಿ ಆತಂಕ ಉಂಟುಮಾಡಿದೆ. ರೌಡಿಗಳು ಹೋಟೆಲ್ ಮತ್ತು ಬೇಕರಿ ಮಾಲೀಕರನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದಾರೆ. ಉದ್ಯಮಿಗಳು ಹಣ ನೀಡದಿದ್ದರೆ ಅವರ ಮೇಲೆ ದೈಹಿಕ ಹಲ್ಲೆ ಮಾಡುತ್ತಾರೆ. ಕೊಲೆ ಬೆದರಿಕೆಯನ್ನೂ ಹಾಕುತ್ತಾರೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಹೋಟೆಲ್ ಮತ್ತು ಬೇಕರಿ ಮಾಲೀಕರು ಸ್ಥಳೀಯ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಟ್ರೇಡ್ ಪರವಾನಗಿ, ಜಿಎಸ್‌ಟಿ ಹೀಗೆ ನಾನಾ ರೂಪದಲ್ಲಿ ಪ್ರತಿವರ್ಷ ಕೋಟ್ಯಂತರ ರೂಪಾಯಿ ತೆರಿಗೆ ಪಾವತಿಸುತ್ತಿದ್ದಾರೆ. ಸ್ಥಳೀಯವಾಗಿ ಪ್ರವಾಸೋದ್ಯಮ, ಉದ್ಯೋಗ ಸೃಷ್ಟಿ ಮೂಲಕ ದೇಶದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಆದರೂ ನಮ್ಮ ಜೀವಕ್ಕೆ ರಕ್ಷಣೆ ಒದಗಿಸುತ್ತಿಲ್ಲ' ಎಂದು ದೂರಿದ್ದಾರೆ.

'ಬೇಕರಿ ಉದ್ಯಮಿ ಚೇತನ್ ಅವರನ್ನು ಕೊಲೆ ಮಾಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ರಾಜ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸಂಘದ ನೇತೃತ್ವದಲ್ಲಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ಮಾಡಲಾಗುವುದು' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಬಿಟಿಸಿಗೆ ಅಧ್ಯಕ್ಷರಾಗಿ ಮಂಜುನಾಥ್



ಬೆಂಗಳೂರು: ನಗರದ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಅಧ್ಯಕ್ಷರಾಗಿ ಆರ್. ಮಂಜುನಾಥ್ ರಮೇಶ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಶನಿವಾರ ಸಂಜೆ ನಡೆದ ಆಡಳಿತ ಸಮಿತಿ ಸದಸ್ಯರ ಸಭೆಯಲ್ಲಿ ಮಂಜುನಾಥ್ ರಮೇಶ್ ಅವರು 2024-25ರ ಸಾಲಿಗೆ ಅಧ್ಯಕ್ಷ ಹಾಗೂ ಸೀನಿಯರ್ ಸ್ಟೀವರ್ಡ್ ಆಗಿ ಆಯ್ಕೆಯಾದರು ಎಂದು ಪ್ರಕಟಣೆ ತಿಳಿಸಿದೆ.

ಘಟನೆಯ ಕುರಿತು ದೂರು– ಪ್ರತಿದೂರು ದಾಖಲು • ಮಹಿಳೆ ಬಂಧನಕ್ಕೆ ಆಗ್ರಹಿಸಿ ಚಾಲಕರ ಪ್ರತಿಭಟನೆ

ಬಿಎಂಟಿಸಿ ಚಾಲಕನ ಥಳಿಸಿದ ಮಹಿಳೆ

ಪ್ರಜಾವಾಣಿ ವಾರ್ತೆ


ಪೀಣ್ಯದ 14ನೇ ಕ್ರಾಸ್ ಡಿಪೊದಲ್ಲಿ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕರು ಪ್ರತಿಭಟನೆ ನಡೆಸಿದರು

ಬೆಂಗಳೂರು: ಸ್ಕೂಟಿಗೆ ಬಸ್ ತಾಗಿದ್ದಕ್ಕೆ ಕೋಪಗೊಂಡ ಮಹಿಳೆಯೊಬ್ಬರು ಬಿಎಂಟಿಸಿ ಬಸ್ ಚಾಲಕನ ಮೇಲೆ ಹಲ್ಲೆ ನಡೆಸಿದ ಘಟನೆ ನಗರದ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಘಟನೆ ಸಂಬಂಧ ಬಸ್ ಚಾಲಕ ಅಮರೇಶ್, ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯಲ್ಲಿ ಮಹಿಳೆಯ ವಿರುದ್ಧ ದೂರು ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ಸವಿತಾ ಅವರು ಚಾಲಕನ ವಿರುದ್ಧ ದೂರು ನೀಡಿದ್ದಾರೆ.

ಘಟನೆಯ ಬಗ್ಗೆ ದೂರು, ಪ್ರತಿ ದೂರು ದಾಖಲಿಸಿಕೊಂಡ ಪೊಲೀಸರು, ಚಾಲಕನ ಮೇಲೆ ಹಲ್ಲೆ ನಡೆಸಿದ ಸವಿತಾ ಅವರನ್ನು ಬಂಧಿಸಿ, ಬಳಿಕ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಈ ನಡುವೆ, ಚಾಲಕನ ಮೇಲೆ ಹಲ್ಲೆ ನಡೆಸಿದ ಮಹಿಳೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಭಾನುವಾರ ಪೀಣ್ಯ 14ನೇ ಕ್ರಾಸ್ ಡಿಪೊದಲ್ಲಿ ಎಲೆಕ್ಟ್ರಿಕ್ ಬಸ್ ಚಾಲಕರು ಪ್ರತಿಭಟನೆ ನಡೆಸಿದರು.

'ಡಿಪೊದಲ್ಲಿರುವ 120 ಬಸ್‌ಗಳು ಹೊರಗೆ ಹೋಗಲು ಬಿಡುವುದಿಲ್ಲ. ಕರ್ತವ್ಯಕ್ಕೂ ಹಾಜರಾಗುವುದಿಲ್ಲ. ನ್ಯಾಯ ಬೇಕು' ಎಂದು ಚಾಲಕರು ಪಟ್ಟುಹಿಡಿದರು.

'ಹಲ್ಲೆಯಿಂದಾಗಿ ಚಾಲಕ ಅಮರೇಶ್ ಅವರ ಸ್ಥಿತಿ ಗಂಭೀರವಾಗಿದೆ. ನಮಗೆ ರಕ್ಷಣೆ ಇಲ್ಲದಂತಾಗಿದೆ. ಪದೇಪದೇ ಚಾಲಕರು ಮತ್ತು ನಿರ್ವಾಹಕರ ಮೇಲೆ ಹಲ್ಲೆ ಪ್ರಕರಣಗಳು ನಡೆಯುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿದರು.

ಹಿರಿಯ ಅಧಿಕಾರಿಗಳು ಪ್ರತಿಭಟನಕಾರರ ಜತೆ ಮಾತುಕತೆ ನಡೆಸಿದರು. ಸೂಕ್ತ ಕ್ರಮ ಕೈಗೊಳ್ಳುವ ಸಂಬಂಧ ಪೊಲೀಸರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು. ಬಳಿಕ ಪ್ರತಿಭಟನೆಯನ್ನು ಹಿಂತೆಗೆದುಕೊಂಡರು.

ಘಟನೆ ವಿವರ: ಜಾಲಹಳ್ಳಿ ಕ್ರಾಸ್‌ನಿಂದ ಕೆ.ಆರ್.ಮಾರುಕಟ್ಟೆ ಕಡೆ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್ ಸುಮನಹಳ್ಳಿ ಸೇತುವೆ ಬಳಿ ಸ್ಕೂಟಿಗೆ ತಾಗಿದೆ. ಮಹಿಳೆ ಸ್ಕೂಟಿ ಸಮೇತ ರಸ್ತೆಗೆ ಬಿದ್ದಿದ್ದಾರೆ. ಇದರಿಂದ ಕೋಪಗೊಂಡ ಅವರು, ಬಸ್‌ನೊಳಗೆ ನುಗ್ಗಿ ಚಾಲಕನ ಮೇಲೆ ಹಲ್ಲೆ ನಡೆಸಿದರು. ಮತ್ತೊಬ್ಬ ವ್ಯಕ್ತಿಯೂ ಹಲ್ಲೆ ನಡೆಸಿದರು. ಬಳಿಕ ಸ್ಥಳೀಯರು ಮಹಿಳೆಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು.

'ನನ್ನ ಸ್ಕೂಟಿಯಲ್ಲಿ ಮಕ್ಕಳನ್ನು ಕರೆದುಕೊಂಡು ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಹಿಂದಿನಿಂದ ಬಸ್‌ನ ಚಾಲಕ ಪದೇಪದೇ ಹಾರ್ನ್ ಮಾಡುತ್ತಿದ್ದರು. ಉದ್ದೇಶಪೂರ್ವಕವಾಗಿ ನನ್ನ ವಾಹನಕ್ಕೆ ಡಿಕ್ಕಿ ಹೊಡೆದರು. ನಾನು ಕೆಳಗೆ ಬಿದ್ದೆ. ಹಲವು ಬಾರಿ ಈ ಜಾಗದಲ್ಲಿ ಅಪಘಾತಗಳು ಸಂಭವಿಸಿವೆ. ಜತೆಯಲ್ಲಿ ಮಕ್ಕಳು ಇದ್ದರು. ಅವರಿಗೆ ಏನಾದರೂ ಆಗಿದ್ದರೆ ಎಂಬ ಭಯದಿಂದ ಅವರ ಮೇಲೆ ಹಲ್ಲೆ ನಡೆಸಿದೆ. ಠಾಣೆಗೆ ಕರೆದರೂ ಚಾಲಕ ಬರಲು ಒಪ್ಪಲಿಲ್ಲ' ಎಂದು ಮಹಿಳೆಗೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಅಪರಾಧ ಸುದ್ದಿ

ಲಾಂಗ್ ತೋರಿಸಿ ಮೊಬೈಲ್ ಫೋನ್ ಕಸಿದು ಪರಾರಿ

ಬೆಂಗಳೂರು: ವಾಯುವಿಹಾರ ಮಾಡುತ್ತಿದ್ದ ಯುವಕನಿಗೆ ಲಾಂಗ್ ತೋರಿಸಿ ಮೊಬೈಲ್ ಕಸಿದು ಪರಾರಿಯಾಗುತ್ತಿದ್ದ ಕಳ್ಳರನ್ನು ಹಿಡಿಯಲು ನಗರ ಪಾಲಿಕೆ ಮಾಜಿ ಸದಸ್ಯರೊಬ್ಬರು ಯತ್ನಿಸಿದ್ದಾರೆ.

ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಎಚ್.ಆರ್.ಬಿ.ಆರ್ ಲೇಔಟ್‌ನ ದಾರಿಯಲ್ಲಿ ವಾಯುವಿಹಾರ ಮಾಡುತ್ತಿದ್ದ ಯುವಕನನ್ನು ಬೆದರಿಸಿ, ಮೊಬೈಲ್ ಕಸಿದು ಪರಾರಿಯಾಗುತ್ತಿದ್ದರು. ಆ ವೇಳೆ ಜಿಮ್‌ಗೆ ಹೊರಟಿದ್ದ ನಗರ ಪಾಲಿಕೆ ಮಾಜಿ ಸದಸ್ಯ ಗಣೇಶ್ ರೆಡ್ಡಿ ಅವರು, ತಮ್ಮ ಸ್ಕಾರ್ಪಿಯೊ ವಾಹನದಲ್ಲಿ ಕಳ್ಳರ ಬೈಕ್ ಹಿಂಬಾಲಿಸಿಕೊಂಡು ಹೋಗಿ ಗುದ್ದಿದ್ದಾರೆ.

ಕೆಳಗೆ ಬಿದ್ದ ಕಳ್ಳರು ಬೈಕ್ ಬಿಟ್ಟು ಓಡಿದರು. ಐದು ನಿಮಿಷದ ಬಳಿಕ ಮತ್ತೆ ವಾಪಸ್ ವಾಪಸ್ ಬಂದು, ಲಾಂಗ್ ತೋರಿಸಿ ಬೆದರಿಸಿ, ಮೊಬೈಲ್ ಎಸೆದು ಬೈಕ್ ತೆಗೆದುಕೊಂಡು ಹೋದರು.

ಈ ಎಲ್ಲಾ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ರಸ್ತೆ ಅಪಘಾತ: ಇಬ್ಬರು ಸಾವು



ಬೆಂಗಳೂರು: ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಗಾರ್ಮೆಂಟ್ ಉದ್ಯೋಗಿ ಸೇರಿ ಇಬ್ಬರು ಮೃತಪಟ್ಟಿರುವ ಘಟನೆ ನಗರದಲ್ಲಿ ಸಂಭವಿಸಿದೆ.

ಹೊಸ ರಸ್ತೆ ಹಾಗೂ ಕೋನಪ್ಪನ ಅಗ್ರಹಾರ ಜಂಕ್ಷನ್ ಸಮೀಪ ಕಾರು ಮತ್ತು ದ್ವಿಚಕ್ರ ವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಗಾರ್ಮೆಂಟ್ಸ್ ಉದ್ಯೋಗಿ ಮೃತಪಟ್ಟಿದ್ದಾರೆ.

ಗೋವಿಂದಶೆಟ್ಟಿ ಪಾಳ್ಯದ ನಿವಾಸಿ ನಾಗೇಶ್ (30) ಮೃತ ವ್ಯಕ್ತಿ. ಕಾರ್ಯನಿಮಿತ್ತ ಭಾನುವಾರ ಬೆಳಗಿನ ಜಾವ 4 ಗಂಟೆಗೆ ತಮ್ಮ ದ್ವಿಚಕ್ರ ವಾಹನದಲ್ಲಿ ಹೋಗುವಾಗ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ.

ತೀವ್ರವಾಗಿ ಗಾಯಗೊಂಡ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಕ್ಯಾಂಟರ್ ಡಿಕ್ಕಿ: ಕ್ಯಾಂಟರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಕೆ.ಆರ್.ಪುರಂ ಮೆಟ್ರೊ ನಿಲ್ದಾಣ ಬಳಿ ನಡೆದಿದೆ.

ಎ.ನಾರಾಯಣಪುರ ನಿವಾಸಿ ಮಾರ್ವಿನ್ ಆಂಡ್ರೊ (38) ಮೃತ ವ್ಯಕ್ತಿ. ಮಾರತ್ ಹಳ್ಳಿಯಲ್ಲಿರುವ ಖಾಸಗಿ ಕಂಪನಿಯಲ್ಲಿ ಕೆಲಸ ಮುಗಿಸಿಕೊಂಡು ಮಾರತ್ ಹಳ್ಳಿಯಲ್ಲಿರುವ ಬಿಎಂಟಿಸಿ ಬಸ್ ಮೂಲಕ ಕೆ.ಆರ್.ಪುರಂ ಮೆಟ್ರೊ ನಿಲ್ದಾಣ ಬಳಿ ರಸ್ತೆಬದಿ ನಿಂತಿದ್ದ ಅವರಿಗೆ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ.

ತೀವ್ರವಾಗಿ ಗಾಯಗೊಂಡ ಅವರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಮಾರತ್ ಹಳ್ಳಿ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಕ್ಯಾಂಟರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸುದ್ದಿ 2 ನಿಮಿಷ

ಇಂದು 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆ

ಬೆಂಗಳೂರು: ಏಳರಿಂದ ಹತ್ತನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ 'ಪ್ರಜಾವಾಣಿ' ಹಮ್ಮಿಕೊಂಡಿರುವ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯ ಬೆಂಗಳೂರು ವಲಯ ಮಟ್ಟದ ಸ್ಪರ್ಧೆಯು ಸೋಮವಾರ (ಡಿ.16) ಬೆಳಿಗ್ಗೆ 9ರಿಂದ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಯುವಪಥದ 'ವಿವೇಕ' ಸಭಾಂಗಣದಲ್ಲಿ ನಡೆಯಲಿದೆ.

ವಲಯ ಮಟ್ಟದಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಬೆಂಗಳೂರು ನಗರ ಮತ್ತು ಸುತ್ತ-ಮುತ್ತಲಿನ ಜಿಲ್ಲೆಗಳ 7ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳು-ವಿದ್ಯಾರ್ಥಿನಿಯರು ಭಾಗವಹಿಸಬಹುದಾಗಿದೆ.

ಸ್ಥಳದಲ್ಲೇ ನೋಂದಣಿಗೂ ಅವಕಾಶ: 'ವಿವೇಕ' ಸಭಾಂಗಣಕ್ಕೆ ಬಂದ ಬಳಿಕವೂ ನೋಂದಣಿ ಮಾಡಿಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಸ್ಥಳದಲ್ಲೇ ನೋಂದಣಿ ಮಾಡಿ ಸ್ಪರ್ಧಿಸಬಹುದು.

ಆಸಕ್ತರಿಗೆ ಉಚಿತ ಪ್ರವೇಶ ನೀಡಲಾಗಿದೆ. ಶಾಲೆಯ ಸಮ್ಮತಿಯೊಂದಿಗೆ ಕ್ಯೂಆರ್ ಕೋಡ್ ಬಳಸಿ ನೋಂದಣಿ ಮಾಡಿಕೊಳ್ಳಬಹುದು. ವಿಜೇತರು ರಾಜ್ಯಮಟ್ಟದಲ್ಲಿ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ಕಾಡಾನೆ ತುಳಿದು ರೈತ ಸಾವು

ಕನಕಪುರ: ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ ಹೆಗ್ಗನೂರುದೊಡ್ಡಿ ಗ್ರಾಮದಲ್ಲಿ ರಾಗಿ ಬಣವೆ ಕಾಯುತ್ತಿದ್ದ ರೈತರೊಬ್ಬರ ಮೇಲೆ ಶನಿವಾರ ರಾತ್ರಿ ಕಾಡಾನೆ ದಾಳಿ ನಡೆಸಿ ಕೊಂದುಹಾಕಿದೆ. ಕರಿಯಪ್ಪ (75) ಮೃತ ರೈತ. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಗ್ರಾಮಕ್ಕೆ ಹೊಂದಿಕೊಂಡಂತಿರುವ ಜಮೀನಿನಲ್ಲಿರುವ ರಾಗಿ ಬೆಳೆದಿದ್ದ ಕರಿಯಪ್ಪ, ಕಟಾವು ಮಾಡಿ ಬಣವೆ ಹಾಕಿದ್ದರು. ಕಾಡು ಪ್ರಾಣಿಗಳು ಬಣವೆಗೆ ಹಾನಿ ಮಾಡದಂತೆ ನೋಡಿಕೊಳ್ಳಲು ಜಮೀನಿನ ಬಳಿಯೇ ಮಲಗಿ ಕಾವಲು ಕಾಯುತ್ತಿದ್ದರು. ರಾತ್ರಿ 1.30ರ ಸುಮಾರಿಗೆ ಜಮೀನಿಗೆ ಬಂದಿರುವ ಕಾಡಾನೆ ಕರಿಯಪ್ಪ ಮೇಲೆ ದಾಳಿ ನಡೆಸಿ ತುಳಿದು, ಅನತಿ ದೂರಕ್ಕೆ ಎಸೆದು ಹೋಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಗುಂಪು ಹಲ್ಲೆ ವ್ಯಕ್ತಿ ಸಾವು

ಮುಜಾಫರ್‌ಪುರ್ (ಬಿಹಾರ) (ಪಿಟಿಐ): ಟ್ರ್ಯಾಕ್ಟರ್ ಕಳವು ಮಾಡುತ್ತಿದ್ದ ಎಂಬ ಶಂಕೆಯ ಮೇಲೆ ಗುಂಪೊಂದು ತೀವ್ರವಾಗಿ ಥಳಿಸಿದ್ದರಿಂದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಮೃತನನ್ನು ಶಂಭು ಸಾಹ್ನಿ ಎಂದು ಗುರುತಿಸಲಾಗಿದೆ. 'ಯೋಗಿಯಾ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಹಲ್ಲೆಗೆ ಸಂಬಂಧಿಸಿ ಟ್ರ್ಯಾಕ್ಟರ್ ಮಾಲೀಕ ಸೇರಿ ಇಬ್ಬರನ್ನು ಬಂಧಿಸಲಾಗಿದೆ. ಟ್ರ್ಯಾಕ್ಟರ್ ಮಾಲೀಕ, ಇತರರು ಒಗ್ಗೂಡಿ ಶಂಭು ಅವರನ್ನು ಥಳಿಸಿದ್ದರು. ತನಿಖೆ ನಡೆದಿದೆ' ಎಂದು ಔರೈ ಠಾಣಾಧಿಕಾರಿ ಅಭಿಜಿತ್ ಅಲ್ಕೇಶ್ ತಿಳಿಸಿದ್ದಾರೆ.

'ವರದಕ್ಷಿಣೆ ಕಿರುಕುಳ: ಪತಿಯ ಗೆಳತಿ ಮೇಲೆ ಕ್ರಮ ಸಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪತಿಯ ಗೆಳತಿ ಆಗಿದ್ದಿದ್ದಕ್ಕೆ ಅಥವಾ ಆತನ ಜೊತೆ ಪ್ರಣಯ ಸಂಬಂಧ ಹೊಂದಿದ್ದುದಕ್ಕೆ ಆಕೆಯ ವಿರುದ್ಧ ಆತನ ಪತ್ನಿಯು ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 498(ಎ) ಅಡಿಯಲ್ಲಿ ವರದಕ್ಷಿಣೆ ಕಿರುಕುಳದ ಆರೋಪ ಹೊರಿಸಿ ಕಾನೂನು ಕ್ರಮಕ್ಕೆ ಮುಂದಾಗಲು ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ವರದಕ್ಷಿಣೆ ಕಿರುಕುಳದ ಆರೋಪದ ಅಡಿಯಲ್ಲಿ ವ್ಯಕ್ತಿಯೊಬ್ಬರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಬೇಕು ಎಂದಾದರೆ ಪತಿಯ ಜೊತೆ ಆ ವ್ಯಕ್ತಿಯು ರಕ್ತಸಂಬಂಧ, ವೈವಾಹಿಕ ಸಂಬಂಧ ಅಥವಾ ದತ್ತು ಮೂಲಕ ಬರುವ ಸಂಬಂಧ ಹೊಂದಿರಬೇಕು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

2021ರ ಏಪ್ರಿಲ್ 12ರಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶವೊಂದನ್ನು ವಿಭಾಗೀಯ ಪೀಠವು ರದ್ದುಪಡಿಸಿದೆ. ಐಪಿಸಿಯ ಸೆಕ್ಷನ್ 498(ಎ), 504 ಮತ್ತು 109 ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆಯ ಸೆಕ್ಷನ್ 3 ಮತ್ತು 4ರ ಅಡಿಯಲ್ಲಿ ತಮ್ಮ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಹಾಗೂ ನಂತರದ ದೋಷಾರೋಪ ಪಟ್ಟಿಯನ್ನು ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ದ್ವಿಚಕ್ರ ವಾಹನಗಳ ಸಂಖ್ಯೆ ಹೆಚ್ಚಳ • ಇಳಿಕೆಯಾದ 4 ಚಕ್ರ ವಾಹನಗಳ ಖರೀದಿ

ಎಲೆಕ್ಟ್ರಿಕ್ ವಾಹನ ನೋಂದಣಿ ತುಸು ಇಳಿಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಪರಿಸರಕ್ಕೆ ಪೂರಕವಾದ, ಇಂಧನ ವೆಚ್ಚವೂ ಕಡಿಮೆ ಇರುವ ಎಲೆಕ್ಟ್ರಿಕ್ ವಾಹನಗಳ ನೋಂದಣಿ ಪ್ರಮಾಣವು ಕಳೆದ ವರ್ಷಕ್ಕೆ ಹೋಲಿಸಿದರೆ 2024ರಲ್ಲಿ ತುಸು ಇಳಿಕೆಯಾಗಿದೆ.

2023ರಲ್ಲಿ ಏಪ್ರಿಲ್ 1ರಿಂದ ನ. 30ರವರೆಗೆ 8.41 ಲಕ್ಷ ದ್ವಿಚಕ್ರ ವಾಹನಗಳು. 1.84 ಲಕ್ಷ ನಾಲ್ಕುಚಕ್ರ ವಾಹನಗಳು ನೋಂದಣಿಯಾಗಿದ್ದವು. 2024ರಲ್ಲಿ ಇದೇ ಅವಧಿಯಲ್ಲಿ 8.42 ಲಕ್ಷ ದ್ವಿಚಕ್ರವಾಹನಗಳು, 1.74 ಲಕ್ಷ ನಾಲ್ಕು ಚಕ್ರ ವಾಹನಗಳು ನೋಂದಣಿಯಾಗಿವೆ. ದ್ವಿಚಕ್ರ ವಾಹನಗಳು ಒಂದು ಸಾವಿರದಷ್ಟು ಅಧಿಕವಾಗಿದ್ದರೆ, ನಾಲ್ಕು ಚಕ್ರ ವಾಹನಗಳು 10 ಸಾವಿರದಷ್ಟು ಕಡಿಮೆಯಾಗಿವೆ.

'ರಾಜ್ಯದಲ್ಲಿ 3.5 ಕೋಟಿ ವಾಹನಗಳಿದ್ದು, ಅದರಲ್ಲಿ ಶೇ 10ರಷ್ಟು ವಾಹನಗಳು ಎಲೆಕ್ಟ್ರಿಕ್ ಆಗಿವೆ. ಸಾವಿರ ಲೆಕ್ಕದಲ್ಲಿ ನೋಂದಣಿ ಹೆಚ್ಚಳ ಅಥವಾ ಕಡಿಮೆ ಇರುವುದು ಸಹಜ. ಈಗ ಪ್ರತಿವರ್ಷ 12 ಲಕ್ಷಕ್ಕೂ ಅಧಿಕ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು, 2.75 ಲಕ್ಷಕ್ಕೂ ಅಧಿಕ ನಾಲ್ಕು ಚಕ್ರ ವಾಹನಗಳು ನೋಂದಣಿಯಾಗುತ್ತಿವೆ. ಇದು ಕಡಿಮೆ ಸಂಖ್ಯೆಯಲ್ಲ. ಕೆಲವೇ ವರ್ಷಗಳಲ್ಲಿ ಒಟ್ಟು ವಾಹನಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಯೇ ಅಧಿಕ ಇರಲಿದೆ' ಎಂದು ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ 'ಪ್ರಜಾವಾಣಿ'ಗೆ ತಿಳಿಸಿದರು.

ತೆರಿಗೆಯೇ ಇಲ್ಲ: ಬಸ್, ಆಟೊ, ಕಾರು ಸಹಿತ ವಾಣಿಜ್ಯ ಬಳಕೆಗೆ ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಿದರೆ ಪ್ರತಿ ವರ್ಷ ತೆರಿಗೆ ಕಟ್ಟುವ ಪ್ರಮೇಯ ಕೂಡ ಇರುವುದಿಲ್ಲ. ಖರೀದಿ ಮಾಡುವಾಗಲೂ ₹25 ಲಕ್ಷಕ್ಕಿಂತ ಅಧಿಕ ಬೆಲೆಯ ಕಾರುಗಳಿಗೆ ಮಾತ್ರ ಒಟ್ಟು ಬೆಲೆಯ ಶೇ 10ರಷ್ಟು ಪಾವತಿ ಮಾಡಬೇಕಾಗುತ್ತದೆ ಎಂದು ಸಿ. ಮಲ್ಲಿಕಾರ್ಜುನ ಮಾಹಿತಿ ನೀಡಿದರು.

ಚಾರ್ಜಿಂಗ್ ಪಾಯಿಂಟ್: ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಪಾಯಿಂಟ್‌ನಲ್ಲಿ ದೇಶದಲ್ಲಿ ಕರ್ನಾಟಕವೇ ಮೊದಲ ಸ್ಥಾನದಲ್ಲಿದೆ. 5,765 ಚಾರ್ಜಿಂಗ್ ಪಾಯಿಂಟ್‌ಗಳಿದ್ದು, ಅದರಲ್ಲಿ ಬೆಂಗಳೂರಿನಲ್ಲಿಯೇ 4,462 ಇವೆ. ಬೆಸ್ಕಾಂ, ವಿವಿಧ ಖಾಸಗಿ ಸಂಸ್ಥೆಗಳು, ವಾಹನ ತಯಾರಿಕಾ ಕಂಪನಿಗಳು ಚಾರ್ಜಿಂಗ್ ಪಾಯಿಂಟ್‌ಗಳನ್ನು ನಿರ್ಮಿಸಿವೆ. ಇದಲ್ಲದೇ 2,500 ಚಾರ್ಜಿಂಗ್ ಪಾಯಿಂಟ್‌ಗಳನ್ನು ಆರಂಭಿಸಲಾಗುವುದು ಎಂದು ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದೆ. ರಾಜ್ಯದ ವಿವಿಧ ನಗರಗಳಲ್ಲಿ ಅಲ್ಲದೇ ಮಂಗಳೂರು, ದಾವಣಗೆರೆ, ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಗಳಲ್ಲಿ, ವಿವಿಧ ಪ್ರವಾಸಿ ತಾಣಗಳಲ್ಲಿಯೂ ಚಾರ್ಜಿಂಗ್ ಪಾಯಿಂಟ್‌ಗಳನ್ನು ಆರಂಭಿಸಿರುವುದು ಎಲೆಕ್ಟ್ರಿಕ್ ವಾಹನ ಸವಾರರಿಗೆ ಅನುಕೂಲವಾಗಿದೆ.

ಯೋಜನಾಬದ್ಧವಾಗಿ ಚಲಾಯಿಸಿ: 'ಎಲೆಕ್ಟ್ರಿಕ್ ಕಾರುಗಳಲ್ಲಿ ದೂರದ ಪ್ರದೇಶಗಳಿಗೆ ಪ್ರಯಾಣಿಸುವುದು ಕಷ್ಟ ಎಂದು ಹಲವರು ಹೇಳುತ್ತಾರೆ. ಸರಿಯಾದ ಯೋಜನೆಗಳನ್ನು ಹಾಕಿಕೊಂಡರೆ ಎಷ್ಟು ದೂರ ಕೂಡ ಪ್ರಯಾಣಿಸಬಹುದು' ಎಂದು ಎಲೆಕ್ಟ್ರಿಕ್ ಕಾರು ಹೊಂದಿರುವ ಲಗ್ಗೆರೆ ಪ್ರಶಾಂತ್ ಹೇಳಿದರು.

ಒಮ್ಮೆ ಚಾರ್ಜ್ ಮಾಡಿದರೆ ಕನಿಷ್ಠ 200 ಕಿ.ಮೀ. ಸಂಚರಿಸಬಹುದು. 300 ಕಿ.ಮೀ., 400 ಕಿ.ಮೀ. ಸಂಚರಿಸಬಹುದಾದ ಕಾರುಗಳು ಕೂಡ ಬಂದಿವೆ. ಒಮ್ಮೆ ಚಾರ್ಜ್ ಮಾಡಿದಾಗ 200 ಕಿ.ಮೀ. ಸಂಚರಿಸುವ ಕಾರು ಮಾತ್ರ ನಮ್ಮಲ್ಲಿದ್ದರೆ ಮನೆಯಿಂದ ಹೊರಟರೆ 150ರಿಂದ 200 ಕಿ.ಮೀ. ನಡುವೆ ಚಾರ್ಜಿಂಗ್ ಪಾಯಿಂಟ್ ಎಲ್ಲಿದೆ ಎಂದು ಗುರುತಿಸಿಕೊಂಡು, ಅಲ್ಲೇ ತಿಂಡಿ ತಿನ್ನುವ ಯೋಜನೆ ಹಾಕಿಕೊಳ್ಳಬೇಕು. ಆಗ ಅಲ್ಲಿ ಕಾರು ಚಾರ್ಜಿಂಗ್‌ಗೆ ಹಾಕಿ ಉಪಾಹಾರ ಮುಗಿಸಬಹುದು. ಮತ್ತೆ 150–200 ಕಿ.ಮೀ. ದೂರದಲ್ಲಿ ಊಟಕ್ಕೆ ಯೋಜನೆ ಹಾಕಿಕೊಳ್ಳಬೇಕು. ಈ ರೀತಿ ಮಾಡಿದರೆ ಎಷ್ಟು ದೂರ ಬೇಕಾದರೂ ಹೋಗಬಹುದು. ಈಗ ಸ್ಪೀಡ್ ಚಾರ್ಜರ್ ಇರುವುದರಿಂದ ಒಂದು ಗಂಟೆಯಲ್ಲಿ ಫುಲ್‌ಚಾರ್ಜ್ ಆಗುತ್ತದೆ' ಎಂದರು.

ಎಲೆಕ್ಟ್ರಿಕ್ ವಾಹನಗಳ ಕಡೆಗೆ ಹೆಚ್ಚು ಆಸಕ್ತಿ



ಎಲೆಕ್ಟ್ರಿಕ್ ವಾಹನ ಖರೀದಿಸುವಾಗ ಪೆಟ್ರೋಲ್, ಡೀಸೆಲ್ ವಾಹನಗಳಿಗಿಂತ ಬೆಲೆ ಸ್ವಲ್ಪ ಅಧಿಕ ಇರಬಹುದು. ಆದರೆ, ಒಮ್ಮೆ ಖರೀದಿಸಿದ ಬಳಿಕ ವೆಚ್ಚ ಬಹಳ ಕಡಿಮೆ ಇರುವುದರಿಂದ ಜನರು ಎಲೆಕ್ಟ್ರಿಕ್ ವಾಹನಗಳತ್ತ ವಾಲುತ್ತಿದ್ದಾರೆ. ಅಲ್ಲದೇ ರಾಜ್ಯದ ಎಲ್ಲ ಪಟ್ಟಣಗಳಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳು ಇರುವುದರಿಂದ ಎಲೆಕ್ಟ್ರಿಕ್ ವಾಹನ ಖರೀದಿದಾರರಿಗೆ ಅನುಕೂಲವಾಗಿದೆ. ಕಾರು, ಬೈಕ್‌ಗಳಷ್ಟೇ ಅಲ್ಲದೇ ಎಲೆಕ್ಟ್ರಿಕ್ ಟ್ರ್ಯಾಕ್ಟರ್, ಬಸ್‌ಗಳು ಕೂಡ ಇವೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿಯಲ್ಲಿ ಹಲವು ಎಲೆಕ್ಟ್ರಿಕ್ ಬಸ್‌ಗಳಿವೆ. ರೈತರು ಎಲೆಕ್ಟ್ರಿಕ್ ಟ್ರ್ಯಾಕ್ಟರ್‌ಗಳನ್ನು ಖರೀದಿಸುತ್ತಿದ್ದಾರೆ. ಹಾಗಾಗಿ ಈ ಡಿಸೆಂಬರ್ ತಿಂಗಳ ಮೊದಲ 10 ದಿನಗಳಲ್ಲಿ 4,749 ದ್ವಿಚಕ್ರವಾಹನಗಳು, 2,597 ನಾಲ್ಕುಚಕ್ರದ ವಾಹನಗಳು ನೋಂದಣಿಯಾಗಿವೆ.

ಸಿ. ಮಲ್ಲಿಕಾರ್ಜುನ, ಹೆಚ್ಚುವರಿ ಆಯುಕ್ತ, ಸಾರಿಗೆ ಇಲಾಖೆ (ಪ್ರವರ್ತನ)

ಎಲೆಕ್ಟ್ರಿಕ್ ವಾಹನಗಳ ನೋಂದಣಿ

ತಿಂಗಳು	ದ್ವಿಚಕ್ರ	ನಾಲ್ಕು ಚಕ್ರ
2023		
ಏಪ್ರಿಲ್	92,070	20,904
ಮೇ	97,074	20,895
ಜೂನ್	1,02,249	23,042
ಜುಲೈ	95,576	21,962
ಆಗಸ್ಟ್	1,01,960	26,163
ಸೆಪ್ಟೆಂಬರ್	1,06,226	22,818
ಅಕ್ಟೋಬರ್	1,09,188	24,159
ನವೆಂಬರ್	1,36,933	25,004
2024		
ಏಪ್ರಿಲ್	1,04,710	21,104
ಮೇ	1,12,027	21,284
ಜೂನ್	1,06,578	20,839
ಜುಲೈ	97,680	18,714
ಆಗಸ್ಟ್	1,11,850	26,803
ಸೆಪ್ಟೆಂಬರ್	93,460	17,571
ಅಕ್ಟೋಬರ್	1,29,450	29,960
ನವೆಂಬರ್	86,589	18,177

ಗದಗ ಮೃಗಾಲಯ: ಹೆಣ್ಣು ಹುಲಿ ಸಾವು

ಪ್ರಜಾವಾಣಿ ವಾರ್ತೆ


ಅನಸೂಯ ಹುಲಿ

ಗದಗ: ಇಲ್ಲಿನ ಬಿಂಕದಕಟ್ಟಿ ಮೃಗಾಲಯದಲ್ಲಿದ್ದ ಅನಸೂಯ ಹೆಸರಿನ 16.4 ವರ್ಷ ವಯಸ್ಸಿನ ಹೆಣ್ಣು ಹುಲಿ ಶನಿವಾರ ರಾತ್ರಿ ಮೃತಪಟ್ಟಿದೆ.

'ವನ್ಯಜೀವಿಗಳ ಸಂರಕ್ಷಣೆ ಕಾಯ್ದೆ ನಿಯಮಾನುಸಾರ ಭಾನುವಾರ ಅಂತ್ಯಸಂಸ್ಕಾರ ನೆರವೇರಿಸಲಾಗಿದೆ' ಎಂದು ಗದಗ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಸಂತೋಷ್ ಕುಮಾರ್ ಕೆಂಚಪ್ಪನವರ ತಿಳಿಸಿದ್ದಾರೆ.

'ಮೂರೂವರೆ ವರ್ಷ ಇದ್ದಾಗ ಈ ಹುಲಿಯನ್ನು ಮೈಸೂರಿನಿಂದ ಗದಗ ಮೃಗಾಲಯಕ್ಕೆ ಕರೆತರಲಾಗಿತ್ತು. ಮಾರ್ಗಮಧ್ಯದಲ್ಲಿ ಹುಲಿಯು ಬೋನಿನ ಸರಳುಗಳನ್ನು ಕಚ್ಚಿ ದವಡೆಗೆ ಗಾಯ ಮಾಡಿಕೊಂಡಿತ್ತು. ಹಾಗಾಗಿ, ಅದಕ್ಕೆ ಮಾಂಸವನ್ನು ಜಗಿದು ತಿಂದು ಜೀರ್ಣಿಸಿಕೊಳ್ಳುವ ಶಕ್ತಿ ಕುಂದಿತ್ತು. ಸುಮಾರು 10 ವರ್ಷಗಳವರೆಗೂ ಅದಕ್ಕೆ ಕೀಮಾ ರೂಪದಲ್ಲೇ ಮಾಂಸವನ್ನು ಪೂರೈಸಲಾಗುತ್ತಿತ್ತು' ಎಂದು ಆರ್‌ಎಫ್‌ಒ ಸ್ನೇಹಾ ಕೊಪ್ಪಳ ತಿಳಿಸಿದ್ದಾರೆ.

ಕಬಡ್ಡಿ ಆಟಗಾರ ಕುಸಿದು ಬಿದ್ದು ಸಾವು

ಪ್ರಜಾವಾಣಿ ವಾರ್ತೆ

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಅವರ್ಸಾ ಗ್ರಾಮದಲ್ಲಿ ಭಾನುವಾರ ನಡೆಯುತ್ತಿದ್ದ ಕಬಡ್ಡಿ ಟೂರ್ನಿ ವೇಳೆ ಆಟಗಾರ ಸುದರ್ಶನ ಆಗೇರ (21) ಕುಸಿದು ಬಿದ್ದು ಮೃತಪಟ್ಟಿದ್ದಾರೆ.

'ಅವರ್ಸಾ ಗ್ರಾಮದಲ್ಲಿ ಆಗೇರ ಸಮಾಜದವರಿಗಾಗಿ ಆಯೋಜಿಸಲಾಗಿದ್ದ ಕಬಡ್ಡಿ ಪಂದ್ಯಾವಳಿಯಲ್ಲಿ ಬಾಸಗೋಡ ಹಾಗೂ ಅವರ್ಸಾ ತಂಡಗಳ ನಡುವೆ ಅಂತಿಮ ಪಂದ್ಯ ನಡೆಯಬೇಕಿತ್ತು. ಅದಕ್ಕೆ ಮುನ್ನ ಆಟಗಾರರಿಗೆ ವಿಶ್ರಾಂತಿ ನೀಡಲಾಗಿತ್ತು. ವಿಶ್ರಾಂತಿ ವೇಳೆ ಸುದರ್ಶನ್ ಆಗೇರ ಕುಸಿದು ಬಿದ್ದಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ' ಎಂದು ಅಂಕೋಲಾ ಠಾಣೆ ಪೊಲೀಸರು ತಿಳಿಸಿದ್ದಾರೆ.

ತುಳಸಿತೋಪು ಉದ್ಯಾನದ ಗೇಟ್ ಬಿದ್ದು ಭದ್ರತಾ ಸಿಬ್ಬಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ವಾರ್ಡ್‌ನ ತುಳಸಿತೋಪು ಉದ್ಯಾನದ ಗೇಟ್ ಬಿದ್ದು ಭದ್ರತಾ ಸಿಬ್ಬಂದಿಯ ತಲೆಗೆ ತೀವ್ರ ಪೆಟ್ಟಾಗಿದೆ.

ಶ್ರೀರಾಮ್‌ಪುರದಲ್ಲಿ ನೆಲಸಿರುವ ತಮಿಳುನಾಡಿನ ಪ್ರಭಾಕರ್ ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಬಿಬಿಎಂಪಿ ನಿರ್ವಹಣೆ ಮಾಡುತ್ತಿರುವ ಈ ಉದ್ಯಾನದಲ್ಲಿ ಕಸ ತುಂಬಿಕೊಂಡು ಹೋಗುವುದಕ್ಕೆ ಟಿಪ್ಪರ್ ಆಟೊ ಬಂದಿತು. ಆಟೊ ಒಳಗೆ ಹೋಗಲೆಂದು ಗೇಟ್ ಬೀಗ ತೆರೆಯಲಾಯಿತು. ಆಗ ಗೇಟ್ ಏಕಾಏಕಿ ಪ್ರಭಾಕರ್ ಮೇಲೆ ಬಿದ್ದಿದೆ. ತಲೆಗೆ ಗಂಭೀರವಾಗಿ ಗಾಯವಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಐದು ತಿಂಗಳ ಹಿಂದೆಯಷ್ಟೇ ಈ ಉದ್ಯಾನ ಅಭಿವೃದ್ಧಿ ಪಡಿಸಲಾಗಿತ್ತು. ಇತ್ತೀಚೆಗೆ ನಗರದಲ್ಲಿ ಸುರಿದ ಮಳೆಯಿಂದ ಮರದ ಕೊಂಬೆ ಬಿದ್ದು ಗೇಟ್ ಹಾಳಾಗಿತ್ತು. ಸರಿಪಡಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಕ್ರಮ ಕೈಗೊಂಡಿರಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಸಮಯೋಚಿತ ವರ್ತನೆ ಬೌನ್ಸರ್‌ಗಳಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಕ್ಲಬ್, ಪಬ್‌ಗಳಲ್ಲಿ ನಿಯೋಜಿಸುವ ಬೌನ್ಸರ್‌ಗಳೊಂದಿಗೆ ಹೊಸ ವರ್ಷ ಆಚರಣೆ ಅಂಗವಾಗಿ ನಗರ ಪೊಲೀಸರು ಸಭೆ ನಡೆಸಿದ್ದಾರೆ.

ನಗರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ನಲ್ಲಿರುವ ಕ್ಲಬ್, ಪಬ್‌ಗಳಲ್ಲಿನ ಬೌನ್ಸರ್‌ಗಳು ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದರ ಕುರಿತು ಡಿಸಿಪಿ ಎಚ್.ಟಿ. ಶೇಖರ್ ನಿರ್ದೇಶನ ನೀಡಿದ್ದಾರೆ.

ಹೊಸ ವರ್ಷಾಚರಣೆಗೆ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಬರುವ ಯುವ ಜನರೊಂದಿಗೆ ಹೇಗೆ ನಡೆದುಕೊಳ್ಳಬೇಕು, ಮದ್ಯದ ಅಮಲಿನಲ್ಲಿ ಸಾರ್ವಜನಿಕರು ಅಸಭ್ಯ ವರ್ತನೆ ತೋರಿದಲ್ಲಿ ಅವರನ್ನು ಪೊಲೀಸರಿಗೆ ಹೇಗೆ ಒಪ್ಪಿಸಬೇಕು ಎಂಬುದರ ಬಗ್ಗೆ ಸಭೆ ನಡೆಸಲಾಗಿದೆ.

ಕೇಂದ್ರ ವಿಭಾಗದ ಪಬ್, ಬಾರ್, ರೆಸ್ಟೋರೆಂಟ್ ಮಾಲೀಕರು, ಪಾರ್ಟಿ ಹಾಲ್ ಹಾಗೂ ಖಾಸಗಿ ಹೋಟೆಲ್ ಮ್ಯಾನೇಜರ್‌ಗಳ ಜೊತೆಗೂ ಸಭೆ ನಡೆಸಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಮಾಲೋಚಿಸಿದರು. ಹೊಸ ವರ್ಷಕ್ಕೆ ಮಾರ್ಗಸೂಚಿಗಳ ಪಾಲನೆ ಜೊತೆಗೆ ಹೇಗೆ ಪಾರ್ಟಿ ಆಯೋಜನೆ ಮಾಡಬೇಕು ಎಂಬುದರ ಕುರಿತು ಮಾರ್ಗದರ್ಶನ ನೀಡಲಾಗಿದೆ

'ಹೊಸ ವರ್ಷದ ಅಂಗವಾಗಿ ಬೌನ್ಸರ್‌ಗಳೊಂದಿಗೆ ಪ್ರತ್ಯೇಕ ಸಭೆ ನಡೆಸಲಾಗಿದೆ. ಅನುಚಿತವಾಗಿ ವರ್ತಿಸುವ ಸಾರ್ವಜನಿಕರ ಮೇಲೆ ಹಲ್ಲೆಗೆ ಮುಂದಾಗದೇ, ಸಮಯೋಚಿತವಾಗಿ ಹೇಗೆ ವರ್ತಿಸಬೇಕು ಎಂಬುದರ ಬಗ್ಗೆ ತಿಳಿಸಲಾಗಿದೆ' ಎಂದು ಈ ಡಿಸಿಪಿ ಎಚ್.ಟಿ. ಶೇಖರ್ ಹೇಳಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256



'ಗಬ್ಬೆದ್ದು ನಾರುವ ಬಸ್ ತಂಗುದಾಣ'

ಡಿಕನ್‌ಸನ್ ರಸ್ತೆಯಲ್ಲಿರುವ ಬಸ್ ತಂಗುದಾಣದ ಬಳಿ ಕಸದ ರಾಶಿ ಹಾಕಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿರುವ ಆಭರಣ ಮಳಿಗೆಗಳಿಗೆ ದೇಶ–ವಿದೇಶಗಳ ಪ್ರವಾಸಿಗರು ಬರುತ್ತಾರೆ. ಆದರೆ, ಪಾದಚಾರಿ ಮಾರ್ಗ ಮತ್ತು ಬಸ್ ತಂಗುದಾಣದ ಬಳಿ ಪ್ರತನಿತ್ಯ ರಾಶಿ–ರಾಶಿ ಕಸ ಬಿದ್ದಿರುತ್ತದೆ. ಬೀದಿ ನಾಯಿಗಳು ಹಾಗೂ ಬೀಡಾಡಿ ದನಗಳು ಕಸದ ರಾಶಿಯನ್ನು ಎಳೆದು ರಸ್ತೆಗೆ ತರುತ್ತಿವೆ. ಇದರಿಂದ, ಬಿಎಂಟಿಸಿ ಬಸ್‌ಗಳ ಸಂಚಾರಕ್ಕೂ ಸಮಸ್ಯೆ ಆಗಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಇಲ್ಲಿರುವ ಕಸವನ್ನು ವಿಲೇವಾರಿ ಮಾಡಿ, ನಗರದ ಸೌಂದರ್ಯ ಕಾಪಾಡಬೇಕು.

ಶಿವಕುಮಾರ್ ಕೆ. ಎಸ್.

'ಸುಂಕದಕಟ್ಟೆ: ರಸ್ತೆ ಗುಂಡಿ ಮುಚ್ಚಿ'

ಸುಂಕದಕಟ್ಟೆ ಮುಖ್ಯರಸ್ತೆಯಿಂದ ಪೀಣ್ಯ-ದಾಸರಹಳ್ಳಿ ಸಂಪರ್ಕಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಪರಿಣಾಮ ಸಂಚಾರ ದಟ್ಟಣೆ ಹಾಗೂ ಅಪಘಾತಗಳು ಸಂಭವಿಸುತ್ತಿವೆ. ಇತ್ತೀಚೆಗೆ ರಸ್ತೆ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿ ಕ್ರಮ ಕೈಗೊಂಡಿತ್ತು. ಆದರೆ, ಈ ಭಾಗದ ಗುಂಡಿಗಳನ್ನು ಮುಚ್ಚಿಲ್ಲ. ಕೂಡಲೇ ಇಲ್ಲಿನ ರಸ್ತೆಯನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಪರಮಾನಂದ, ಸುಂಕದಕಟ್ಟೆ






'ಎನ್‌ಆರ್‌ಐ ಲೇಔಟ್‌ಗೆ ಮೂಲಸೌಲಭ್ಯ ಕಲ್ಪಿಸಿ'

ರಾಮಮೂರ್ತಿನಗರದ ಎನ್‌ಆರ್‌ಐ ಲೇಔಟ್‌ನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದ ಕಾರಣ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತದೆ. ಲೇಔಟ್ ನಿರ್ಮಾಣವಾಗಿ ಹಲವಾರು ವರ್ಷಗಳೇ ಕಳೆದರೂ ಇದುವರೆಗೂ ಒಳಚರಂಡಿ ವ್ಯವಸ್ಥೆ, ತೆರೆದ ಚರಂಡಿ ವ್ಯವಸ್ಥೆ ಕೂಡ ಸರಿಯಿಲ್ಲ. ಲೇಔಟ್‌ನ ಆರನೇ ಮುಖ್ಯರಸ್ತೆಯಲ್ಲಿ ಮನೆಗಳಲ್ಲಿ ಉತ್ಪತ್ತಿಯಾದ ತ್ಯಾಜ್ಯ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಇಲ್ಲಿರುವ ಖಾಲಿ ನಿವೇಶನಗಳಲ್ಲಿ ಈ ತ್ಯಾಜ್ಯ ನೀರು ಶೇಖರಣೆಗೊಂಡು ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಸ್ಥಳೀಯ ನಿವಾಸಿಗಳಿಗೆ ಡೆಂಗಿ, ಚಿಕೂನ್‌ಗುನ್ಯ ರೋಗಗಳು ಹರಡುವ ಆತಂಕ ಎದುರಾಗಿದೆ. ಕೂಡಲೇ ಈ ಬಡಾವಣೆಗೆ ಮೂಲಸೌಲಭ್ಯ ಕಲ್ಪಿಸಬೇಕು.

ಆದಿತ್ಯ ಗೋಪಾಲ್, ಎನ್‌ಆರ್‌ಐ ಲೇಔಟ್

'ಕಸದ ರಾಶಿ ತೆರವುಗೊಳಿಸಿ'

ಅಮರಜ್ಯೋತಿನಗರದ ಆರನೇ ಅಡ್ಡರಸ್ತೆಯ ರಾಘವೇಂದ್ರ ಸ್ವಾಮಿ ಮಠದ ಗೇಟ್‌ನ ಹತ್ತಿರ ಕಸ ತಂದು ಹಾಕಲಾಗುತ್ತಿದೆ. ಮಠಕ್ಕೆ ಬರುವ ಭಕ್ತರು ಮೂಗು ಮುಚ್ಚಿಕೊಂಡು ಬರುವ ಪರಿಸ್ಥಿತಿ ಇದೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಇದರಿಂದ, ಇದು ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿ ಹಾಕಿರುವ ಕಸ ತೆರವುಗೊಳಿಸಬೇಕು.



ಶಿವಲಿಂಗಯ್ಯ, ಅಮರಜ್ಯೋತಿನಗರ


ನಾಡಿನ ರೈತ ಬಂಧು, ರೈತರ ಸಾಲ ಮನ್ನ ಹರಿಕಾರರು, ಬದ್ಧತೆ, ನಂಬಿಕೆ,
ಮಾತೃ ಹೃದಯದ ಹೃದಯವಂತರು ವೈಶಾಲ್ಯತೆಯ ಮೇರು ವ್ಯಕ್ತಿತ್ವ ಹೊಂದಿರುವ ಕರುನಾಡಿನ
ಜನಪ್ರಿಯ ಮಾಜಿ ಮುಖ್ಯಮಂತ್ರಿಗಳು ಮಂಡ್ಯ ಲೋಕಸಭಾ ಸಂಸದರು ಹಾಗೂ
ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ
ಸನ್ಮಾನ್ಯ ಶ್ರೀ ಹೆಚ್. ಡಿ. ಕುಮಾರಸ್ವಾಮಿ ರವರಿಗೆ
ಜನ್ಮದಿನದ
ಶುಭಾಷಯಗಳು
ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್.
ಶ್ರೀ ಎಂ. ಕೃಷ್ಣಪ್ಪ
ಬೆಂಗಳೂರು ದಕ್ಷಿಣ
ವಿದಾನಸಭಾ ಕ್ಷೇತ್ರ
ಶ್ರೀ ಅಶೋಕ್
ವಿರೋಧ ಪಕ್ಷದ ನಾಯಕರು
ಕರ್ನಾಟಕ ಸರ್ಕಾರ
ಡಾ॥ ಅಶ್ವಥ್ ನಾರಾಯಣ
ಮಾಜಿ ಉಪ ಮುಖ್ಯಮಂತ್ರಿ
ಡಾ॥ ಮಂಜುನಾಥ್
ಸಂಸದರು, ಬೆಂಗಳೂರು
ಗ್ರಾಮಾಂತರ ಲೋಕಸಭಾ ಕ್ಷೇತ್ರ
ದೇಶದ ಉನ್ನತಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಭು ಶ್ರೀರಾಮನಂತೆ ದುಡಿಯುವಷ್ಟು ಕಾಲ, ನಮ್ಮ ನಾಯಕರು, ನೆಚ್ಚಿನ ಹೆಚ್.ಡಿ. ಕುಮಾರಸ್ವಾಮಿ ಅವರು ಹನುಮಂತನಂತೆ ಅವರಿಗೆ ಹೆಗಲಾಗಿದ್ದಾರೆ.
ಪ್ರಿಯ ಕಾರ್ಯಕರ್ತ ಬಂಧುಗಳೇ, ನಾವು ಕುಮಾರಣ್ಣನ ನಿಷ್ಠೆ, ಶ್ರದ್ಧೆ, ಬದ್ದತೆ ಮೈಗೂಡಿಸಿಕೊಂಡು, ಮೋದಿ ಕನಸಿನ ರಾಮರಾಜ್ಯದಂಥ ಭಾರತ ಕಟ್ಟಲು ಬೆವರು ಸುರಿಸೋಣ ಬನ್ನಿ.....
ಶ್ರೀ ಜಿ.ಆರ್. ಸುನಿಲ್ ಕುಮಾರ್
ಸದಸ್ಯರು, ಬಿ.ಬಿ.ಎಂ.ಪಿ, ಮಾಜಿ ಗ್ರಾ. ಪಂ.
ಮತ್ತು ತಾ॥ ಪಂ. ಸದಸ್ಯರು
ಕಾರ್ಯಅಧ್ಯಕ್ಷರು ಉತ್ತರಹಳ್ಳಿ ವಿ. ಸ. ಕ್ಷೇತ್ರ
ದಿನಾಂಕ :
16-12-2024
ಸೋಮವಾರ
ಶುಭಕೋರುವವರು :
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
ಶ್ರೀ ಬಿ. ಎನ್. ಕುಮಾರ್
ಬಸವನಪುರ
ನಂದಿ ಪ್ರಿಂಟ್ಸ್, ಗೊಟ್ಟಿಗೆರೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಳವಳ

‘ಸತ್ಯ ಹೇಳಲಾಗದ ಒತ್ತಡದಲ್ಲಿ ಸಂಶೋಧಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸತ್ಯವನ್ನು ಹೇಳಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಸಂಶೋಧಕ ಇದ್ದಾನೆ. ಒಂದು ಸಮೂಹ ಅಂತಹ ಒತ್ತಡ ನಿರ್ಮಿಸುತ್ತಿದೆ. ಕರ್ನಾಟಕ ಸಂಶೋಧನಾ ಕ್ಷೇತ್ರ ಬಿಕ್ಕಟ್ಟು ಎದುರಿಸುತ್ತಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.



ಪುರುಷೋತ್ತಮ ಬಿಳಿಮಲೆ

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ‘ಇಂದಿನ ರಾಜಕೀಯ’ ವಿಷಯ ಕುರಿತ ಸಂವಾದದಲ್ಲಿ ಮಾತನಾಡಿದ ಅವರು, ‘ಜನರು ತಮಗೆ ಬೇಕಾದಂತೆ ಸತ್ಯ ಇರಬೇಕು ಎಂದು ಅಪೇಕ್ಷೆ ಪಡುತ್ತಾರೆ. ಸಂಶೋಧಕ ಕಂಡುಕೊಂಡ ಸತ್ಯವನ್ನು ಒಪ್ಪದ ಸ್ಥಿತಿಯಲ್ಲಿದ್ದಾರೆ. ಹೀಗಾಗಿ ಸತ್ಯವನ್ನು ಪತ್ತೆ ಮಾಡುವುದೇ ಬೇಡ ಎಂಬಂತಹ ಸ್ಥಿತಿಗೆ ಸಂಶೋಧಕರು ಬಂದಿದ್ದಾರೆ’ ಎಂದು ವಿಶ್ಲೇಷಿಸಿದರು.

‘ಸಂಶೋಧನೆಯು ಜನಪರವಾಗಿ ಇರಬೇಕು ಎಂಬುದು ಸರಿಯಲ್ಲ. ನಮ್ಮಲ್ಲಿರುವ ಮಾಹಿತಿಯನ್ನು ಯಾವ ರೀತಿಯಲ್ಲಿ ನಿರ್ವಹಿಸುತ್ತೇವೆ ಮತ್ತು ವಿಶ್ಲೇಷಿಸುತ್ತೇವೆ ಎಂಬುದು ಮುಖ್ಯವಾಗುತ್ತದೆ. ಸಂಶೋಧನೆ ಅದೇ ರೀತಿಯಲ್ಲಿರಬೇಕು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ವಚನ ಚಳವಳಿಯು ವೈದಿಕ ಸಂಸ್ಕೃತಿಗೆ ಪ್ರತಿರೋಧವಾಗಿ ಹುಟ್ಟಿಕೊಂಡಿತು ಎಂಬುದನ್ನೇ ಈವರೆಗಿನ ಸಂಶೋಧನೆಗಳು, ವಿಶ್ಲೇಷಣೆಗಳು ಹೇಳಿದ್ದವು. ಆದರೆ, ಈಚೆಗೆ ಬಂದ ಪುಸ್ತಕವೊಂದು ವಚನಗಳು ವೈದಿಕ ಸಂಸ್ಕೃತಿಗೆ ಪೂರಕವಾಗಿಯೇ ಇವೆ ಎಂದು ಪ್ರತಿಪಾದಿಸಿದೆ. ಆ ಪ್ರತಿಪಾದನೆಯ ಮೇಲೆ ದೊಡ್ಡ ಚರ್ಚೆಯೂ ನಡೆಯುತ್ತಿದೆ’ ಎಂದರು.

ಬೆಂಗಳೂರು ಸಾಹಿತ್ಯ ಉತ್ಸವ

‘ನಾನು ಬರೆದ ಸಂಶೋಧನಾ ಲೇಖನವು ಹೇಳುವ ಸತ್ಯ ಒಂದಿರುತ್ತದೆ. ಹತ್ತಾರು ವರ್ಷಗಳ ನಂತರ ದೊರೆಯುವ ಹೊಸ ಮಾಹಿತಿಯಿಂದ ಆ ಸತ್ಯವನ್ನು ಪರಾಮರ್ಶೆಗೆ ಒಳಪಡಿಸುವುದು ಸಂಶೋಧನೆಯ ಒಂದು ಭಾಗ. ಆದರೆ ರಾಜಕೀಯ ಕಾರಣಕ್ಕೆ ಸಂಶೋಧನಾ ಸತ್ಯಗಳನ್ನು ಬದಲಿಸುವುದು ಅಪಚಾರ. ನಿಜವಾದ ಸಂಶೋಧಕ ರಾಜಕೀಯ ಬದಲಾವಣೆಗೆ ತಕ್ಕಂತೆ ತನ್ನ ಸಂಶೋಧನಾ ಫಲಿತಗಳನ್ನು ಬದಲಿಸಿಕೊಳ್ಳುವುದಿಲ್ಲ’ ಎಂದು ಉತ್ತರವನ್ನು ವಿಸ್ತರಿಸಿದರು.

‘ಕೆಲವು ಹೆಸರಾಂತ ಸಂಶೋಧಕರು ರಾಜಕೀಯ ಕಾರಣಕ್ಕಾಗಿ, ಯಾವುದೋ ಹುದ್ದೆಯ ಕಾರಣಕ್ಕಾಗಿ ಸಂಶೋಧನಾ ಸತ್ಯಗಳನ್ನು ಬದಲಿಸಿಕೊಂಡಿದ್ದು ನಡೆದಿದೆ. ಕೆಲವು ಸಂಶೋಧಕರು ಉರಿಗೌಡ, ನಂಜೇಗೌಡ ಪರವಾಗಿ ಮಾತನಾಡಿದ್ದೂ ಇದೆ’ ಎಂದರು.

‘ಸುಧಾ’ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಚ.ಹ.ರಘುನಾಥ ಅವರು ಸಂವಾದ ನಡೆಸಿಕೊಟ್ಟರು.

‘ತುಳುನಾಡನ್ನು ಚಿತ್ರಿಸುವ ಪಾಡ್ದನಗಳು’

‘ತುಳುನಾಡಿನ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವ ಕೆಲಸವನ್ನು ತುಳು ಪಾಡ್ದನಗಳು ಮಾಡಿವೆ’ ಎಂದು ಪ್ರೊ. ಕೆ.ಚಿನ್ನಪ್ಪಗೌಡ ಹೇಳಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ತುಳು ಪಾಡ್ದನಗಳ ದೇಶೀಯ ಜ್ಞಾನ ಪರಂಪರೆ ಕುರಿತು ಮಾತನಾಡಿದ ಅವರು, ‘ಪಾಡ್ದನಗಳು ದೇಶೀಯ ಜ್ಞಾನ ಪರಂಪರೆಯ ಪ್ರತೀಕವಾಗಿವೆ. ಪಾಡ್ದನಗಳನ್ನು ಕಟ್ಟುವವರಿಗೆ ತುಳುನಾಡಿನ ಭಾಷೆ, ಸಮಾಜ, ಸಂಸ್ಕೃತಿ, ರಾಜಕಾರಣ, ಆಚರಣೆಗಳು, ಆರ್ಥಿಕತೆಗೆ ಸಂಬಂಧಿಸಿದ ಅರಿವು ಇರಬೇಕಿತ್ತು. ಅವು ಇದ್ದ ಕಾರಣಕ್ಕೇ ಸಾರ್ವತ್ರಿಕವಾದ ಪಾಡ್ದನಗಳನ್ನು ಕಟ್ಟಲು ಅವರಿಗೆ ಸಾಧ್ಯವಾಯಿತು’ ಎಂದರು.

‘ಕೋಟಿ ಚೆನ್ನಯ್ಯನ ಪಾಡ್ದನವು ತುಳುವರ ರಾಜಕೀಯ ವ್ಯವಸ್ಥೆಯನ್ನು ತೆರೆದಿಡುತ್ತದೆ. ಸಿರಿ ಪಾಡ್ದನವು ತುಳುನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಯನ್ನು ಹಿಡಿದಿಟ್ಟಿದೆ. ಅಂತೆಯೇ ಭೂತಾರಾಧನೆಯ ಪಾಡ್ದನಗಳು ತುಳು ಜನರ ಆಚರಣೆಗಳ ಜ್ಞಾನ ಪರಂಪರೆಯಾಗಿವೆ. ಪಾಡ್ದನಗಳ ಅಧ್ಯಯನದ ವೇಳೆ ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು’ ಎಂದು ವಿವರಿಸಿದರು.

‘ಯುದ್ಧ ಭೀತಿ– ಬದುಕಿನ ನೆನಪು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುದ್ಧವಷ್ಟೇ ಅಲ್ಲ, ಯುದ್ಧದ ಭೀತಿಯೂ ಜನರ ಬದುಕನ್ನು ಚೆಲ್ಲಾಪಿಲ್ಲಿಯಾಗಿಸುತ್ತದೆ. 1941ರಲ್ಲಿ ಅಂತಹದ್ದೊಂದು ಸನ್ನಿವೇಶಕ್ಕೆ ಭಾರತದ ಪೂರ್ವ ಕರಾವಳಿಯ ನಗರಗಳೆಲ್ಲವೂ ಸಾಕ್ಷಿಯಾಗಿದ್ದವು’ ಎಂದು ಪತ್ರಕರ್ತ ಮುಕುಂದ್ ಪದ್ಮನಾಭನ್ ಹೇಳಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ‘ದಿ ಇನ್ವೇಷನ್ ದಟ್ ವಾಸ್ ನಾಟ್’ ವಿಷಯ ಕುರಿತು ಮಾತನಾಡಿದ ಅವರು, ‘ಜಗತ್ತಿನ ಬೇರೆ ದೇಶಗಳು ಯುದ್ಧದ ಭೀತಿಯನ್ನು ಎದುರಿಸುತ್ತಿವೆ ಮತ್ತು ಅಲ್ಲಿನ ಬದುಕು ದುಸ್ತರವಾಗಿದೆ. ಆದರೆ, ಮದ್ರಾಸ್ (ಈಗಿನ ಚೆನ್ನೈ) ಎರಡನೇ ವಿಶ್ವಯುದ್ಧದ ಸಂದರ್ಭದಲ್ಲೇ ಅಂತಹ ಸ್ಥಿತಿ ಎದುರಿಸಿತ್ತು’ ಎಂದರು.

‘ಎರಡನೇ ವಿಶ್ವಯುದ್ಧದ ಆರಂಭದಲ್ಲಿ ಜಪಾನ್, ಅಮೆರಿಕದ ಪರ್ಲ್ ಹಾರ್ಬರ್ ಮೇಲೆ ದಾಳಿ ನಡೆಸಿತ್ತು. ಅದರ ಬೆನ್ನಲ್ಲೇ ಮಲಯಾ, ಸಿಂಗಪುರದ ಮೇಲೆ ದಾಳಿ ನಡೆಸಿ ವಶಕ್ಕೆ ಪಡೆದಿತ್ತು. ಭಾರತದ ಮೇಲೂ ಜಪಾನ್ ದಾಳಿ ನಡೆಸಬಹುದು ಎಂದು ಬ್ರಿಟಿಷ್ ಸರ್ಕಾರ ಊಹಿಸಿತ್ತು’ ಎಂದು ವಿವರಿಸಿದರು.

‘ಮದ್ರಾಸ್ ಅನ್ನು ತೆರವು ಮಾಡಲು ಮದ್ರಾಸ್ ಪ್ರೆಸಿಡೆನ್ಸಿ ಆದೇಶಿಸಿತ್ತು. ಬ್ರಿಟಿಷ್ ಸರ್ಕಾರದ ದಾಖಲೆಗಳ ಪ್ರಕಾರ ಶೇ 50ರಷ್ಟು, ಪತ್ರಿಕೆಗಳ ಪ್ರಕಾರ ಶೇ 75ರಷ್ಟು ಮತ್ತು ಸ್ಥಳೀಯ ಸಂಸ್ಥೆಗಳ ಪ್ರಕಾರ ಶೇ 90ರಷ್ಟು ಜನರನ್ನು ತೆರವು ಮಾಡಲಾಗಿತ್ತು. ಇಡೀ ಮದ್ರಾಸ್ ನಿರ್ಜನವಾಗಿತ್ತು’ ಎಂದರು.

‘ಮದ್ರಾಸ್‌ನ ಜನರನ್ನು ಬೆಂಗಳೂರು, ಮೈಸೂರು, ಕೊಯಮತ್ತೂರಿಗೆ ಸ್ಥಳಾಂತರಿಸಲಾಗಿತ್ತು. ಇಂಗ್ಲಿಷರು ಕೊಡೈಕೆನಾಲ್‌ಗೆ ಹೋಗಿದ್ದರು. ಮದ್ರಾಸ್ ಮೃಗಾಲಯದಲ್ಲಿದ್ದ ಎಲ್ಲ ಪ್ರಾಣಿಗಳನ್ನು ಹೊರಗೆ ಬಿಡಲಾಗಿತ್ತು. ಜನರ ಸುರಕ್ಷತೆ ದೃಷ್ಟಿಯಿಂದ ಪ್ರಾಣಿಗಳನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಆದರೆ ದಾಳಿ ನಡೆಯಲೇ ಇಲ್ಲ’ ಎಂದು ತಿಳಿಸಿದರು.

‘ವರ್ಷದವರೆಗೂ ದಾಳಿಯ ಭೀತಿ ಇದ್ದೇ ಇತ್ತು. 1942ರ ಅಂತ್ಯದ ವೇಳೆಗೆ ಜನರು ಹಿಂತಿರುಗಿದಾಗ ಎಲ್ಲವೂ ಲೂಟಿಯಾಗಿತ್ತು. ನನ್ನ ತಾಯಿಯ ಮನೆಯಲ್ಲಿ ಒಂದು ವಸ್ತುವನ್ನೂ ಬಿಡದೆ ದೋಚಿದ್ದರು’ ಎಂದು ಯುದ್ಧಭೀತಿಯ ಪರಿಣಾಮಗಳನ್ನು ತೆರೆದಿಟ್ಟರು.

‘ಮದ್ರಾಸ್‌ನಲ್ಲಿ ಕೈಗೊಂಡ ಈ ಕ್ರಮದಿಂದಾಗಿ ಭುವನೇಶ್ವರ ಮತ್ತು ಕೋಲ್ಕತ್ತದಲ್ಲೂ ಜನರು ಗಾಬರಿಗೆ ಒಳಗಾಗಿದ್ದರು. ಜನರು ನಗರಗಳನ್ನು ಬಿಟ್ಟು ಹಳ್ಳಿಗಳತ್ತ ವಲಸೆ ಹೋಗಿದ್ದರು. ಯುದ್ಧ ನಡೆಯದೆಯೇ ಅದರ ಪರಿಣಾಮಗಳನ್ನು ಜನರು ಎದುರಿಸಿದ್ದರು’ ಎಂದು ಸಭಿಕರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ಸುದ್ದಿ 2 ನಿಮಿಷ

ಅನ್ವರ್ ಮಾಣಿಪ್ಪಾಡಿ ಆರೋಪ: ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಬೆಂಗಳೂರು: ‘ಬಿಜೆಪಿ ರಾಜ್ಯ ಘಟಕದ ಬಿ.ವೈ. ವಿಜಯೇಂದ್ರ ವಿರುದ್ಧ ಆ ಪಕ್ಷದ ಮುಖಂಡ ಅನ್ವರ್ ಮಾಣಿಪ್ಪಾಡಿ ಮಾಡಿರುವ ₹150 ಕೋಟಿ ಆರೋಪವನ್ನು ಸಿಬಿಐ ತನಿಖೆಗೆ ವಹಿಸಬೇಕು’ ಎಂದು ಆಗ್ರಹಿಸಿ ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಮುಂದೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್, ‘ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ವಕ್ಫ್ ಅಕ್ರಮದ ತನಿಖೆಯ ಮಾಹಿತಿಯನ್ನು ಬಹಿರಂಗಪಡಿಸದಂತೆ ವಿಜಯೇಂದ್ರ ತಮಗೆ ₹150 ಕೋಟಿ ಆಮಿಷ ಒಡ್ಡಿದ್ದರು ಎಂದು ಆಗ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದ ಮಾಣಿಪ್ಪಾಡಿ ಆರೋಪಿಸಿದ್ದಾರೆ. ಹೀಗಾಗಿ ವಿಜಯೇಂದ್ರ ಅವರನ್ನು ಕೂಡಲೇ ಬಂಧಿಸಬೇಕು’ ಎಂದು ಒತ್ತಾಯಿಸಿದರು.

‘ಅನ್ವರ್ ಮಾಣಿಪ್ಪಾಡಿ ಬರೆದಿರುವ ಪತ್ರ ಪ್ರಧಾನಿಗೆ ಇನ್ನೂ ತಲುಪಿಲ್ಲ ಅನಿಸುತ್ತಿದೆ. ಒಂದು ವೇಳೆ ತಲುಪಿದ್ದರೆ ಈ ಭ್ರಷ್ಟಾಚಾರ ಪ್ರಕರಣವನ್ನು ಅವರು ಸಿಬಿಐಗೆ ಯಾಕೆ ವಹಿಸಿಲ್ಲ ಎಂಬುದನ್ನು ದೇಶದ ಜನತೆಗೆ ತಿಳಿಸಬೇಕು. ಬಿಜೆಪಿ ವಕ್ತಾರರಾಗಿ ಹಾಗೂ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ವ್ಯಕ್ತಿ ಪತ್ರ ಬರೆದಿರುವುದು ಬಹಿರಂಗವಾಗಿದ್ದರೂ ಪ್ರಕರಣವನ್ನು ಮುಚ್ಚಿಹಾಕುವ ಷಡ್ಯಂತ್ರ ನಡೆಯುತ್ತಿದೆ’ ಎಂದು ಆರೋಪಿಸಿದರು.

‘ಆನೆಗಳನ್ನು ಕೊಲ್ಲಬೇಕೆಂದು ಬಹಿರಂಗವಾಗಿ ಮನವಿ ಮಾಡಿರುವ ಬೆಳ್ತಂಗಡಿಯ ಬಿಜೆಪಿ ಶಾಸಕ ಹರೀಶ್ ಪೂಂಜಾ ವಿರುದ್ಧ ಅರಣ್ಯ ಇಲಾಖೆ ಸ್ವಯಂ ಪ್ರೇರಿತವಾಗಿ ಕ್ರಮ ಕೈಗೊಳ್ಳಬೇಕು’ ಎಂದೂ ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡರಾದ ಎ. ಆನಂದ್, ಓಬಳೇಶ್, ಪುಟ್ಟರಾಜು, ಚಂದ್ರಶೇಖರ್, ನವೀನ್ ಸುಂಕದಕಟ್ಟೆ, ಕುಶಾಲ್ ಹಾರುವೇಗೌಡ, ಉಮೇಶ್, ರವಿ ಮುಂತಾದವರು ಪ್ರತಿಭಟನೆಯಲ್ಲಿ ಇದ್ದರು.

ಶಿವನಸಮುದ್ರ: ದೇವಾಲಯಕ್ಕೆ ಶಿವರಾಜ್‌ಕುಮಾರ್ ದಂಪತಿ ಭೇಟಿ



ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಶಿವನಸಮುದ್ರದ ಸಮೂಹ ದೇವಾಲಯಕ್ಕೆ ನಟ ಶಿವರಾಜ್ ಕುಮಾರ್ ಹಾಗೂ ಪತ್ನಿ ಗೀತಾ ಶಿವರಾಜ್ ಕುಮಾರ್ ಅವರು ಭಾನುವಾರ ಬೆಳಿಗ್ಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಪ್ರತಿ ವರ್ಷವೂ ಅವರು ಇಲ್ಲಿನ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸುತ್ತಾರೆ. ಡಿ.18ರಂದು ಚಿಕಿತ್ಸೆಗಾಗಿ ಶಿವರಾಜ್‌ಕುಮಾರ್ ವಿದೇಶಕ್ಕೆ ತೆರಳುತ್ತಿದ್ದು, ಅದಕ್ಕೂ ಮುನ್ನ ಪೂಜೆ ನೆರವೇರಿಸಿದ್ದಾರೆ.

ಮೊದಲಿಗೆ ವೆಸ್ಲಿ ಸೇತುವೆಯ ಕೆಳಗೆ ಹರಿಯುವ ಕಾವೇರಿ ನದಿಯ ಬಳಿ ತೆರಳಿ ಕಾವೇರಿ ನೀರನ್ನು ದಂಪತಿ ಪ್ರೋಕ್ಷಣೆ ಮಾಡಿಕೊಂಡು ಬಾಗಿನ ಅರ್ಪಿಸಿದರು. ಬಳಿಕ ಪಕ್ಕದಲ್ಲಿರುವ ಗಣಪತಿ ದೇವಸ್ಥಾನ, ಮಧ್ಯ ರಂಗನಾಥಸ್ವಾಮಿ ದೇವಸ್ಥಾನ, ಮೀನಾಕ್ಷಿ ಸಮೇತ ಸೋಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ಶ್ರೀ ಚಕ್ರ ದರ್ಶನ ಮಾಡಿ ನಂತರ ಶ್ರೀ ಆದಿಶಕ್ತಿ ಮಾರಮ್ಮ ದೇವಸ್ಥಾನ ತೆರಳಿ ಮಾರಮ್ಮನಿಗೆ ಸೀರೆ ಕಾಣಿಕೆ ಅರ್ಪಿಸಿದರು.

ಪ್ರತಿವರ್ಷವೂ ಶಿವರಾಜ್ ಕುಮಾರ್ ಹಾಗೂ ಅವರ ಕುಟುಂಬದವರು ಮಾರಮ್ಮ ದೇವಸ್ಥಾನಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸಿ 10ರಿಂದ 20 ಕುರಿಗಳನ್ನು ಹರಕೆ ತೀರಿಸಿ ಅಭಿಮಾನಿಗಳಿಗೆ ಬಾಡೂಟ ಹಾಕಿಸುತ್ತಿದ್ದರು. ಆದರೆ ಈ ವರ್ಷ ಅನಾರೋಗ್ಯದ ಕಾರಣ ಪೂಜೆ ಮಾಡಿದ ತಕ್ಷಣ ತೆರಳಿದರು. ಶಿವನಸಮುದ್ರ ದೇವಾಲಯಕ್ಕೆ ಆಗಮಿಸಿದ್ದ ನಟ ಶಿವರಾಜ್ ಕುಮಾರ್ ದಂಪತಿಯನ್ನು ಸಮೂಹ ದೇವಾಲಯದ ಅಧಿಕಾರಿಗಳು ಬರಮಾಡಿಕೊಂಡರು.

ದಾರಿ ತಪ್ಪಿದ ಪಂಚಮಸಾಲಿ ಹೋರಾಟ: ಡಾ. ರವಿಕುಮಾರ

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಪಂಚಮಸಾಲಿ ಮೀಸಲಾತಿ ಹೋರಾಟ ಆರ್.ಎಸ್.ಎಸ್ ಮತ್ತು ಬಿಜೆಪಿ ಮಧ್ಯಪ್ರವೇಶದಿಂದ ಸಂಪೂರ್ಣ ದಾರಿ ತಪ್ಪಿದೆ’ ಎಂದು ಕೆಪಿಸಿಸಿ ವೈದ್ಯಕೀಯ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ, ಪಂಚಮಸಾಲಿ ಸಮಾಜದ ಮುಖಂಡ ಡಾ. ರವಿಕುಮಾರ ಬಿರಾದಾರ ಆರೋಪಿಸಿದರು.



ಡಾ.ರವಿಕುಮಾರ ಬಿರಾದಾರ

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಹೋರಾಟದ ಹೆಸರಿನಲ್ಲಿ ರಾಜ್ಯ ಸರ್ಕಾರವನ್ನು ಹಾಗೂ ಪಂಚಮಸಾಲಿ ಸಮಾಜದ ಸಚಿವರು, ಶಾಸಕರನ್ನು ಬ್ಲ್ಯಾಕ್ ಮೇಲ್ ಮಾಡತೊಡಗಿದ್ದಾರೆ’ ಎಂದು ದೂರಿದರು.

‘ಮೀಸಲಾತಿ ಹೋರಾಟದಲ್ಲಿ ನಿರತ ಸಮಾಜವನ್ನು ಹಿಂಸೆಗೆ ಪ್ರಚೋದಿಸುವ ಕೆಲಸ ಸ್ವಾಮೀಜಿ ಮಾಡುತ್ತಿದ್ದಾರೆ. ಕಾವಿ ಮರ್ಯಾದೆ, ಪಂಚಮಸಾಲಿ ಸಮಾಜದ ಮರ್ಯಾದೆ ತೆಗೆಯುವ ಕೆಲಸ ಸ್ವಾಮೀಜಿ ಮಾಡಬಾರದು, ತಮ್ಮ ಲಾಭಕ್ಕಾಗಿ ಪಂಚಮಸಾಲಿಗಳನ್ನು ಬಿಜೆಪಿ, ಆರ್.ಎಸ್.ಎಸ್‌ಗೆ ಅಡ ಇಡಬಾರದು' ಎಂದು ಹೇಳಿದರು.

‘ಈ ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆರ್‌ಎಸ್‌ಎಸ್ ಒಡ್ಡಿದ ಆಮಿಷಕ್ಕೆ ಒಳಗಾಗಿ ಬಿಜೆಪಿ ಪರ ಮತ ಚಲಾಯಿಸಲು ಕರೆ ಕೊಟ್ಟಿದ್ದರು. ಆದರೆ, ಸಮಾಜ ಅವರ ಮಾತನ್ನು ತಿರಸ್ಕರಿಸಿತ್ತು’ ಎಂದು ಹೇಳಿದರು.

‘ಶಾಸಕ ವಿಜಯಾನಂದ ಕಾಶಪ್ಪನವರಿಗೆ ಮುಂದಿನ ಚುನಾವಣೆಯಲ್ಲಿ ನೋಡಿಕೊಳ್ಳುತ್ತೇನೆ ಎಂದು ಹೆದರಿಸುವ ಕೆಲಸ ಮಾಡುತ್ತಿರುವುದು ಸರಿಯಲ್ಲ. ಅವರ ತಂದೆ ಕಾಲದಿಂದಲೂ ಅವರ ಕುಟುಂಬ ಪಂಚಮಸಾಲಿಗಳ ಪರವಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಸ್ವಾಮೀಜಿ ತಿಳಿದುಕೊಳ್ಳಬೇಕು’ ಎಂದು ಹೇಳಿದರು.





ಸಾಹಿತ್ಯ ಉತ್ಸವದಲ್ಲಿ ಚಿಣ್ಣರು ಬೊಂಬೆಯಾಟವನ್ನು ಕುತೂಹಲದಿಂದ ವೀಕ್ಷಿಸಿದರು(ಎಡಚಿತ್ರ) ಮಕ್ಕಳು ಲೇಖಕಿ ಸುಧಾ ಮೂರ್ತಿಯವರಿಂದ ಪುಸ್ತಕಗಳಿಗೆ ಹಸ್ತಾಕ್ಷರ ಪಡೆದುಕೊಂಡರು –ಪ್ರಜಾವಾಣಿ ಚಿತ್ರಗಳು

ಸಾಹಿತ್ಯ ಸಂಭ್ರಮ, ಮಕ್ಕಳ ಕಲರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ವಿದ್ಯಮಾನಗಳು, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಆಹಾರ, ಆರ್ಥಿಕತೆ, ನವೋದ್ಯಮ... ಹೀಗೆ ವೈವಿಧ್ಯಮಯ ವಿಷಯಗಳ ಬಗ್ಗೆ ಒಳನೋಟಗಳಿಂದ ಕೂಡಿದ ಚರ್ಚೆ–ಸಂವಾದಗಳಿಗೆ ವೇದಿಕೆಯಾದ ಬೆಂಗಳೂರು ಸಾಹಿತ್ಯೋತ್ಸವದ 13ನೇ ಆವೃತ್ತಿ ಭಾನುವಾರ ಸಂಪನ್ನವಾಯಿತು.

ಕುಮಾರ ಕೃಪ ರಸ್ತೆಯಲ್ಲಿರುವ ಲಲಿತ್ ಅಶೋಕ್ ಹೋಟೆಲ್ ಆವರಣದಲ್ಲಿ ಬೆಂಗಳೂರು ಸಾಹಿತ್ಯ ಉತ್ಸವ (ಬಿಎಲ್‌ಎಫ್) ಸಮಿತಿ ಹಮ್ಮಿಕೊಂಡಿದ್ದ ಈ ಉತ್ಸವದಲ್ಲಿ, ಸಾಹಿತ್ಯಾಸಕ್ತರ ಸಂಭ್ರಮದ ಜತೆಗೆ ಮಕ್ಕಳ ಕಲರವ ಈ ಬಾರಿ ಹೆಚ್ಚಾಗಿತ್ತು. ನಗರದ ವಿವಿಧೆಡೆಯಿಂದ ಬಂದಿದ್ದ ಸಾಹಿತ್ಯ ಪ್ರೇಮಿಗಳು ಗಹನವಾದ ವಿಚಾರ ಗೋಷ್ಠಿಗಳಿಗೆ ಕಿವಿಯಾದರೆ, ಮಕ್ಕಳು ವಿವಿಧ ಆಟಗಳನ್ನಾಡಿ ಸಂಭ್ರಮಿಸಿದರು.


ಉತ್ಸವದ ಎರಡನೇ ದಿನವೂ ವಿಚಾರಸಂಕಿರಣಗಳು ಮತ್ತು ಸಂವಾದಗಳು ಬೆಳಿಗ್ಗೆ 9ರಿಂದ ಸಂಜೆ 7.30ರವರೆಗೆ ನಡೆದವು. ಬೆಳಿಗ್ಗೆ 9 ಗಂಟೆಗೆ ನಡೆದ ಹಿಂದೂಸ್ತಾನಿ ಸಂಗೀತ ಕಚೇರಿಯನ್ನು ಅನಘಾ ಭಟ್, ಸಾಗರ್ ಭರತರಾಜ್ ಹಾಗೂ ಸೂರ್ಯ ಉಪಾಧ್ಯ ಅವರು ನಡೆಸಿಕೊಟ್ಟರು. ಬಳಿಕ ಐದೂ ವೇದಿಕೆಗಳಲ್ಲಿ ವಿಚಾರ ಗೋಷ್ಠಿಗಳು ನಡೆದವು. ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ವೇದಿಕೆಗಳನ್ನು ನಿರ್ಮಿಸಿ, ಅಮರ ಚಿತ್ರಕಥಾ ರಸಪ್ರಶ್ನೆ, ವಿವಿಧ ಮನೋರಂಜನೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರಿಂದ ಮಕ್ಕಳೂ ಇಡೀ ದಿನ ಉತ್ಸವದ ಸಂಭ್ರಮದ ಭಾಗವಾದರು.

ಮಧ್ಯಾಹ್ನ ಆಗುತ್ತಿದ್ದಂತೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ ಕೆಲವರು ನಿಂತೇ ಗೋಷ್ಠಿಯನ್ನು ಆಲಿಸಿದರು. ಲೇಖಕರ ಹಸ್ತಾಕ್ಷರ ಪಡೆಯುವ ಅವಕಾಶವನ್ನೂ ಒದಗಿಸಲಾಗಿತ್ತು. ಲೇಖಕಿ ಸುಧಾಮೂರ್ತಿ ಅವರ ಹಸ್ತಾಕ್ಷರ ಪಡೆಯಲು ಪುಸ್ತಕ ಪ್ರೇಮಿಗಳು ಮುಗಿಬಿದ್ದಿದ್ದರು. ಮಕ್ಕಳು ಸೇರಿ ವಿವಿಧ ವಯೋಮಾನದವರು ಗಂಟೆಗಟ್ಟಲೆ ಸರದಿಯಲ್ಲಿ ನಿಂತು ಅವರ ಹಸ್ತಾಕ್ಷರ ಪಡೆದುಕೊಂಡರು. ಗೋಷ್ಠಿಗಳಲ್ಲಿ ಹೊಸ ಪುಸ್ತಕಗಳು ಹಾಗೂ ಅವುಗಳ ಲೇಖಕರನ್ನೂ ಪರಿಚಯಿಸಲಾಯಿತು. ಈ ಬಾರಿ 350 ಲೇಖಕರು ಹಾಗೂ ಭಾಷಣಕಾರರು ಗೋಷ್ಠಿಗಳಲ್ಲಿ ಭಾಗವಹಿಸಿದ್ದರು. ನಾಡಿನ ಜತಗೆ ಹೊರರಾಜ್ಯ, ಹೊರದೇಶದ ಬರಹಗಾರರೂ ತಮ್ಮ ವಿಚಾರಧಾರೆಗಳನ್ನು ಹಂಚಿಕೊಂಡರು.

ಚುನಾವಣೆಯಲ್ಲಿ ಸ್ಪರ್ಧಿಸದಿರುವ ಸುಳಿವು ನೀಡಿದ ಮಾಜಿ ಸಚಿವ ರಮೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಕೋಲಾರ: ‘ಒಂದೂವರೆ ವರ್ಷದಿಂದ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಮತ್ತೆ ಚುನಾವಣೆಗೆ ನಿಲ್ಲುವ ಆಸೆ ಇದ್ದಿದ್ದರೆ ಬಿಳಿ ಷರ್ಟ್ ಹಾಕಿಕೊಂಡು ಮದುವೆ, ಮುಂಜಿ, ರಥೋತ್ಸವ ಅಂತ ಓಡಾಡಬಹುದಿತ್ತು’ ಎಂದು ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್ ಹೇಳಿದರು.



ಕೆ.ಆರ್.ರಮೇಶ್ ಕುಮಾರ್

ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಭಾನುವಾರ ಕೆಪಿಸಿಸಿ ಮಾಜಿ ಉಪಾಧ್ಯಕ್ಷ ಜನಘಟ್ಟ ವೆಂಕಟ ಮುನಿಯಪ್ಪ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಸ್ಪರ್ಧಿಸದಿರುವ ಸುಳಿವು ನೀಡಿದರು.

‘ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಸೋತಿದ್ದಕ್ಕೆ ನನಗೆ ಬೇಸರ ಇಲ್ಲ. ಈ ಹಿಂದೆ ನಾಲ್ಕು ಬಾರಿ ಸೋತಿದ್ದೆ. ಇದು ಐದನೇ ಸೋಲು ಅಷ್ಟೆ. ಆದರೆ, ನಂಬಿಕೆ ದ್ರೋಹದಿಂದ ಸೋಲುಂಟಾಗಿದ್ದು ಜೀವನದಲ್ಲಿ ಸೋತಿದ್ದೇನೆ. ಜತೆಯಲ್ಲೇ ಇದ್ದು, ಭುಜದ ಮೇಲೆ ಕೈಹಾಕಿ ಬೆನ್ನಿಗೆ ಚೂರಿ ಹಾಕಿದರು. ಊಟಕ್ಕೆ ಕರೆದು ವಿಷ ಹಾಕಿದರು. ಜತೆಯಲ್ಲೇ ಇದ್ದು ಕಾಲಿಗೆ ಅಡ್ಡ ಇಟ್ಟು ಬೀಳಿಸಿದರು. ದೇವರಿಗೆ ನಮಸ್ಕಾರ ಹಾಕಿ ಮಲಗಿದ್ದಾಗ ಕುತ್ತಿಗೆಗೆ ಕತ್ತಿ ಇಟ್ಟರು’ ಎಂದು ಬೇಸರಪಟ್ಟರು. ‘ಈ ಕಾರ್ಯಕ್ರಮಕ್ಕೆ ಬರಲೂ ಯೋಚನೆ ಮಾಡಿದೆ. ಕಡೆ ಪಕ್ಷ ನನ್ನ ಮುಖ ನೋಡಲಿ, ಮುಂದೆ ಇರುತ್ತೇನೋ ಇಲ್ಲವೋ ಎನ್ನುವ ಕಾರಣಕ್ಕೆ ಬಂದೆ’ ಎಂದರು.

‘ಈಗ ಚುನಾವಣೆ ಎಂದರೆ ಚಳಿ, ಜ್ವರ, ವಾಂತಿ, ಭೇದಿಯೂ ಬರುತ್ತದೆ. ಗ್ರಾಮ ಪಂಚಾಯಿತಿ ಚುನಾವಣೆಗೂ ಶ್ರೀಮಂತರು, ಬಂಡವಾಳಶಾಹಿಗಳು, ಬಾರ್, ಕ್ವಾರಿ, ರಿಯಲ್ ಎಸ್ಟೇಟ್ ಕುಳಗಳು, ಶಿಕ್ಷಣ ಸಂಸ್ಥೆಯವರು ಬಂಡವಾಳ ಹೂಡಿ ಸ್ಪರ್ಧಿಸುವ ಕಾಲ ಬಂದಿದೆ. ಯಾರೂ ಲಾಭವಿಲ್ಲದೆ ಚುನಾವಣೆಗೆ ಸ್ಪರ್ಧಿಸಲ್ಲ. ಹಿಂದಿನಂತೆ ಸೈಕಲ್‌ನಲ್ಲಿ ಬಂದು ಹೋದರೆ ಗೆಲ್ಲಿಸುವ ಕಾಲ ಹೋಗಿದೆ’ ಎಂದು ಹೇಳಿದರು.

ತಾನೇ ಬೀಸಿದ್ದ ಬಲೆಗೆ ಸಿಲುಕಿ ಮೀನುಗಾರ ಸಾವು

ಪ್ರಜಾವಾಣಿ ವಾರ್ತೆ

ಧರ್ಮಪುರ (ಚಿತ್ರದುರ್ಗ ಜಿಲ್ಲೆ): ಮೀನು ಹಿಡಿಯಲು ತಾನೇ ಬೀಸಿದ್ದ ಬಲೆಯಲ್ಲಿ ಸಿಲುಕಿ ಮೀನುಗಾರರೊಬ್ಬರು ಮೃತಪಟ್ಟಿರುವ ಘಟನೆ ಸಮೀಪದ ಹೊಸಹಳ್ಳಿ ಗ್ರಾಮದ ಬಳಿಯಿರುವ ವೇದಾವತಿ ನದಿಯ ಬ್ಯಾರೇಜ್‌ನಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ಶಿಡ್ಲಯ್ಯನಕೋಟೆ ಗ್ರಾಮದ ಎಸ್.ಪಿ. ಶ್ರೀಧರ್ (40) ಮೃತ ವ್ಯಕ್ತಿ.

‘ಶನಿವಾರ ಸಂಜೆ ಮೀನು ಹಿಡಿಯಲೆಂದು ಅಂದಾಜು 500 ಮೀಟರ್ ವಿಸ್ತೀರ್ಣದ ಬಲೆಯನ್ನು ನೀರಿಗೆ ಹಾಕಿದ್ದ ಶ್ರೀಧರ್, ಭಾನುವಾರ ನಸುಕಿನಲ್ಲಿ ಬಲೆ ಎಳೆದು ತರಲು ಹೋಗಿದ್ದಾರೆ. ಬಲೆಯಲ್ಲಿ 20–25 ಕೆ.ಜಿ. ತೂಗುವ ಮೀನು ಸಿಲುಕಿತ್ತು. ಆದರೆ ಬಲೆಯನ್ನು ಎಳೆಯುವಾಗ ಅವರು ಅದಕ್ಕೆ ಸಿಲುಕಿಕೊಂಡು, ನೀರಿನಿಂದ ಹೊರಬರಲಾರದೇ ಮುಳುಗಿ ಮೃತಪಟ್ಟಿದ್ದಾರೆ’ ಎಂದು ಅಗ್ನಿಶಾಮಕ ಠಾಣಾಧಿಕಾರಿ ಜಿ. ಸುಭಾನ್ ಸಾಬ್ ತಿಳಿಸಿದ್ದಾರೆ.

ಮೃತದೇಹವನ್ನು ಹೊರತೆಗೆಯಲಾಯಿತು. ಅಬ್ಬಿನಹೊಳೆ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಆಂಧ್ರಪ್ರದೇಶ ಸಿ.ಎಂ ಕಚೇರಿಗೆ ನಕಲಿ ಲೆಟರ್ ಹೆಡ್ ರವಾನೆ

ತಿರುಪತಿ ಪಾಸ್: ಸಚಿವರ ಹೆಸರಲ್ಲಿ ವಂಚನೆ:ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ತುಮಕೂರು: ಗೃಹ ಸಚಿವ ಜಿ.ಪರಮೇಶ್ವರ ಚಿತ್ರವನ್ನು ವಾಟ್ಸ್‌ಆ್ಯಪ್ ಡಿ.ಪಿ ಹಾಕಿಕೊಂಡು ಆಂಧ್ರಪ್ರದೇಶದ ಮುಖ್ಯಮಂತ್ರಿ ಕಚೇರಿಗೆ ಕರೆ ಮಾಡಿ ಸಚಿವರಂತೆ ಮಾತನಾಡಿ, ತಿರುಪತಿ ದೇವಸ್ಥಾನಕ್ಕೆ ತೆರಳಲು ವಿವಿಐಪಿ ಪಾಸ್ ಪಡೆದು ವಂಚಿಸುತ್ತಿದ್ದ ಯಲಹಂಕದ ಮಾರುತಿ ಎಂಬುವವರನ್ನು ಜಿಲ್ಲೆಯ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

‘ಸಚಿವರ ನಕಲಿ ಲೆಟರ್ ಹೆಡ್, ಸಹಿ ಸೃಷ್ಟಿಸಿ ವಂಚಿಸುತ್ತಿದ್ದರು. ಲೆಟರ್ ಹೆಡ್ ಅನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿ ಕಚೇರಿಗೆ ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸುತ್ತಿದ್ದರು. ದೇವಸ್ಥಾನಕ್ಕೆ ಹೋಗಲು ವಿವಿಐಪಿ ಪಾಸ್ ಪಡೆಯುತ್ತಿದ್ದರು. ಸಚಿವರ ಹೆಸರು ದುರುಪಯೋಗ ಪಡಿಸಿಕೊಳ್ಳುತ್ತಿದ್ದರು. ದೇವರ ದರ್ಶನಕ್ಕೆ ಹೋಗುವ ಭಕ್ತರಿಂದ ಹಣ ಪಡೆದು ವಂಚಿಸುತ್ತಿದ್ದು, ಇವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ’ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಕೆ.ನಾಗಣ್ಣ ನಗರ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ವಂಚನೆ ವಿಷಯ ತಿಳಿದ ನಂತರ ಆರೋಪಿ ಹತ್ತಿರ ವಿಚಾರಿಸಿದ್ದು, ‘ಇದು ಬಹಿರಂಗವಾದರೆ ನಿಮ್ಮನ್ನು ಕೊಲೆ ಮಾಡಿಸುತ್ತೇನೆ. ಗೃಹ ಇಲಾಖೆ ಮುಖ್ಯಸ್ಥರೇ ನನ್ನಿಂದ ಇಂತಹ ಕೆಲಸ ಮಾಡಿಸಿದ್ದಾರೆ ಎಂದು ದೂರು ನೀಡುತ್ತೇನೆ. ಇದನ್ನು ಇಲ್ಲಿಗೆ ಮುಚ್ಚಿ ಹಾಕಲು ₹2 ಲಕ್ಷ ಹಣ ನೀಡಬೇಕು. ಇಲ್ಲದಿದ್ದರೆ ನಿಮ್ಮನ್ನು ಜೈಲಿಗೆ ಕಳುಹಿಸಲಾಗುವುದು’ ಎಂದು ಬೆದರಿಕೆ ಹಾಕಿದ್ದರು ಎಂದು ನಾಗಣ್ಣ ದೂರಿನಲ್ಲಿ ಆರೋಪಿಸಿದ್ದರು.

ಮೈಸೂರು ಜಿಲ್ಲೆಯ ಗೊಮ್ಮಟಗಿರಿ; ಮೂರ್ತಿಗೆ ಭಿನ್ನ ಅಭಿಷೇಕ

ಮಹಾಮಸ್ತಕಾಭಿಷೇಕ ಸಂಪನ್ನ

ಪ್ರಜಾವಾಣಿ ವಾರ್ತೆ

ಬಿಳಿಕೆರೆ (ಮೈಸೂರು ಜಿಲ್ಲೆ): ಹೋಬಳಿಯ ಬೆಟ್ಟದೂರು ಗ್ರಾಮದ ಗೊಮ್ಮಟಗಿರಿಯಲ್ಲಿ ವಿರಾಜಮಾನವಾಗಿರುವ 16 ಅಡಿ ಎತ್ತರದ ಬಾಹುಬಲಿ ಮೂರ್ತಿಗೆ ಭಾನುವಾರ ಮಹಾಮಸ್ತಕಾಭಿಷೇಕ ವಿಜೃಂಭಣೆಯಿಂದ ನೆರವೇರಿತು.

ಪ್ರಕೃತಿಯ ನಡುವೆ ಹಾಸುಹೊಕ್ಕಿರುವ ಹೆಬ್ಬಂಡೆಯ ಮೇಲಿನ ಏಕಶಿಲಾ ಮೂರ್ತಿಯ ಅಮೃತ ಮಹೋತ್ಸವ ಹಾಗೂ ಮಹಾಮಸ್ತಕಾಭಿಷೇಕದ ಅಂತಿಮ ದಿನದ ಸಂಭ್ರಮ ಸಡಗರ ಎಲ್ಲೆಡೆ ಮನೆಮಾಡಿತ್ತು.

ಶಿವಮೊಗ್ಗ ಜಿಲ್ಲೆಯ ಹೊಂಬುಜ ಜೈನ ಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ ಮತ್ತು ಭುವನ ಕೀರ್ತಿ ಸ್ವಾಮೀಜಿ ಅವರು ಮಹಾಮಸ್ತಕಾಭಿಷೇಕದ ಸಾನ್ನಿಧ್ಯ ವಹಿಸಿದ್ದರು. ಮೂರ್ತಿಗೆ ಭಕ್ತರು ನಾನಾ ಅಭಿಷೇಕ ನೆರವೇರಿಸಿದರು.

ಜಲಾಭಿಷೇಕ, ಎಳನೀರು, ಕಬ್ಬಿನ ಹಾಲು, ಅರಿಶಿನ, ಚಂದನ, ಕ್ಷೀರ, ಕಂಕಚೂರ್ಣ, ಅರಳು, ಸಕ್ಕರೆಪುಡಿ, ಅಕ್ಕಿ ಹಿಟ್ಟು, ಜೇನುತುಪ್ಪ, ಶ್ರೀಗಂಧ, ಹೀಗೆ ವಿವಿಧ ಕಷಾಯಾಭಿಷೇಕ ಸೇರಿದಂತೆ ಒಟ್ಟು 18 ಬಗೆಯ ಅಭಿಷೇಕಗಳನ್ನು ನೆರವೇರಿಸಲಾಯಿತು.

ಅಭಿಷೇಕಗಳನ್ನೂ ಕಣ್ತುಂಬಿಕೊಂಡ ಭಕ್ತರು ‘ವಿರಾಟ್ ಯೋಗಿ ಬಾಹುಬಲಿ ಮಹಾರಾಜ್ ಕೀ ಜೈ’ ಜಯಘೋಷ ಮೊಳಗಿಸಿದರು. ರಾಜ್ಯದ ವಿವಿಧೆಡೆ ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಬಂದಿದ್ದ ಸಾವಿರಾರು ಮಂದಿ ಮಸ್ತಕಾಭಿಷೇಕಕ್ಕೆ ಸಾಕ್ಷಿಯಾದರು.



ಬಿಳಿಕೆರೆ ಹೋಬಳಿಯ ಬೆಟ್ಟದೂರು ಗ್ರಾಮದ ಗೊಮ್ಮಟೇಶ್ವರ ಮೂರ್ತಿಗೆ ಭಾನುವಾರ ನಡೆದ 75ನೇ ಮಹಾಮಸ್ತಕಾಭಿಷೇಕದ ನೋಟ

ಪ್ರಸಾದ ವಿತರಣೆ: ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಬಿಳಿಕೆರೆ ಠಾಣಾ ಪೊಲೀಸರು ಬಂದೋಬಸ್ತ್ ನೆರವೇರಿಸಿದರು.

‘ಬಾಹುಬಲಿ ತ್ಯಾಗಮೂರ್ತಿ’

‘ಬಾಹುಬಲಿ ತ್ಯಾಗದ ಪ್ರತಿರೂಪ. ಸಾಮ್ರಾಜ್ಯಕ್ಕಾಗಿ ಹೋರಾಡಿದ ಬಾಹುಬಲಿ ಕೊನೆಗೆ ಎಲ್ಲ ಸಂಪತ್ತ ತ್ಯಾಗ ಮಾಡಿ ತ್ಯಾಗಮೂರ್ತಿ ಎನಿಸಿಕೊಂಡ’ ಎಂದು ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದರು.

ಇಲ್ಲಿನ ಬೆಟ್ಟದೂರು ಗ್ರಾಮದ ಗೊಮ್ಮಟಗಿರಿಯಲ್ಲಿ ನಡೆದ 75ನೇ ಮಹಾಮಸ್ತಕಾಭಿಷೇಕದಲ್ಲಿ ಆಶೀರ್ವಚನ ನೀಡಿದರು.

ಹಾಸನ ಜಿಲ್ಲೆಯ ಶ್ರವಣಬೆಳಗೊಳ ಹೊರತುಪಡಿಸಿದರೆ ಕಾರ್ಕಳ, ವೇಣೂರು, ಧರ್ಮಸ್ಥಳಗಳಲ್ಲಿ ವಿಗ್ರಹ ಅತ್ಯಂತ ಆಕರ್ಷಣೀಯವಾಗಿದೆ. ಎಲ್ಲ ಕ್ಷೇತ್ರಗಳಲ್ಲೂ 12 ವರ್ಷಗಳಿಗೊಮ್ಮೆ ಮಸ್ತಕಾಭಿಷೇಕ ನಡೆದರೆ, ಬಿಳಿಕೆರೆಯ ಗೊಮ್ಮಟಗಿರಿಯಲ್ಲಿ ಪ್ರತೀವರ್ಷ ಮಸ್ತಕಾಭಿಷೇಕ ನಡೆಯುವುದು ವಿಶೇಷ ಎಂದರು.

ಶ್ರೀರಂಗಪಟ್ಟಣ ಕೇಸರಿಮಯ; ಆದಿಶಂಕರ ಮಠದಿಂದ ಶ್ರೀರಂಗನಾಥಸ್ವಾಮಿ ದೇಗುಲದವರೆಗೆ ಯಾತ್ರೆ

ಹನುಮ ಮಾಲಾಧಾರಿಗಳ ಸಂಭ್ರಮ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಮೂಡಲಬಾಗಿಲು ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಪ್ರಯುಕ್ತ ದ್ವೀಪ ಪಟ್ಟಣವು ಭಾನುವಾರ ಕೇಸರಿಮಯವಾಗಿತ್ತು.

ಗಂಜಾಂನ ಆದಿಶಂಕರ ಮಠದಿಂದ ಶ್ರೀರಂಗನಾಥಸ್ವಾಮಿ ದೇವಾಲಯದವರೆಗೆ 4 ಕಿ.ಮೀ. ಮಾರ್ಗದುದ್ದಕ್ಕೂ ಕೇಸರಿ ಬಣ್ಣದ ಧ್ವಜ, ಫ್ಲೆಕ್ಸ್ ಮತ್ತು ಬಂಟಿಂಗ್ಸ್ ರಾರಾಜಿಸಿದವು. ಜೈ ಶ್ರೀರಾಮ್, ಜೈ ಭಜರಂಗಿ, ಶಿವಾಜಿ ಮಹಾರಾಜ್ ಕಿ ಜೈ ಎಂಬ ಘೋಷಣೆಗಳು ಮೊಳಗಿದವು. ಆಂಜನೇಯ, ಶ್ರೀರಾಮ ಉತ್ಸವ ಮೂರ್ತಿಗಳ ಮೆರವಣಿಗೆ ನಡೆಯಿತು. ವೀರಗಾಸೆ ಕಲಾವಿದರು, ಹನುಮಂತ ಹಾಗೂ ಶ್ರೀರಾಮ ವೇಷಧಾರಿಗಳು ಹೆಜ್ಜೆ ಹಾಕಿದ್ದರು. ಜನಪದ ಕಲಾವಿದರು ಕಹಳೆ ಮೊಳಗಿಸಿದರು. ಸಾರ್ವಜನಿಕರು ಮಾಲಾಧಾರಿಗಳಿಗೆ ಮಜ್ಜಿಗೆ, ಪಾನಕ, ಹಣ್ಣಿನ ವಿತರಣೆ ಮಾಡಿದರು.

ಮಾಲಾಧಾರಿಗಳು ಟಿಪ್ಪು ಮಸೀದಿ ಬಳಿಯ ವೃತ್ತದಲ್ಲಿ ಕುಳಿತು ರಾಮನ ಭಜನೆ ಮಾಡಿದರು. ಮಸೀದಿಯತ್ತ ಕೈ ತೋರಿಸಿ ‘ಮಂದಿರವಲ್ಲೇ ಕಟ್ಟುವೆವು....’ ಎಂದು ಕೂಗಿದರು. ಇಲ್ಲಿ ಅರ್ಧ ಗಂಟೆಗಿಂತ ಹೆಚ್ಚಿನ ಕಾಲ ಜಮಾಯಿಸಿದ್ದರಿಂದ ಮಸೀದಿಯತ್ತ ಒಬ್ಬರೂ ಸುಳಿಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಸೇರಿದಂತೆ ವಿವಿಧೆಡೆಯಿಂದ ಹನುಮನ ಭಕ್ತರು ಆಗಮಿಸಿದ್ದರು. ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಟಿ. ಶ್ರೀಧರ್, ಉಮೇಶ್ ಪಾಲ್ಗೊಂಡಿದ್ದರು.



ಶ್ರೀರಂಗಪಟ್ಟಣದಲ್ಲಿ ಭಾನುವಾರ ನಡೆದ ಮೂಡಲ ಬಾಗಿಲು ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಗಂಜಾಂನ ಮುಖ್ಯ ಬೀದಿಯಲ್ಲಿ ಸಾಗಿತು

ಸಂಕೀರ್ತನಾ ಯಾತ್ರೆಗೂ ಮುನ್ನ ಗಂಜಾಂನ ಆದಿಶಂಕರ ಮಠದ ಬಳಿ ನಡೆದ ಮಾಲಾಧಾರಿಗಳ ಸಭೆ ಯಲ್ಲಿ ಹಿಂದೂ ಜಾಗರಣಾ ವೇದಿಕೆ ದಕ್ಷಿಣ ಪ್ರಾಂತ್ಯ ಸಂಚಾಲಕ ದೊ. ಕೇಶವ ಮೂರ್ತಿ ಮಾತನಾಡಿ, ‘ಇದುವರೆಗೆ ಹನುಮ ಜಯಂತಿ ನಿಮಿತ್ತ ಸಂಕೀರ್ತನಾ ಸಂದರ್ಭದಲ್ಲಿ ಮಾತ್ರ ಹನುಮ ಮಾಲೆ ಧರಿಸುವ ಸಂಪ್ರದಾಯ ಇತ್ತು. ಮೂಡಲ ಬಾಗಿಲು ಹನುಮಾನ್ ದೇವರ ಮೂರ್ತಿ ಸ್ವಸ್ಥಾನದಲ್ಲಿ ಪ್ರತಿಷ್ಠಾಪನೆ ಆಗುವವರೆಗೆ ಹನುಮನ ಭಕ್ತರು ವರ್ಷ ಪೂರ್ತಿ ಮಾಲಾಧಾರಣೆ ಮಾಡಲಿದ್ದಾರೆ’ ಎಂದರು.

‘ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸಿದಂತೆ ಶ್ರೀರಂಗಪಟ್ಟಣದಲ್ಲಿ ಮಸೀದಿ ಇರುವ ಜಾಗದಲ್ಲಿ ಹನುಮನ ಮಂದಿರ ನಿರ್ಮಾಣ ಆಗಬೇಕು. ಅದಕ್ಕಾಗಿ ಹಿಂದೂ ಜಾಗರಣಾ ವೇದಿಕೆ ದೃಢಸಂಕಲ್ಪ ಮಾಡಿದೆ. ಈ ಸಂಕಲ್ಪ ಈಡೇರುವವರೆಗೆ ಪಟ್ಟಣದಲ್ಲಿ ಹನುಮಾನ್ ಮಾಲಾಧಾರಣೆ ಪ್ರಕ್ರಿಯೆ ನಿರಂತರವಾಗಿ ನಡೆಯಲಿದೆ’ ಎಂದು ತಿಳಿಸಿದರು.

‘ವಿಜಯನಗರ ಕಾಲದ ದೇಗುಲ’

‘ಈ ಪಟ್ಟಣದಲ್ಲಿದ್ದ ವಿಜಯನಗರದ ಅರಸರ ಪ್ರತಿನಿಧಿ ತಿಮ್ಮಣ್ಣ ದಂಡನಾಯಕ ಕ್ರಿ.ಶ.1474ರಲ್ಲಿ ಹನುಮಾನ್ ಮಂದಿರವನ್ನು ನಿರ್ಮಿಸಿದ್ದ. ಅದಕ್ಕೆ ಸಂಬಂಧಿಸಿದ ದಾಖಲೆಗಳೂ ಇವೆ. ಟಿಪ್ಪು ಸುಲ್ತಾನ್ ಆ ಮಂದಿರವನ್ನು ಕೆಡವಿ ಮಸೀದಿ ಕಟ್ಟಿದ್ದಾನೆ. ಈ ಬಗ್ಗೆ ಸಮಿತಿ ರಚಿಸಿ ಚರ್ಚೆಗೆ ಅವಕಾಶ ನೀಡಿದರೆ ದಾಖಲೆಗಳನ್ನು ನೀಡಲು ಸಿದ್ಧ’ ಎಂದು ದೇವಾಲಯಗಳ ಸಂವರ್ಧನಾ ಸಮಿತಿ ರಾಜ್ಯ ಸಂಯೋಜಕ ಮನೋಹರ ಮಠದ ಹೇಳಿದರು.

ಅನುದಾನಕ್ಕಾಗಿ ಶಾಸಕರ ಅಳಲು • ಬಳಕೆಯಾಗದೆ ಜಿಲ್ಲಾಧಿಕಾರಿಗಳ ಖಾತೆಯಲ್ಲೇ ಉಳಿದ ಹಣ

ಕೆಲ್ಯಾಡ್ಸ್: ₹1,230 ಕೋಟಿ ಬಾಕಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪಂಚ 'ಗ್ಯಾರಂಟಿ'ಗಳ ಕಾರಣದಿಂದಾಗಿ ಅಭಿವೃದ್ಧಿ ಯೋಜನೆಗಳಿಗೆ ಅನುದಾನದ ಕೊರತೆ ಎದುರಾಗಿದೆ ಎಂದು ಪಕ್ಷಾತೀತವಾಗಿ ಶಾಸಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದರೆ, ಅತ್ತ 'ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ'ಯಡಿ (ಕೆಲ್ಯಾಡ್ಸ್–ಶಾಸಕರ ನಿಧಿ) ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ₹1,230.24 ಕೋಟಿ ಬಳಕೆಯಾಗದೇ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಯಲ್ಲಿ ಬಾಕಿಯಿದೆ.

ಪ್ರತಿಯೊಬ್ಬ ಶಾಸಕರಿಗೆ ಕೆಲ್ಯಾಡ್ಸ್ ಯೋಜನೆಯಡಿ ವಾರ್ಷಿಕ ತಲಾ ₹2 ಕೋಟಿಯನ್ನು ನಾಲ್ಕು ಕಂತುಗಳಲ್ಲಿ ತಲಾ ₹50 ಲಕ್ಷದಂತೆ ಬಿಡುಗಡೆ ಮಾಡಲಾಗುತ್ತಿದೆ. ವಿಧಾನಸಭೆಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ಅಧಿಕಾರದ ಅವಧಿ ಆಧರಿಸಿ ಈ ಮೊತ್ತವನ್ನು ಪಿ.ಡಿ ಖಾತೆಗಳಿಗೆ ಸರ್ಕಾರ ಜಮೆ ಮಾಡುತ್ತಿದೆ.

ಕೆಲ್ಯಾಡ್ಸ್ ಅನುದಾನದಲ್ಲಿ ಹಿಂದಿನ ಬಾಕಿ (2024ರ ಏಪ್ರಿಲ್ 1ಕ್ಕೆ) ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ₹988.59 ಕೋಟಿ ಲಭ್ಯವಿತ್ತು. ಪ್ರಸಕ್ತ ಸಾಲಿನ ಎರಡು ಕಂತುಗಳ ಒಟ್ಟು ₹292. 50 ಕೋಟಿ ಅಕ್ಟೋಬರ್ ತಿಂಗಳ ಒಳಗೆ ಮತ್ತು ಮೂರನೇ ಕಂತಿನ ಒಟ್ಟು ₹147.50 ಕೋಟಿ ನ. 25ರಂದು ಬಿಡುಗಡೆ ಆಗಿದೆ. ಹೀಗೆ ಲಭ್ಯ ಒಟ್ಟು ಅನುದಾನದಲ್ಲಿ ನ. 22ರವರೆಗೆ ಕೇವಲ ₹198.26 ಕೋಟಿಯಷ್ಟೆ ವೆಚ್ಚವಾಗಿದೆ.

ಕೆಲ್ಯಾಡ್ಸ್– ಅಂಕಿಅಂಶ

₹1,230.24 ಕೋಟಿ
ಎಲ್ಲ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿರುವ ಮೊತ್ತ

₹198.26 ಕೋಟಿ
ನ. 22ರವರೆಗೆ ವೆಚ್ಚ

28,551
ಒಟ್ಟು ಕಾಮಗಾರಿಗಳು

3,355
ಪೂರ್ಣಗೊಂಡ ಕಾಮಗಾರಿಗಳು

24,662
ಪ್ರಗತಿಯಲ್ಲಿರುವ ಕಾಮಗಾರಿಗಳು

6,907
ಮಂಜೂರಾತಿಯೇ ನೀಡದ ಕಾಮಗಾರಿಗಳು

ನಿಯಮ ಉಲ್ಲಂಘಿಸಿ ಹಣ ಪಾವತಿ

ಕೆಲ್ಯಾಡ್ಸ್ ಯೋಜನೆಯ ಮಾರ್ಗಸೂಚಿಯ ಪ್ರಕಾರ, ಎರಡು ವರ್ಷವಾದರೂ ಆರಂಭವಾಗದ ಕಾಮಗಾರಿಗಳನ್ನು ಈಗ ಆರಂಭಿಸಲು ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳಿಗೆ ಅವಕಾಶ ಇಲ್ಲ. ಅಂತಹ 3,462 ಕಾಮಗಾರಿಗಳಿದ್ದು, ಅವುಗಳ ಮೊತ್ತ ₹154.10 ಕೋಟಿ. ಅಲ್ಲದೆ, ಈ ಮಾರ್ಗಸೂಚಿಯನ್ನು ಉಲ್ಲಂಘಿಸಿ ₹105.56 ಕೋಟಿ ಮೊತ್ತದ 2,313 ಕಾಮಗಾರಿಗಳಿಗೆ ಮಂಜೂರಾತಿ ನೀಡಿರುವುದೂ ಗೊತ್ತಾಗಿದೆ. ಅದರಲ್ಲಿ ₹76.94 ಕೋಟಿ ಪಾವತಿ ಕೂಡಾ ಆಗಿದೆ. ಬಿಡುಗಡೆಗೆ ಇನ್ನೂ ₹28.62 ಕೋಟಿ ಬಾಕಿಯಿದೆ. ಬೆಳಗಾವಿ, ಮೈಸೂರು, ಕೊಪ್ಪಳ, ರಾಮನಗರ, ಹಾಸನ ಜಿಲ್ಲೆಗಳಲ್ಲಿ ನಿಯಮ ಉಲ್ಲಂಘಿಸಿ ಹಣ ಪಾವತಿಸಿರುವುದು ತಂತ್ರಾಂಶದಲ್ಲಿ ದಾಖಲಾಗಿರುವ ದತ್ತಾಂಶಗಳಿಂದ ಗಮನಕ್ಕೆ ಬಂದಿದೆ.

ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳ ಜೊತೆ ಕೆಲ್ಯಾಡ್ಸ್ ಯೋಜನೆಯ ಪ್ರಗತಿ ಕುರಿತು ಯೋಜನಾ ಸಚಿವ ಡಿ. ಸುಧಾಕರ್ ಅವರು ನ. 25ರಂದು ವಿಡಿಯೊ ಸಂವಾದ ನಡೆಸಿದ್ದರು. ಈ ವೇಳೆ ಉಡುಪಿ ಮತ್ತು ಹಾಸನ ಜಿಲ್ಲೆಗಳನ್ನು (ತಲಾ ಶೇ 35) ಬಿಟ್ಟು ಉಳಿದ ಎಲ್ಲ ಜಿಲ್ಲೆಗಳಲ್ಲಿ ಯೋಜನೆಯ ಪ್ರಗತಿ ಅತ್ಯಂತ ಕಳಪೆಯಾಗಿರುವುದು ಬಹಿರಂಗವಾಗಿದೆ ಎಂದು ಜಿಲ್ಲಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳ ಹಂತದಲ್ಲಿ ಈವರೆಗೆ ₹621.16 ಕೋಟಿ ಮೊತ್ತದ ಕಾಮಗಾರಿಗಳಿಗೆ ಮಾತ್ರ ಅನುಮೋದನೆ ನೀಡಲಾಗಿದೆ. ₹455.19 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ಬಾಕಿಯಿದೆ. ಪರಿಶಿಷ್ಟ ಜಾತಿ ವಿಶೇಷ ಘಟಕ (ಎಸ್‌ಸಿಎಸ್‌ಪಿ) ಯೋಜನೆಯಲ್ಲಿ ಲಭ್ಯವಿದ್ದ ₹241.49 ಕೋಟಿಯಲ್ಲಿ ಕೇವಲ ₹31.32 ಕೋಟಿ ವೆಚ್ಚವಾಗಿದೆ. ಗಿರಿಜನ ಉಪ ಯೋಜನೆಯಲ್ಲಿ (ಟಿಎಸ್‌ಪಿ) ₹139.87 ಕೋಟಿಯಲ್ಲಿ ₹13.07 ಕೋಟಿಯಷ್ಟೆ ಖರ್ಚಾಗಿದೆ.

ಕ್ರಿಯಾಯೋಜನೆ ಸಲ್ಲಿಕೆಯೇ ವಿಳಂಬ: ಕೆಲ್ಯಾಡ್ಸ್ ಯೋಜನೆಯಡಿ 2023–24ನೇ ಸಾಲಿನಲ್ಲಿ ₹600 ಕೋಟಿ ಬದಲಾಗಿ ₹427 ಕೋಟಿ ಮೊತ್ತದ ಕಾಮಗಾರಿಗಳಿಗೆ ಮಾತ್ರ ಕ್ರಿಯಾ ಯೋಜನೆ ರೂಪಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ₹600 ಕೋಟಿಯ ಬದಲು ₹90.50 ಕೋಟಿ ಮೊತ್ತಕ್ಕೆ (ಈವರೆಗೆ) ಕ್ರಿಯಾ ಯೋಜನೆ ರೂಪಿಸಲಾಗಿದೆ. ಶಾಸಕರು ಕ್ರಿಯಾ ಯೋಜನೆಗಳನ್ನು ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳಿಗೆ ಸಲ್ಲಿಸಲು ಬಹಳ ವಿಳಂಬ ಮಾಡಿರುವುದು ವಿಡಿಯೊ ಸಂವಾದದ ಸಂದರ್ಭದಲ್ಲಿ ಗೊತ್ತಾಗಿದೆ.

ಸಚಿವರ ಸೂಚನೆಗಳು

- ಎಲ್ಲ ಜಿಲ್ಲಾಧಿಕಾರಿಗಳು ಕೆಲ್ಯಾಡ್ಸ್ ಯೋಜನೆಯ ಬಾಕಿ ಮೊತ್ತದಲ್ಲಿ ಕನಿಷ್ಠ ₹1,000 ಕೋಟಿಯನ್ನು ತಿಂಗಳ ಒಳಗೆ ವೆಚ್ಚ ಮಾಡಬೇಕು
- ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿ ಒದಗಿಸಿದ ಮೊತ್ತವನ್ನು ಶೇ 100ರಷ್ಟು ಖರ್ಚು ಮಾಡಬೇಕು
- ಪ್ರಗತಿಯಲ್ಲಿರುವ 24,662 ಕಾಮಗಾರಿಗಳನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಬೇಕು
- ಅನುಮೋದನೆ ನೀಡಬೇಕಾದ 6,907 ಕಾಮಗಾರಿಗಳಿಗೆ ತಕ್ಷಣ ಮಂಜೂರಾತಿ ನೀಡಬೇಕು
- 2023–24ನೇ ಸಾಲಿನಲ್ಲಿ ಬಾಕಿ ಇರುವ ₹173 ಕೋಟಿ ಮತ್ತು ಪ್ರಸಕ್ತ ಸಾಲಿನ ₹509.50 ಕೋಟಿಯ ಕ್ರಿಯಾ ಯೋಜನೆಯನ್ನು 15 ದಿನಗಳ ಒಳಗೆ ಅನುಷ್ಠಾನ ಗೊಳಿಸಬೇಕು
- ಎರಡು ವರ್ಷವಾದರೂ ಆರಂಭವಾಗದ ಕಾಮಗಾರಿಗಳ ಅಂದಾಜು ಮೊತ್ತ ₹154.10 ಕೋಟಿಯನ್ನು ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು
- ಮಾರ್ಗಸೂಚಿ ಉಲ್ಲಂಘಿಸಿ ಮಂಜೂರಾತಿ ನೀಡಿರುವ ಕಾಮಗಾರಿಗಳನ್ನು ರದ್ದುಪಡಿಸಿ, ಅದರ ಅನುದಾನವನ್ನೂ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು



ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಉತ್ತರಾಧಿಕಾರಿಯಾಗಿ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅವರು ನಾಡಿನ ನೂರಾರು ಸ್ವಾಮೀಜಿಗಳ ಸಮ್ಮುಖದಲ್ಲಿ ಭಾನುವಾರ ಜವಾಬ್ದಾರಿ ವಹಿಸಿಕೊಂಡರು

ಸನ್ಯಾಸತ್ವ ದೀಕ್ಷೆ ಪಡೆದ ಎಚ್.ಎಲ್.ನಾಗರಾಜ್

ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅವರು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿಯಾಗಿ ನೂರಾರು ಸ್ವಾಮೀಜಿಗಳ ಸಮ್ಮುಖದಲ್ಲಿ ಭಾನುವಾರ ಜವಾಬ್ದಾರಿ ವಹಿಸಿಕೊಂಡರು.

ಮೈಸೂರು ರಸ್ತೆಯ ಕೆಂಗೇರಿಯಲ್ಲಿರುವ ಮಠದ ಆವರಣದಲ್ಲಿ ವಿಧಿ ವಿಧಾನಗಳೊಂದಿಗೆ ಸನ್ಯಾಸತ್ವ ದೀಕ್ಷೆ ಪಡೆದ ನಿವೃತ್ತ ಕೆ.ಎ.ಎಸ್ ಅಧಿಕಾರಿ ಎಚ್.ಎಲ್.ನಾಗರಾಜ್ ನಾಡಿನ ಮಠಾಧೀಶರು, ಸಾವಿರಾರು ಜನರ ಸಮ್ಮುಖದಲ್ಲಿ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಎಂಬ ನಾಮಾಂಕಿತದೊಂದಿಗೆ ಪೀಠ ಏರಿದರು.

ನಿಡುಮಾಮಿಡಿ ಜಗದ್ಗುರು ಮಠದ ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ ಮಾತನಾಡಿ, 'ಕೆ.ಎ.ಎಸ್‌ನಂತಹ ಅಧಿಕಾರ ಹೊಂದಿದವರು ಲೌಕಿಕ ಆಕರ್ಷಣೆ ತೊರೆದು ಸನ್ಯಾಸತ್ವ ಸ್ವೀಕರಿಸುವುದು ಅಸಾಮಾನ್ಯ ಸಂಗತಿ. ಭಕ್ತರು ಹಾಗೂ ಸಮಾಜದ ಒಳಿತಿಗೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕು. ಗುರುಗಳಿಗೆ ನಿಷ್ಠನಾಗಿರಬೇಕು' ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಆದಿ ಚುಂಚನಗಿರಿ ಮಠ ಹಾಗೂ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಎರಡೂ ಮಠಕ್ಕೂ ಇರುವುದು ಒಂದೇ ಪರಂಪರೆ, ಒಬ್ಬರೇ ಗುರು. ಒಂದೇ ಸಮುದಾಯವರಾದ ನಾವು ಎಂದಿಗೂ ಒಂದೇ ತಾಯಿಯ ಮಕ್ಕಳು ಎಂದು ಸ್ಪಷ್ಟಪಡಿಸಿದರು. ನಮಗೆ ಮೂರನೇ ವ್ಯಕ್ತಿಯ ಅವಶ್ಯಕತೆ ಬರಬಾರದು ಎಂದೂ ಹೇಳಿದರು.

ಶ್ರೀಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಮಾತನಾಡಿ, 'ನನಗೆ 80 ವರ್ಷ ಆಗಿರುವುದರಿಂದ ಆರೋಗ್ಯ ಕ್ಷೀಣಿಸುತ್ತಿದೆ. ಹೀಗಾಗಿ, ಮುಂದಿನ ಉತ್ತರಾಧಿಕಾರಿ ಮಾಡಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಲಾಯಿತು. ಅದರಂತೆ ನಾವು ಎಚ್.ಎಂ ನಾಗರಾಜ್ ಅವರ ಪಟ್ಟಾಭಿಷೇಕ ಮಾಡಿದ್ದೇವೆ. ಬಡ ಜನರು ಮೆಡಿಕಲ್ ವಿದ್ಯಾಭ್ಯಾಸ ಮಾಡಲು ಕಾಲೇಜು ನಿರ್ಮಾಣದ ಸಂಕಲ್ಪ ಮಾಡಬೇಕಾಗಿದೆ. ನಿಮ್ಮೆಲ್ಲರ ಸಹಕಾರ ಬೇಕು' ಎಂದರು.

ಉತ್ತರಾಧಿಕಾರಿ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, 'ನಾನು ಇಂದು ಸಮಾಜಕ್ಕೆ ಅರ್ಪಣೆಯಾಗಲು ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳು ಹಾಗೂ ಆದಿಚುಂಚನಗಿರಿ ಶ್ರೀಗಳು ಕಾರಣ' ಎಂದರು.

'ಸಂಸ್ಥಾನ ಮಠಕ್ಕೆ ಹಲವರ ತ್ಯಾಗದ ಕೊಡುಗೆ ಇದೆ. ನಾನು ಎಲ್ಲವನ್ನೂ ತ್ಯಾಗ ಮಾಡಿ ಬಂದಿದ್ದೇನೆ. ನಿರ್ಮಲಾನಂದನಾಥ ಶ್ರೀಗಳು ಕೂಡ ನನಗೆ ಸಲಹೆ ನೀಡಿದ್ದಾರೆ. ಹಿಂಜರಿಕೆ ಇಲ್ಲದೆ ನಾವಿಬ್ಬರೂ ಸಮಾಜವನ್ನು ಮುನ್ನಡೆಸೋಣ ಎಂದಿದ್ದಾರೆ' ಎಂದು ಹೇಳಿದರು. ಪಟ್ಟಾಧಿಕಾರ ಕಾರ್ಯಕ್ರಮಕ್ಕೆ ಆದಿಚುಂಚನಗಿರಿ ಶ್ರೀಗಳು ಬರುವುದಿಲ್ಲ ಎಂದು ಹಲವರು ಹೇಳಿದ್ದರು. ಆದರೆ, ಇಂದು ನನ್ನ ಪಕ್ಕ ಕುಳಿತು ನನ್ನ ಶಕ್ತಿಯಾಗಿ ನಿಂತಿದ್ದಾರೆ ಎಂದು ಕೃತಜ್ಞತೆ ಸೂಚಿಸಿದರು.

ಸ್ಫಟಿಕಪುರಿ ಮಹಾ ಸಂಸ್ಥಾನದ ನಂಜಾವದೂತ ಸ್ವಾಮೀಜಿ, ಅವಧೂತ ವಿನಯ್ ಗುರೂಜಿ, ಬೇಲಿಮಠದ ಶಿವಾನುಭವ ಚರಮೂರ್ತಿ ಮಹಾಸ್ವಾಮೀಜಿ, ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟಾಧ್ಯಕ್ಷರು, ಮಧುರೆ ಭಗೀರಥ ಪೀಠದ ಪುರುಷೋತ್ತಮಾನಂದ ಮಹಾಸ್ವಾಮೀಜಿ, ವಿಶ್ವಕರ್ಮ ಏಕದಂಡಗಿ ಪೀಠದ ಕಾಳಹಸ್ತೇಂದ್ರ ಮಹಾಸ್ವಾಮೀಜಿ, ಮುಖಂಡರಾದ ಪಂಚಲಿಂಗಯ್ಯ, ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

'ನಕ್ಸಲ್ ಚಟುವಟಿಕೆ ತೀವ್ರ ಇಳಿಮುಖ'

ನವದೆಹಲಿ: ಈ ವರ್ಷ ನಕ್ಸಲ್ ಚಟುವಟಿಕೆಗಳು ತೀವ್ರ ಇಳಿಕೆ ದಾಖಲಿಸಿದ್ದು, 2023ಕ್ಕೆ ಹೋಲಿಸಿದರೆ ಭದ್ರತಾ ಪಡೆಗಳ ಸಾವಿನ ಸಂಖ್ಯೆಯಲ್ಲಿ ಶೇ 25ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಬಿಡುಗಡೆಗೊಳಿಸಿದ ಅಂಕಿ- ಅಂಶಗಳಿಂದ ದೃಢಪಟ್ಟಿದೆ.

ರಾಜ್ಯಸಭೆ, ಲೋಕಸಭೆಯಲ್ಲಿ ಸದಸ್ಯರಿಗೆ ಕೇಳಿದ ಪ್ರಶ್ನೆಗೆ ಗೃಹ ಇಲಾಖೆಯ ರಾಜ್ಯ ಖಾತೆ ಸಚಿವ ನಿತ್ಯಾನಂದ ರಾಯ್ ಅವರು ಈ ಮಾಹಿತಿ ನೀಡಿದ್ದಾರೆ. ರಾಜ್ಯಸಭಾ ಸಂಸದ ಪರಿಮಾಳ್ ನಾಥವಾನಿ ಹಾಗೂ ಲೋಕಸಭಾ ಸಂಸದರಾದ ಅನಿಲ್ ಬಲುನಿ, ಕಿರ್ಸಾನ್ ನಾಮ್‌ದೇವ್ ಈ ಕುರಿತು ಪ್ರಶ್ನೆ ಕೇಳಿದ್ದರು.

ತಾಪಮಾನ ಕುಸಿತ, ಚಳಿ ಹೆಚ್ಚಳ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ತಾಪಮಾನ ಕುಸಿತದಿಂದ ಚಳಿ ಹೆಚ್ಚಾಗುತ್ತಿದ್ದು, ಸೋಮವಾರದಿಂದ ಮುಂದಿನ ಮೂರು ದಿನಗಳು ಕನಿಷ್ಠ ತಾಪಮಾನ 2ರಿಂದ 4 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಭಾನುವಾರ ಸಂಜೆ 5.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಗರಿಷ್ಠ ಉಷ್ಣಾಂಶ 26.6 ಡಿಗ್ರಿ ಸೆಲ್ಸಿಯಸ್ ವರದಿಯಾದರೆ, ಕನಿಷ್ಠ ಉಷ್ಣಾಂಶ 16.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಕನಿಷ್ಠ ಉಷ್ಣಾಂಶ ಇನ್ನಷ್ಟು ಕಡಿಮೆಯಾಗಿದ್ದು, 15.4 ಡಿಗ್ರಿ ಸೆಲ್ಸಿಯಸ್‌ನಷ್ಟು ವರದಿಯಾಗಿದೆ. ಇದರಿಂದಾಗಿ ಬೆಳಿಗ್ಗೆ ಅವಧಿಯಲ್ಲಿ ಚಳಿ ಹೆಚ್ಚಾಗಿತ್ತು.

ಉತ್ತರ ಒಳನಾಡಿನಲ್ಲಿ ಗದಗದಲ್ಲಿ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ 6.5 ಡಿಗ್ರಿ ಸೆಲ್ಸಿಯಸ್ (27.5 ಡಿಗ್ರಿ ಸೆಲ್ಸಿಯಸ್) ಕಡಿಮೆ ವರದಿಯಾದರೆ, ಕೊಪ್ಪಳದಲ್ಲಿ 5.3 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಕುಸಿತವಾಗಿದೆ. ಇದೇ ರೀತಿ ಉತ್ತರ ಒಳನಾಡಿನ ಹಲವು ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿತ್ರದುರ್ಗ, ಬೆಂಗಳೂರು ಸೇರಿ ಕೆಲ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶವೂ ಕುಸಿತ ಕಂಡಿದೆ.

ಮಂಗಳವಾರದಿಂದ ರಾಜ್ಯದ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಚಾಮರಾಜನಗರ, ತುಮಕೂರು, ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಒಕ್ಕಲಿಗರ ಸಂಘಕ್ಕೆ ಕೆಂಚಪ್ಪಗೌಡ ಅಧ್ಯಕ್ಷ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಬಿ.ಕೆಂಚಪ್ಪಗೌಡ ಆಯ್ಕೆ ಆಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಘದ ಅಧ್ಯಕ್ಷ, ಇತರ ಹುದ್ದೆಗಳಿಗೆ ಭಾನುವಾರ ಚುನಾವಣೆ ನಡೆಯಿತು. ಉಪಾಧ್ಯಕ್ಷರಾಗಿ ಎಲ್.ಶ್ರೀನಿವಾಸ್ ಮತ್ತು ರೇಣುಕಾಪ್ರಸಾದ್ ಆಯ್ಕೆಯಾದರು.

ಟಿ.ಕೋನಪ್ಪ ರೆಡ್ಡಿ ಅವರು ಪ್ರಧಾನ ಕಾರ್ಯದರ್ಶಿಯಾಗಿ, ಆರ್.ಹನುಮಂತರಾಯಪ್ಪ ಅವರು ಸಹಾಯಕ ಕಾರ್ಯದರ್ಶಿ, ಎನ್. ಬಾಲಕೃಷ್ಣ (ನಲ್ಲಿಗೆರೆ ಬಾಲು) ಖಜಾಂಚಿಯಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಮಾಹಿತಿ ನೀಡಿದ್ದಾರೆ.

ಕೊಲಿಜಿಯಂ ಎದುರು ನ್ಯಾ. ಯಾದವ್ ಹಾಜರಿ ಸಾಧ್ಯತೆ

ನವದೆಹಲಿ (ಪಿಟಿಐ): ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಕಾರ್ಯಕ್ರಮವೊಂದರಲ್ಲಿ ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ್ದ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರು ಸುಪ್ರೀಂ ಕೋರ್ಟ್ ಕೊಲಿಜಿಯಂ ಮುಂದೆ ಶೀಘ್ರದಲ್ಲಿಯೇ ಹಾಜರಾಗಿ ವಿವರಣೆ ನೀಡುವ ಸಾಧ್ಯತೆಯಿದೆ.



ಶೇಖರ್ ಅವರು ನೀಡಿರುವ ಹೇಳಿಕೆಗಳ ಕುರಿತ ಸುದ್ದಿಗಳನ್ನು ಗಮನಿಸಿದ್ದ ಸುಪ್ರೀಂ ಕೋರ್ಟ್, ವಿವರಣೆ ನೀಡುವಂತೆ ಅಲಹಾಬಾದ್ ಹೈಕೋರ್ಟ್‌ಗೆ ಇತ್ತೀಚೆಗೆ ಸೂಚಿಸಿತ್ತು.

ಹೈಕೋರ್ಟ್ ನ್ಯಾಯಮೂರ್ತಿಗಳಿಂದ ಯಾವುದೇ ವಿವಾದಾತ್ಮಕ ಹೇಳಿಕೆಗಳು ವ್ಯಕ್ತವಾದ ಸಂದರ್ಭದಲ್ಲಿ ಆ ಕುರಿತು ಸುಪ್ರೀಂ ಕೋರ್ಟ್ ವಿವರಣೆಗಳನ್ನು ಕೇಳುತ್ತದೆ. ಅಲ್ಲದೆ ಸಂಬಂಧಿಸಿದ ನ್ಯಾಯಮೂರ್ತಿಗೂ ತಮ್ಮ ಹೇಳಿಕೆ ಕುರಿತು ವಿವರಣೆ ನೀಡಲು ಕೊಲಿಜಿಯಂ ಅವಕಾಶ ನೀಡುತ್ತದೆ.

ಹೀಗಾಗಿ, ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಸಹ ಕೊಲಿಜಿಯಂ ಮುಂದೆ ಹಾಜರಾಗಿ ವಿವರಣೆ ನೀಡುವ ಸಾಧ್ಯತೆಗಳಿವೆ ಎಂದು ಸುಪ್ರೀಂ ಕೋರ್ಟ್‌ನ ಮೂಲಗಳು ತಿಳಿಸಿವೆ.

ಡಿ 8ರಂದು ನಡೆದ ವಿಎಚ್‌ಪಿ ಕಾನೂನು ವಿಭಾಗದ ಪ್ರಾಂತೀಯ ಸಮಾರಂಭದಲ್ಲಿ ಏಕರೂಪ ನಾಗರಿಕ ಸಂಹಿತೆ ಕುರಿತು ಮಾತನಾಡಿದ್ದ ನ್ಯಾಯಮೂರ್ತಿ ಶೇಖರ್ ಅವರು, ಬಹುಸಂಖ್ಯಾತರಿಗೆ ಅನುಗುಣವಾಗಿ ಕಾನೂನು ಕೆಲಸ ಮಾಡಬೇಕು ಎಂಬುದೂ ಸೇರಿದಂತೆ ಕೆಲವು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿದ್ದರು. ಈ ಕುರಿತ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿತ್ತು.

ನ್ಯಾಯಮೂರ್ತಿಯ ಹೇಳಿಕೆಗಳನ್ನು ವಿರೋಧ ಪಕ್ಷಗಳು ಕಟುವಾಗಿ ಟೀಕಿಸಿದ್ದವು. ಅವರ ಈ ಮಾತುಗಳು ದ್ವೇಷ ಭಾಷಣಕ್ಕೆ ಸಮ ಎಂದು ದೂರಿದ್ದವು.

'ಪ್ರಣವ್ ಮುಖರ್ಜಿ ಪ್ರಧಾನಿ ಆಗಬೇಕಿತ್ತು'

ಕಾಂಗ್ರೆಸ್‌ನ ಹಿರಿಯ ನಾಯಕ ಮಣಿ ಶಂಕರ್ ಅಯ್ಯರ್ ಪುಸ್ತಕದಲ್ಲಿ ವಿಶ್ಲೇಷಣೆ

ನವದೆಹಲಿ (ಪಿಟಿಐ): ಕೇಂದ್ರದಲ್ಲಿ ಯುಪಿಎ ಸರ್ಕಾರದ 2ನೇ ಅವಧಿಯಲ್ಲಿ ಪ್ರಣವ್ ಮುಖರ್ಜಿ ಅವರನ್ನು ಪ್ರಧಾನಿ ಸ್ಥಾನಕ್ಕೆ, ಮನಮೋಹನ್ ಸಿಂಗ್ ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಪರಿಗಣಿಸಿದ್ದರೆ ಯುಪಿಎ 'ಪಾರ್ಶ್ವವಾಯು ಆಡಳಿತಕ್ಕೆ' ಸಿಲುಕುತ್ತಿರಲಿಲ್ಲ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಮಣಿ ಶಂಕರ್ ಅಯ್ಯರ್ ತಮ್ಮ ಇತ್ತೀಚಿನ ಪುಸ್ತಕದಲ್ಲಿ ವಿಶ್ಲೇಷಿಸಿದ್ದಾರೆ.



ಮಣಿ ಶಂಕರ್ ಅಯ್ಯರ್

83 ವರ್ಷದ ಅಯ್ಯರ್ ಅವರು ತಮ್ಮ ಮುಂಬರಲಿರುವ ಪುಸ್ತಕ 'ಎ ಮೇವರಿಕ್ ಇನ್ ಪಾಲಿಟಿಕ್ಸ್'ನಲ್ಲಿ ಈ ಕುರಿತು ಉಲ್ಲೇಖಿಸಿದ್ದಾರೆ. ಈ ಪುಸ್ತಕವನ್ನು ಜಗ್ಗರ್‌ನಾಟ್ ಪ್ರಕಾಶನ ಪ್ರಕಟಿಸಿದೆ.

2012ರಲ್ಲಿ ರಾಷ್ಟ್ರಪತಿ ಆಯ್ಕೆ ಎದುರಾದಾಗ ಈ ರೀತಿಯ ಬದಲಾವಣೆಯನ್ನು ಮಾಡಿ, ಮನಮೋಹನ್ ಸಿಂಗ್ ಅವರನ್ನು ರಾಷ್ಟ್ರಪತಿ ಹುದ್ದೆಗೆ ಮುಂಬಡ್ತಿ ನೀಡಬೇಕಿತ್ತು. ಸರ್ಕಾರದ ಚುಕ್ಕಾಣಿಯನ್ನು ಪ್ರಣವ್ ಅವರಿಗೆ ವಹಿಸಬೇಕಿತ್ತು. ಆದರೆ ಹೀಗೆ ಮಾಡಲಿಲ್ಲ. ಈ ಬೆಳವಣಿಗೆಯು ಯುಪಿಎ 3ನೇ ಬಾರಿಗೆ ಅಧಿಕಾರಕ್ಕೆ ಬರುವ ನಿರೀಕ್ಷೆಗಳನ್ನು ನಾಶಗೊಳಿಸಿತು. ಇದರಿಂದಾಗಿ 2014ರ ಚುನಾವಣೆಯಲ್ಲಿ ಮಿತಿ ಮೀರಿದ ಹಿಂದುತ್ವಕ್ಕೆ ಬಾಗಿಲು ತೆರೆದಂತಾಯಿತು ಎಂದು ಬರೆದಿದ್ದಾರೆ.

ಅಯ್ಯರ್ ಅವರು ತಮ್ಮ ರಾಜಕೀಯದ ಆರಂಭದ ದಿನಗಳು, ಪಿ.ವಿ. ನರಸಿಂಹರಾವ್ ಅವರ ಮಾರ್ಗದರ್ಶನ, ಯುಪಿಎ ಸರ್ಕಾರದ ಮೊದಲ ಅವಧಿಯಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ ದಿನಗಳು, ರಾಜ್ಯಸಭಾ ಅವಧಿ ಸೇರಿದಂತೆ ಹಲವು ಸಂದರ್ಭಗಳು ಮತ್ತು ರಾಜಕೀಯ ಏರಿಳಿತಗಳ ಕುರಿತು ಪುಸ್ತಕದಲ್ಲಿ ಬರೆದಿದ್ದಾರೆ.

'2012ರಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ಅವರು 'ಮಲ್ಟಿಪಲ್ ಕೊರೊನರಿ ಬೈಪಾಸ್' ಶಸ್ತ್ರಚಿಕಿತ್ಸೆಗೆ ಒಳಗಾದರು. ಬಳಿಕ ಅವರು ದೈಹಿಕವಾಗಿ ಚೇತರಿಸಿಕೊಳ್ಳಲಿಲ್ಲ. ಶಸ್ತ್ರಚಿಕಿತ್ಸೆ ಅವರನ್ನು ಮೆತ್ತಗಾಗಿಸಿತು. ಅದು ಆಡಳಿತದ ಮೇಲು ಪರಿಣಾಮ ಬೀರಿತು. ಇದೇ ವೇಳೆ ಕಾಂಗ್ರೆಸ್ ಅಧ್ಯಕ್ಷೆಯೂ ಅನಾರೋಗ್ಯಕ್ಕೆ ಒಳಗಾಗಿದ್ದರು. ಅದರ ಬಗ್ಗೆಯೂ ಯಾವುದೇ ಪ್ರಕಟಣೆ ಬರಲಿಲ್ಲ' ಎಂಬುದನ್ನು ಅವರು ಉಲ್ಲೇಖಿಸಿದ್ದಾರೆ.

ಪ್ರಧಾನಿ ಮತ್ತು ಪಕ್ಷದ ಅಧ್ಯಕ್ಷರ ಅನಾರೋಗ್ಯವು ಆಡಳಿತದ ಮೇಲೆ ಪರಿಣಾಮ ಬೀರಿದ್ದವು. ಅಲ್ಲದೆ ಆ ಸಂದರ್ಭದಲ್ಲಿ ಎದುರಾದ ಹಲವು ಬಿಕ್ಕಟ್ಟುಗಳನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗಲಿಲ್ಲ. ಅದು ವಿಶೇಷವಾಗಿ ಅಣ್ಣ ಹಜಾರೆ ಅವರು ಕೈಗೊಂಡಿದ್ದ 'ಭ್ರಷ್ಟಾಚಾರದ ವಿರುದ್ಧ ಭಾರತ' ಆಂದೋಲನದಲ್ಲಿ ಗೋಚರವಾಯಿತು. ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣದಿಂದಾಗಿ ಜನರು ಸರ್ಕಾರ ವಿರುದ್ಧ ಸಿಟ್ಟಾಗಿದ್ದರು ಎಂದು ಅವರು ವಿವರಿಸಿದ್ದಾರೆ.

ಉಲ್ಲೇಖಿಸಿರುವ ಇತರ ಪ್ರಮುಖಾಂಶಗಳು


- ಕಾಂಗ್ರೆಸ್‌ನ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಲು 10 ವರ್ಷಗಳಿಂದ ನನಗೆ ಅವಕಾಶ ದೊರೆಯಲಿಲ್ಲ. ರಾಹುಲ್ ಗಾಂಧಿ ಅವರ ಜತೆಗೆ ಅರ್ಥಪೂರ್ಣ ಸಮಯ ಕಳೆಯಲು ಒಮ್ಮೆ ಮಾತ್ರ ಅವಕಾಶ ಸಿಕ್ಕಿತ್ತು.
- ಪಕ್ಷದಲ್ಲಿ ನಾನು ಸಂಪೂರ್ಣವಾಗಿ ಪ್ರತ್ಯೇಕವಾಗಿದ್ದೇನೆ. ಆದರೂ ನಾನು ಪಕ್ಷದ ಸದಸ್ಯನೇ ಆಗಿದ್ದೇನೆ. ಪಕ್ಷವನ್ನು ಬದಲಿಸುವುದಿಲ್ಲ ಮತ್ತು ಖಂಡಿತವಾಗಿಯೂ ಬಿಜೆಪಿ ಸೇರುವುದಿಲ್ಲ.
- ನಾನು ನರೇಂದ್ರ ಮೋದಿ ಅವರನ್ನು ಎಂದಿಗೂ 'ಚಾಯ್‌ವಾಲಾ' ಎಂದು ಕರೆದಿಲ್ಲ. ಆದರೆ ಮಾಧ್ಯಮಗಳು ನನ್ನನ್ನು ತಪ್ಪಾಗಿ ಬಿಂಬಿಸಿದವು

ಸಂಭಲ್: ಒತ್ತುವರಿ ತೆರವು ವೇಳೆ ಪತ್ತೆಯಾಗಿರುವ ಭಸ್ಮ ಶಂಕರ ದೇವಸ್ಥಾನ

'ಕಾರ್ಬನ್ ಡೇಟಿಂಗ್'ಗೆ ಪತ್ರ

ಸಂಭಲ್(ಉತ್ತರ ಪ್ರದೇಶ)(ಪಿಟಿಐ): ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಪತ್ತೆಯಾಗಿರುವ, ಸಂಭಲ್ ಜಿಲ್ಲೆಯ ಕಗ್ಗು ಸರಾಯ್ ಎಂಬ ಪ್ರದೇಶದಲ್ಲಿನ ಭಸ್ಮ ಶಂಕರ ದೇವಸ್ಥಾನ ಹಾಗೂ ಅಲ್ಲಿರುವ ಬಾವಿ ಕುರಿತು 'ಕಾರ್ಬನ್ ಡೇಟಿಂಗ್' ಪರೀಕ್ಷೆ ನಡೆಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಜಿಲ್ಲಾಡಳಿತ ಪತ್ರ ಬರೆದಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಇದು ಕಾರ್ತೀಕ ಮಹಾದೇವ ದೇಗುಲ. ಇಲ್ಲಿರುವ ಬಾವಿಯನ್ನು 'ಅಮೃತ ಕೂಪ' ಎಂದು ಕರೆಯಲಾಗುತ್ತದೆ. ಈ ಕುರಿತು ಕಾರ್ಬಲ್ ಡೇಟಿಂಗ್ ಪರೀಕ್ಷೆಗಾಗಿ ಎಎಸ್‌ಐಗೆ ಪತ್ರ ಬರೆಯಲಾಗಿದೆ' ಎಂದು ಜಿಲ್ಲಾಧಿಕಾರಿ ರಾಜೇಂದ್ರ ಪೆನ್ಸಿಯಾ ತಿಳಿಸಿದ್ದಾರೆ.



ಭಸ್ಮ ಶಂಖರ ದೇವಸ್ಥಾನ

'ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದು, ಪೂಜೆ ಸೇರಿದಂತೆ ಧಾರ್ಮಿಕ ವಿಧಿಗಳೂ ಆರಂಭವಾಗಿವೆ. ಇಲ್ಲಿನ ಒತ್ತುವರಿಯನ್ನು ಕೂಡ ತೆರವು ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

'ಭಸ್ಮ ಶಂಕರ ದೇವಸ್ಥಾನ ಸಂಪರ್ಕಿಸುವ ಎಲ್ಲ ರಸ್ತೆಗಳಲ್ಲಿ ಸಿ.ಸಿ ಟಿವಿ ಕ್ಯಾಮೆರಾ ಅಳವಡಿಸಲಾಗಿದ್ದು, ದೇಗುಲದ ಬಳಿ ನಿಯಂತ್ರಣ ಕೇಂದ್ರವನ್ನು ಕೂಡ ಸ್ಥಾಪಿಸಲಾಗಿದ್ದು, ಪ್ರಾಂತೀಯ ಸಶಸ್ತ್ರ ಪೊಲೀಸರನ್ನು (ಪಿಎಸಿ) ನಿಯೋಜಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಕುಮಾರ್ ತಿಳಿಸಿದ್ದಾರೆ.

ಪುರಾತತ್ವ ಕಲಾಕೃತಿಗಳು ಯಾವ ಕಾಲ ಅಥವಾ ಯುಗಕ್ಕೆ ಸಂಬಂಧಿಸಿದವು ಎಂಬುದನ್ನು ಪತ್ತೆ ಮಾಡುವುದಕ್ಕೆ 'ಕಾರ್ಬನ್ ಡೇಟಿಂಗ್' ಪರೀಕ್ಷೆ ನಡೆಸಲಾಗುತ್ತದೆ.

ಭಸ್ಮ ಶಂಕರ ದೇವಸ್ಥಾನದಲ್ಲಿ ಹನುಮಂತನ ಮೂರ್ತಿ ಹಾಗೂ ಶಿವಲಿಂಗ ಇವೆ. 1978ರಲ್ಲಿ ನಡೆದ ಕೋಮು ಗಲಭೆ ವೇಳೆ ಈ ದೇವಸ್ಥಾನಕ್ಕೆ ಬೀಗ ಹಾಕಲಾಗಿತ್ತು. ಅಲ್ಲದೇ, ಇಲ್ಲಿನ ಹಿಂದೂಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಪತ್ತೆಯಾಗಿದ್ದ ಈ ದೇವಸ್ಥಾನವನ್ನು ಅಧಿಕಾರಿಗಳು ಶುಕ್ರವಾರ ಭಕ್ತರಿಗೆ ಮುಕ್ತಗೊಳಿಸಿದ್ದಾರೆ. ಈ ದೇವಸ್ಥಾನ ಶಾಹಿ ಜಾಮಾ ಮಸೀದಿ ಬಳಿಯೇ ಇದೆ. ಮಸೀದಿಯ ಸಮೀಕ್ಷೆಗೆ ಕೋರ್ಟ್ ಆದೇಶ ನೀಡಿದ ಬಳಿಕ ನ.24ರಂದು ನಡೆದ ಗಲಭೆಯಲ್ಲಿ ನಾಲ್ವರು ಮೃತಪಟ್ಟಿದ್ದರು. ಅದಾದ ಕೆಲವು ವಾರಗಳ ನಂತರ ಜಿಲ್ಲಾಡಳಿತವು ಈ ಮಸೀದಿಯ ಸುತ್ತಲಿನ ಪ್ರದೇಶದಲ್ಲಿ ಒತ್ತುವರಿ ತೆರವು ಹಾಗೂ ವಿದ್ಯುತ್ ಕಳವು ವಿರುದ್ಧ ಕಾರ್ಯಾಚರಣೆ ಕೈಗೊಂಡಿತ್ತು.

'ಕಬಿನಿ'ಯಲ್ಲಿ ಮದ್ಯ ಮಾರಾಟ ತಡೆಗೆ ಎನ್‌ಟಿಸಿಎಗೆ ಮೊರೆ

ಪ್ರಜಾವಾಣಿ ವಾರ್ತೆ

ಮೈಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಕಬಿನಿ ಹಿನ್ನೀರಿನ ಹಾಡಿ, ಗ್ರಾಮಗಳಲ್ಲಿ ನಡೆಯುತ್ತಿರುವ ಮದ್ಯ ಅಕ್ರಮ ಮಾರಾಟವನ್ನು ಗಂಭೀರವಾಗಿ ಪರಿಗಣಿಸಿ, ಅದನ್ನು ತಡೆಯುವಂತೆ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ರಾಷ್ಟ್ರೀಯ ಹುಲಿ ಸಂಕಕ್ಷಣಾ ಪ್ರಾಧಿಕಾರಕ್ಕೆ (ಎನ್‌ಟಿಸಿಎ) ಪತ್ರ ಬರೆದಿದ್ದಾರೆ.



ಗಿರಿಧರ್ ಕುಲಕರ್ಣಿ

'ಪ್ರಜಾವಾಣಿ'ಯಲ್ಲಿ ಡಿ.15ರಂದು ಒಳನೋಟದಲ್ಲಿ ಪ್ರಕಟವಾಗಿದ್ದ ವರದಿ 'ಕಬಿನಿಯಲ್ಲಿ ಮದ್ಯದ 'ಹೊಳೆ' ಹಾಗೂ 2014 ಜುಲೈ 1ರಂದು ಎನ್‌ಟಿಸಿಎ ನಡೆಸಿದ್ದ ಸ್ಥಳ ಪರಿಶೀಲನಾ ವರದಿ ಆಧರಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಎನ್‌ಟಿಸಿಎ ಜೊತೆಗೆ ರಾಜ್ಯ ಪ್ರಧಾನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿ, ಹುಲಿ ಯೋಜನೆ ನಿರ್ದೇಶಕರಿಗೂ ಪತ್ರ ಬರೆದಿದ್ದಾರೆ. 'ಕೇರಳ ಗಡಿಗೆ ಹೊಂದಿಕೊಂಡಿರುವ ಕಾಡಂಚಿನ ಗ್ರಾಮಗಳಲ್ಲಿ ಹಲವು ಬಾರ್‌ಗಳನ್ನು ತೆರೆಯಲು ಪರವಾನಗಿ ನೀಡಲಾಗಿದ್ದು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪರಿಸರಕ್ಕೆ ಹಾನಿ ಉಂಟಾಗುತ್ತಿದೆ. ಬುಡಕಟ್ಟು ಜನರ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತಿದೆ' ಎಂದಿದ್ದಾರೆ.

'ಡಿ.ಬಿ.ಕುಪ್ಪೆ ಅರಣ್ಯ ವಲಯಕ್ಕೆ ಹೊಂದಿಕೊಂಡಿರುವ ಕಡೆಗದ್ದೆ ಗ್ರಾಮದಲ್ಲಿ ಹುಲಿಸಂರಕ್ಷಿತ ಪ್ರದೇಶದಲ್ಲಿಯೇ ಮದ್ಯದಂಗಡಿ ತೆರೆಯಲಾಗಿದ್ದು, ಈ ಬಗ್ಗೆ ಎನ್‌ಟಿಸಿಎ ಅಧಿಕಾರಿಗಳು ಸ್ಥಳ ಪರಿಶೀಲಿಸಿ ವನ್ಯಜೀವಿಗಳಿಗೆ ತೊಂದರೆ ಆಗುತ್ತಿರುವ ಹಾಗೂ ಕಾನೂನು ಮತ್ತು ನಿಯಮ ಉಲ್ಲಂಘಿಸಿರುವ ಬಗ್ಗೆ 2014ರಲ್ಲೇ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿದ್ದರು' ಎಂದು ಉಲ್ಲೇಖಿಸಿದ್ದಾರೆ.

'1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 33 (ಎ) ಪ್ರಕಾರ ಸರ್ಕಾರಿ ಲಾಡ್ಜ್‌ಗಳು ಸೇರಿದಂತೆ ಪ್ರವಾಸಿ ಲಾಡ್ಜ್, ಹೋಟೆಲ್, ಮೃಗಾಲಯ ಮತ್ತು ಸಫಾರಿಗಳನ್ನು ಸಂರಕ್ಷಿತ ಪ್ರದೇಶದಲ್ಲಿ ರಾಷ್ಟ್ರೀಯ ಮಂಡಳಿ ಅನುಮತಿಯಿಲ್ಲದೆ ತೆರೆಯುವಂತಿಲ್ಲ. ಆದರೆ, ಡಿ.ಬಿ.ಕುಪ್ಪೆ ವಲಯದಲ್ಲಿ ಈ ನಿಯಮ ಉಲ್ಲಂಘಿಸಲಾಗಿದೆ' ಎಂದಿದ್ದಾರೆ.

'ಮದ್ಯದಂಗಡಿಗಳ ಪರವಾನಗಿ ರದ್ದುಗೊಳಿಸಿ, ವಾಣಿಜ್ಯ ಚಟುವಟಿಕೆ ನಡೆಯದಂತೆ ಕ್ರಮ ವಹಿಸಲು ಸೂಚಿಸಬೇಕು' ಎಂದು ಪ್ರಾಧಿಕಾರವನ್ನು ಕೋರಿದ್ದಾರೆ.

ಕಾವೇರಿ ನದಿಯಲ್ಲಿ ಎಸ್.ಎಂ. ಕೃಷ್ಣ ಅಸ್ಥಿ ವಿಸರ್ಜನೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಅಸ್ಥಿಯನ್ನು ಸಮೀಪದ ಪಶ್ಚಿಮ ವಾಹಿನಿ ಬಳಿ ಶ್ರೀಕೃಷ್ಣ ದೇವಾಲಯ ಎದುರು ಕಾವೇರಿ ನದಿಯಲ್ಲಿ ಭಾನುವಾರ ವಿಸರ್ಜಿಸಲಾಯಿತು.

ಕೃಷ್ಣ ಅವರ ಮೊಮ್ಮಗ ಅಮರ್ತ್ಯ ಹೆಗಡೆ ವೈದಿಕರ ಸಲಹೆಯಂತೆ ಬೆಳಿಗ್ಗೆ 11.30ಕ್ಕೆ ಅಸ್ಥಿಯನ್ನು ನದಿಯಲ್ಲಿ ವಿಸರ್ಜಿಸಿದರು. ಜ್ಯೋತಿಷಿ ವಿ. ಭಾನುಪ್ರಕಾಶ್ ಶರ್ಮಾ, ವೈದಿಕ ಕೆ.ಎಸ್. ಲಕ್ಷ್ಮೀಶ್ ಶರ್ಮಾ ಪಂಚಗವ್ಯ, ಅಸ್ಥಿ ಸಂಗ್ರಹ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಸೇರಿದಂತೆ ವಿಧಿ–ವಿಧಾನಗಳನ್ನು ನೆರವೇರಿಸಿದರು. ಕೃಷ್ಣ ಅವರ ಬಂಧುಗಳು ಅಸ್ಥಿ ಕುಡಿಕೆಗೆ ಹಾಲು, ತುಪ್ಪ ಹಾಕಿದರು. ಬಳಿಕ ನದಿಯಲ್ಲಿ ಅಸ್ಥಿ ಸಂಚಯನ ನಡೆಯಿತು. ಎಸ್.ಎಂ. ಕೃಷ್ಣ ಅವರ ಮಕ್ಕಳಾದ ಮಾಳವಿಕಾ ಮತ್ತು ಶಾಂಭವಿ, ಅಮರ್ತ್ಯ ಹೆಗಡೆ ಅವರ ಪತ್ನಿ ಐಶ್ವರ್ಯಾ ಹೆಗಡೆ ಇದ್ದರು.

ಜ.11ಕ್ಕೆ ಪ್ರತಿಷ್ಠಾ ದ್ವಾದಶಿ ಉತ್ಸವ: ಬಾಲರಾಮ ಪ್ರತಿಷ್ಠಾಪನೆಯಾಗಿ ಒಂದು ವರ್ಷ

ಕುಂಭಮೇಳ: ಅಯೋಧ್ಯೆಗೂ ಭಕ್ತರ ದಂಡು

• ಎಸ್. ಸಂಪತ್

ಪ್ರಯಾಗ್‌ರಾಜ್/ಅಯೋಧ್ಯೆ: ಗಂಗಾ, ಯಮುನಾ, ಸರಸ್ವತಿ ನದಿಗಳ ತ್ರಿವೇಣಿ ಸಂಗಮ ಹೊಂದಿರುವ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮುಂದಿನ ತಿಂಗಳಿಂದ ಆರಂಭವಾಗಲಿರುವ 'ಮಹಾ ಕುಂಭಮೇಳ–2025'ಕ್ಕೂ ಎರಡು ದಿನ ಮುನ್ನ ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆಯಾಗಿ ಒಂದು ವರ್ಷವಾಗಲಿದೆ.

ಜನವರಿ 13ರಿಂದ ಫೆಬ್ರುವರಿ 26ರವರೆಗೆ 'ಮಹಾ ಕುಂಭಮೇಳ' ಜರುಗಲಿದೆ. ಈ ವೇಳೆ ದೇಶ, ವಿದೇಶಗಳಿಂದ ಲಕ್ಷಾಂತರ ಮಂದಿ ಪ್ರಯಾಗ್‌ರಾಜ್‌ಗೆ ಬರಲಿದ್ದು, ಅವರಲ್ಲಿ ಹಲವರು ಇಲ್ಲಿಂದ 160 ಕಿ.ಮೀ ದೂರದಲ್ಲಿರುವ ಅಯೋಧ್ಯೆಗೆ ಭೇಟಿ ನೀಡಿ, ಬಾಲರಾಮನ ದರ್ಶನ ಪಡೆಯಲು ಬಯಸುತ್ತಾರೆ. ಇದರಿಂದ ಅಯೋಧ್ಯೆಯಲ್ಲಿ ಯಾತ್ರಿಗಳ ಪ್ರವೇಶ ದುಪ್ಪಟ್ಟಾಗಲಿದ್ದು, ಬರುವ ಎಲ್ಲ ಭಕ್ತರಿಗೂ ರಾಮನ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲು ಮತ್ತು ಪರಿಸ್ಥಿತಿ ನಿರ್ವಹಿಸಲು ರಾಮಂದಿರ ಸಹ ಸಕಲ ಸಿದ್ಧತೆಗಳನ್ನು ಕೈಗೊಂಡಿದೆ.

'ಪ್ರಸ್ತುತ ನಿತ್ಯ 75 ಸಾವಿರದಿಂದ ಒಂದು ಲಕ್ಷದವರೆಗೂ ಜನರು ಅಯೋಧ್ಯೆ ರಾಮನ ದರ್ಶನಕ್ಕೆ ಬರುತ್ತಿದ್ದಾರೆ. ವಾರಾಂತ್ಯಗಳಲ್ಲಿ ಅವರ ಸಂಖ್ಯೆ ಇನ್ನಷ್ಟು ಹೆಚ್ಚಿದೆ. ತಿಂಗಳ ಕಾಲ ನಡೆಯುವ ಮಹಾ ಕುಂಭಮೇಳದ ಸಂದರ್ಭದಲ್ಲಿ ಅಯೋಧ್ಯೆಗೆ ಬರುವವರ ಸಂಖ್ಯೆ ನಿತ್ಯ 2 ಲಕ್ಷ ದಾಟಬಹುದು ಎಂದು ನಿರೀಕ್ಷಿಸಿದ್ದೇವೆ. ಅವರೆಲ್ಲರಿಗೂ ದರ್ಶನಕ್ಕೆ ಅವಕಾಶ ಕಲ್ಪಿಸಲು ಅಗತ್ಯ ತಯಾರಿ ಮಾಡಿಕೊಂಡಿದ್ದೇವೆ' ಎಂದು ಆಯೋಧ್ಯೆಯ ರಾಮಮಂದಿರ ನಿರ್ಮಾಣದ ರಾಷ್ಟ್ರೀಯ ಉಸ್ತುವಾರಿ ಗೋಪಾಲ ನಾಗರಕಟ್ಟೆ ಸುದ್ದಿಗಾರರಿಗೆ ತಿಳಿಸಿದರು.



ಆಯೋಧ್ಯೆಯ ಬಾಲರಾಮ

ಅಗತ್ಯವಾದರೆ ದರ್ಶನದ ಅವಧಿಯನ್ನು ಹೆಚ್ಚಿಸಲಾಗುವುದು ಎಂದು ಅವರು ತಿಳಿಸಿದರು.

ಜ. 11ರಿಂದ 13ರವರೆಗೆ ಉತ್ಸವ: ಬರುವ ಪುಷ್ಯ ಮಾಸದ ಶುಕ್ಲ ಪಕ್ಷದ ದ್ವಾದಶಿ ದಿವಸ ಶ್ರೀರಾಮ ಜನ್ಮ ಭೂಮಿಯಲ್ಲಿ ರಾಮನ ಪ್ರತಿಷ್ಠಾಪನೆಯಾಗಿ ಒಂದು ವರ್ಷ ಪೂರ್ಣಗೊಳ್ಳಲಿದೆ. 2024ನೇ ಸಾಲಿನಲ್ಲಿ ಆ ಮುಹೂರ್ತ ಜನವರಿ 22ರಂದು ಬಂದಿತ್ತು. 2025ರಲ್ಲಿ ಅದು ಜನವರಿ 11ರಂದು ಬಂದಿದೆ. ಹೀಗಾಗಿ ಮುಂದಿನ ಜನವರಿ 11ರಿಂದ 13ರವರೆಗೆ ಮೂರು ದಿನ ಪ್ರತಿಷ್ಠಾ ದ್ವಾದಶಿ ಉತ್ಸವ ಜರುಗಲಿದೆ ಎಂದು ಅವರು ವಿವರಿಸಿದರು.

ಈ ಉತ್ಸವವನ್ನು ಅದ್ದೂರಿಯಾಗಿ ನಡೆಸಲು ಉದ್ದೇಶಿಸಲಾಗಿದೆ. ಮೂರು ದಿನಗಳು ಇಲ್ಲಿ ವೇದ ಪಾರಾಯಣ, ಮಾನಸ ಪಾಠ, ರಾಮಾಯಣ ಪಾಠ, ಹವನಗಳು, ಜತೆಗೆ ಭಗವಂತನಿಗೆ ವಿವಿಧ ವಸ್ತುಗಳಿಂದ ಅಭಿಷೇಕ, ಮಧ್ಯಾಹ್ನ ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಈ ವೇಳೆ ಪುಷ್ಪ ಅಲಂಕಾರ, ದೀಪ ಅಲಂಕಾರಗಳು ನಡೆಯುತ್ತವೆ. ಅದನ್ನೂ ಜನ ಕಣ್ತುಂಬಿಕೊಳ್ಳಬಹುದು ಎಂದು ಅವರು ಮಾಹಿತಿ ನೀಡಿದರು.

2025ರ ಅಂತ್ಯದೊಳಗೆ ಮಂದಿರ ಪೂರ್ಣ

ಮಂದಿರ ನಿರ್ಮಾಣ ಕಾರ್ಯ ತೀವ್ರಗತಿಯಲ್ಲಿ ಸಾಗಿದೆ. ಬಾಲರಾಮನ ಪ್ರತಿಷ್ಠಾಪನೆಯ ದಿನವಾದ 2024ರ ಜನವರಿ 22ರ ವೇಳೆಗೆ ದೇವಾಲಯದ ಮೊದಲ ಮಹಡಿಯಷ್ಟೇ ಪೂರ್ಣವಾಗಿತ್ತು. ಈಗ ಮಂದಿರದ ಎರಡನೇ ಮಹಡಿಯೂ ಪೂರ್ಣವಾಗಿದೆ. ಶಿಖರದ ಕೆಲಸ ನಡೆಯುತ್ತಿದೆ. ಹೊರಗಡೆಯ ಪ್ರಾಕಾರದ ಕೆಲಸವೂ ಕ್ಷಿಪ್ರಗತಿಯಲ್ಲಿ ಸಾಗಿದೆ. ಮೂರು ಲಕ್ಷ ಘನ ಅಡಿಯಷ್ಟು ಕಲ್ಲುಗಳನ್ನು ಜೋಡಿಸಲಾಗಿದ್ದು, ಸಪ್ತ ಮಂಟಪದ ಕೆಲಸವೂ ಸಾಗಿದೆ.

ಮಂದಿರ ನಿರ್ಮಾಣ ಕೆಲಸ ಮೂರೂವರೆ ತಿಂಗಳಿನಿಂದ ಆರು ತಿಂಗಳೊಳಗೆ ಮುಗಿಯುವ ಸಾಧ್ಯತೆಯಿದೆ. ಆದರೆ, ಪ್ರಾಕಾರ ಪೂರ್ಣಗೊಳ್ಳಲು ಇನ್ನಷ್ಟು ಸಮಯ ಬೇಕು. ಅಂತಿಮ ಸ್ಪರ್ಶ ಸೇರಿದಂತೆ ಎಲ್ಲ ಕೆಲಸ ಮುಗಿಯಲು ಒಂದು ವರ್ಷವಾದರೂ ಬೇಕಾಬಹುದು. ಅಂದರೆ 2025ರ ಡಿಸೆಂಬರ್ ವೇಳೆಗೆ ದೇವಾಲಯ ನಿರ್ಮಾಣದ ಪೂರ್ಣ ಕೆಲಸ ಮುಕ್ತಾಯವಾಗಬಹುದು ಎಂದು ಅಂದಾಜಿಸಿದ್ದೇವೆ ಎಂದು ಗೋಪಾಲ್ ತಿಳಿಸಿದರು.

ಈಗಲೂ ನಿತ್ಯ ಎರಡು ಸಾವಿರ ಜನರು ದೇಗುಲ ನಿರ್ಮಾಣ ಕಾಯಕದಲ್ಲಿ ತೊಡಗಿದ್ದಾರೆ. ಹಗಲೂ ರಾತ್ರಿ, ದಿನದ 24 ಗಂಟೆಯೂ ಕೆಲಸ ನಡೆಯುತ್ತಿದೆ ಎಂದರು.

ಸಂವಹನಕ್ಕೆ 'ಚಾಟ್‌ಬಾಟ್'

ಪ್ರಯಾಗ್‌ರಾಜ್‌ನಲ್ಲಿ ನಡೆಯುವ ಮಹಾಕುಂಭ ಮೇಳದಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಸಂವಹನವನ್ನು ಸುವ್ಯವಸ್ಥಿತಗೊಳಿಸಲು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಕುಂಭ ಸಹಾಯಕ್ ಚಾಟ್‌ಬಾಟ್ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಯಾತ್ರಿಗಳಿಗೆ ಸುಮಾರು 11 ಭಾಷೆಗಳಲ್ಲಿ ಸಂವಹನ ಮಾಡಲು ಈ ವ್ಯವಸ್ಥೆ ಅನುಕೂಲಕರವಾಗಿದೆ.

ತಾರಕಕ್ಕೇರಿದ ರಾಜ್ಯ ಬಿಜೆಪಿ ಆಂತರಿಕ ತಿಕ್ಕಾಟ ● ಮುಂದಿನ ಚುನಾವಣೆವರೆಗೆ ಅಧ್ಯಕ್ಷರ ಬದಲಿಸದಂತೆ ಪಟ್ಟು

ವಿಜಯೇಂದ್ರ ಪರ ಬಲ ಪ್ರದರ್ಶನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬಿ.ವೈ.ವಿಜಯೇಂದ್ರ ಅವರನ್ನು ಮುಂಬರುವ ವಿಧಾನಸಭಾ ಚುನಾವಣೆಯವರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮುಂದುವರಿಸುವಂತೆ ಹೈಕಮಾಂಡ್ ಮೇಲೆ ಒತ್ತಡ ಹೇರಲು ಭಾನುವಾರ ಇಲ್ಲಿ ಸೇರಿದ್ದ ವಿಜಯೇಂದ್ರ ಪರ ಬಣ ನಿರ್ಣಯ ಕೈಗೊಂಡಿತು.

ಮಾಜಿ ಸಚಿವರಾದ ಎಂ.ಪಿ. ರೇಣುಕಾಚಾರ್ಯ ಹಾಗೂ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ನೇತೃತ್ವದಲ್ಲಿ 55 ಜನ ಮಾಜಿ ಶಾಸಕರು ಹಾಗೂ ಮಾಜಿ ಸಚಿವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಹೈಕಮಾಂಡ್ ಮಧ್ಯಪ್ರವೇಶದ ಬಳಿಕ ಬಣ ರಾಜಕೀಯಕ್ಕೆ ಕಡಿವಾಣ ಬಿದ್ದಿದೆ ಎನ್ನುವಾಗಲೇ ಇಲ್ಲಿ ನಡೆದ ಸಭೆ, ಪಕ್ಷದೊಳಗಿನ ಆಂತರಿಕ ತಿಕ್ಕಾಟ ತಾರಕಕ್ಕೇರಿದೆ ಎಂಬುದನ್ನು ಬಹಿರಂಗಪಡಿಸಿದೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಪುತ್ರ ಬಿ.ವೈ. ವಿಜಯೇಂದ್ರ ವಿರುದ್ಧ ಧ್ವನಿ ಎತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಲು ಶೀಘ್ರದಲ್ಲೇ ದೆಹಲಿಗೆ ನಿಯೋಗ ತೆರಳಲು ಸಭೆ ತೀರ್ಮಾನಿಸಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಪಕ್ಷದ ರಾಷ್ಟ್ರೀಯ ನಾಯಕರನ್ನು ಮತ್ತೊಮ್ಮೆ ಭೇಟಿಯಾಗಲು ಸಭೆಯಲ್ಲಿದ್ದ ಎಲ್ಲರೂ ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಸಭೆಯ ನಂತರ ಪಕ್ಷದ ಮೂಲಗಳು ಮಾಹಿತಿ ನೀಡಿದವು.



ದಾವಣಗೆರೆಯಲ್ಲಿ ಭಾನುವಾರ ನಡೆದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪರ ಬಣದ ಮುಖಂಡರನ್ನು ಸ್ಥಳೀಯ ನಾಯಕರು ಸನ್ಮಾನಿಸಿದರು – ಪ್ರಜಾವಾಣಿ ಚಿತ್ರ

ಆಡಳಿತಾರೂಢ ಕಾಂಗ್ರೆಸ್ ಟೀಕೆ ಮಾಡುವುದು ಬಿಟ್ಟು ಸ್ವಪಕ್ಷೀಯ ನಾಯಕರ ವಿರುದ್ಧ ಬಸನಗೌಡ ಪಾಟೀಲ ಯತ್ನಾಳ ಬಹಿರಂಗ ಆರೋಪ ಮಾಡುತ್ತಿರುವುದು ತಪ್ಪು

ಜಿ.ಸೋಮಶೇಖರ ರೆಡ್ಡಿ, ಮಾಜಿ ಶಾಸಕ

ನನ್ನ ವಿರುದ್ಧ ಏನೂ ಕ್ರಮ ಕೈಗೊಳ್ಳಲು ಆಗದಿರುವುದಕ್ಕೆ ಅವರಿಗೆ ಹೆದರಿಕೆ ಆಗಿರಬೇಕು, ಹೀಗಾಗಿ ಸಭೆ ಮಾಡುತ್ತಿದ್ದಾರೆ, ಅವರು ಎಷ್ಟು ಸಭೆ ಮಾಡುತ್ತಾರೋ ಅಷ್ಟು ಒಳ್ಳೆಯದು

ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಯತ್ನಾಳ ವಿರುದ್ಧ ಪಕ್ಷದ ವರಿಷ್ಠರು ಶಿಸ್ತುಕ್ರಮ ಜರುಗಿಸದೇ ಇರುವ ಬಗ್ಗೆ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಮುಖರು ಅಸಮಾಧಾನ ಹೊರಹಾಕಿದ್ದಾರೆ.

'ಬಣದ ಹೆಸರಲ್ಲಿ ಸಭೆ, ಸಮಾವೇಶ ಬೇಡ'

ಬೆಳಗಾವಿ: 'ಬಿಜೆಪಿಯಲ್ಲಿ ಬಣ ರಾಜಕೀಯಕ್ಕೆ ಅವಕಾಶವೇ ಇಲ್ಲ. ಬಣದ ಹೆಸರಿನಲ್ಲಿ ಸಭೆಗಳ ಆಯೋಜನೆ ಒಪ್ಪಲಾಗದು. ಯಾರಾದರೂ ಸಭೆ, ಸಮಾವೇಶ ಮಾಡಲು ಮುಂದಾಗಿದ್ದರೆ, ತಕ್ಷಣವೇ ಸ್ಥಗಿತ-ಗೊಳಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

'ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆ. ಪಕ್ಷಕ್ಕೆ ಇನ್ನಷ್ಟು ಬಲ ತುಂಬುವುದಕ್ಕಾಗಿ ಬಿಜೆಪಿಯ ಹಿರಿಯರು, ಶಾಸಕರು, ಮಾಜಿ ಶಾಸಕರೊಂದಿಗೆ ಶೀಘ್ರವೇ ಸಭೆ ಮಾಡಲಿದ್ದೇನೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಬಿಜೆಪಿ ಅವಿಭಕ್ತ ಕುಟುಂಬ ವಿದ್ದಂತೆ. ಪಕ್ಷದ ಚೌಕಟ್ಟಿನಲ್ಲೇ ಪ್ರತಿ ಸಭೆ, ಕಾರ್ಯಕ್ರಮಗಳು ನಡೆಯಬೇಕೇ ಹೊರತು, ಪಕ್ಷದ ನಿಯಮಗಳನ್ನು ಬದಿಗೆ ಸರಿಸಿ ಯಾವುದೇ ಚಟುವಟಿಕೆ ಕೈಗೊಳ್ಳುವುದು ಸರಿಯಲ್ಲ. ಸಂಘಟನೆಯ ಆಶಯಕ್ಕೂ ಇದು ಪೂರಕವಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದು ತಾರ್ಕಿಕ ಅಂತ್ಯ ಕಾಣುವವರೆಗೂ ಹೋರಾಟ ಮುಂದುವರಿಸಲು ನಿರ್ಧರಿಸಿದ್ದಾರೆ.

'ಬಿ.ವೈ. ವಿಜಯೇಂದ್ರ ಸಾರಥ್ಯದಲ್ಲಿ ವಿಧಾನಸಭಾ ಚುನಾವಣೆ ಎದುರಿಸಿದರೆ 140ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಲು ಸಾಧ್ಯವಿದೆ. ಇಲ್ಲವಾದರೆ 100 ಕ್ಷೇತ್ರಗಳಲ್ಲೂ ಪಕ್ಷ ಗೆಲ್ಲುವುದು ಕಷ್ಟ. ಸ್ಥಳೀಯ ಸಂಸ್ಥೆ ಹಾಗೂ ವಿಧಾನಸಭಾ ಚುನಾವಣೆಯನ್ನು ವಿಜಯೇಂದ್ರ ಅವರ ನೇತೃತ್ವದಲ್ಲಿಯೇ ಎದುರಿಸಬೇಕು. ಅಲ್ಲಿಯವರೆಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಅವರನ್ನು ಮುಂದುವರಿಸಬೇಕು' ಎಂದು ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಸುದ್ದಿಗಾರರಿಗೆ ಹೇಳಿದರು.

ಬಿಎಸ್‌ವೈ ಜನ್ಮದಿನ: ಫೆ.27ರಂದು ಕಾರ್ಯಕ್ರಮ

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಜನ್ಮ ದಿನಾಚರಣೆಯನ್ನು ಫೆ.27ರಂದು ದಾವಣಗೆರೆಯಲ್ಲಿ ಅದ್ದೂರಿಯಾಗಿ ಆಯೋಜಿಸಲು ಈ ಸಭೆಯಲ್ಲಿ ನಿರ್ಣಯಿಸಲಾಯಿತು.

'ಪಕ್ಷವನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪ ಚುನಾವಣಾ ಕಣದಿಂದ ಮಾತ್ರ ಹಿಂದೆ ಸರಿದಿದ್ದಾರೆ. ರಾಜಕಾರಣದಲ್ಲಿ ಇನ್ನೂ ಸಕ್ರಿಯರಾಗಿದ್ದಾರೆ. ಅವರ ಜನ್ಮದಿನದಂದು 20 ಲಕ್ಷ ಜನರನ್ನು ಸೇರಿಸಿ ಶಕ್ತಿ ಪ್ರದರ್ಶಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿ ರಾಷ್ಟ್ರೀಯ ನಾಯಕರನ್ನು ಆಹ್ವಾನಿಸಲಾಗುವುದು' ಎಂದು ಮಾಜಿ ಸಚಿವ ಹರತಾಳು ಹಾಲಪ್ಪ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಜನವರಿಯಲ್ಲಿ ಬದಲಾವಣೆ ನಿರೀಕ್ಷೆ'

ಶಿವಮೊಗ್ಗ: ಜನವರಿಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರು ಬದಲಾಗುವ ನಿರೀಕ್ಷೆ ಇದೆ ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಹೇಳಿದರು.



ಕುಮಾರ್ ಬಂಗಾರಪ್ಪ

'ನಾನು 30 ವರ್ಷಗಳಿಂದ ರಾಜ್ಯ ರಾಜಕಾರಣ-ದಲ್ಲಿದ್ದೇನೆ. ಬಿಜೆಪಿ ಹೈಕಮಾಂಡ್ ರಾಜ್ಯ ಘಟಕದ ಅಧ್ಯಕ್ಷರನ್ನು ಬದಲಾಯಿಸುವಾಗ ಹಿಂದುಳಿದ ವರ್ಗದ-ವರನ್ನು ಪರಿಗಣಿಸಿದರೆ ಪಕ್ಷದ ಅಧ್ಯಕ್ಷ ಹುದ್ದೆಗೆ ನನ್ನನ್ನು ಪರಿಗಣಿಸುವಂತೆ ಹೈಕಮಾಂಡ್‌ಗೆ ಕೋರಿದ್ದೇನೆ' ಎಂದು ಇಲ್ಲಿ ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯ ಬಿಜೆಪಿಯಲ್ಲಿ ನಡೆಯುತ್ತಿರುವ ಭಿನ್ನಮತ ಚಟುವಟಿಕೆಗಳನ್ನು ಕೇಂದ್ರದ ನಾಯಕರು ಗಮನಿಸಿದ್ದಾರೆ. ಶೀಘ್ರವೇ ಅವರು ಕಠಿಣ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಪಂಚಮಸಾಲಿಗೆ 2ಎ ಮೀಸಲಾತಿ ಬೇಡಿಲ್ಲ, ಸಿಎಂ ಬಳಿ ಹೋಗಲ್ಲ'

ವಿಜಯಪುರ: 'ಲಿಂಗಾಯತ ಪಂಚಮಸಾಲಿ ಸಮಾಜ ಎಂದೂ 2 ಎ ಮೀಸಲಾತಿ ಬೇಡಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಡುವುದು ಬೇಡ, ಇನ್ನು ಮುಂದೆ ಅವರ ಬಳಿ ನಾವು ಕೇಳುವುದೂ ಇಲ್ಲ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಇಲ್ಲಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಗಾಗಲೇ 2ಎ ಪ್ರವರ್ಗದಲ್ಲಿರುವ 104 ಹಿಂದುಳಿದ ಸಮಾಜಗಳ ಹಕ್ಕು ಕಸಿದುಕೊಳ್ಳಲು ನಾವು ತಯಾರಿಲ್ಲ, ಅವರಿಗೆ ಅನ್ಯಾಯ ಮಾಡುವುದಿಲ್ಲ, ಅವರ ಬುಟ್ಟಿಗೆ ಕೈಹಾಕುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಮೊದಲಿನಿಂದಲೂ ನಾವು 2ಎ ಮೀಸಲಾತಿ ಕೇಳಿಲ್ಲ, ಪಂಚಮಸಾಲಿಗೆ 2ಎ ಮೀಸಲಾತಿ ಬೇಕು ಎಂದು ಆರಂಭದಲ್ಲಿ ಬೆಂಕಿ ಹಚ್ಚಿದವರೇ ಕಾಂಗ್ರೆಸ್‌ನವರು' ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹಾಗೂ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೆಸರು ಹೇಳದೇ ಪರೋಕ್ಷವಾಗಿ ಆರೋಪಿಸಿದರು.



'2ಡಿ'ಯಲ್ಲೇ ಪಡೆದುಕೊಳ್ಳುತ್ತೇವೆ: 'ಕಾಂಗ್ರೆಸ್ ಸರ್ಕಾರ ಮುಸ್ಲಿಮರಿಗೆ ಸಂವಿಧಾನ ವಿರೋಧಿಯಾಗಿ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ತೆಗೆದುಹಾಕಿ, ಆ ಮೀಸಲಾತಿಯನ್ನು 2ಸಿ ಮತ್ತು 2 ಡಿ ಎಂಬ ಹೊಸ ಪ್ರವರ್ಗಗಳನ್ನು ಸೃಷ್ಟಿಸಿ, ಲಿಂಗಾಯತರು, ಒಕ್ಕಲಿಗರು, ಮರಾಠರು, ಜೈನರು, ಕ್ರೈಸ್ತರು, ವೈಷ್ಣವರು, ಕುರುಬರು ಸೇರಿದಂತೆ ವಿವಿಧ ಸಮಾಜಗಳಿಗೆ ಹಂಚಿಕೆ ಮಾಡುವ ಸಂಬಂಧ ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೊಸ ಸೂತ್ರ ಕಂಡುಹಿಡಿಯಲಾಗಿತ್ತು. ಸದ್ಯ ಸುಪ್ರೀಂ ಕೋರ್ಟ್‌ನಲ್ಲಿ ಈ ಪ್ರಕರಣ ಇದ್ದು, ಕಾನೂನು ಹೋರಾಟ ಮುಂದುವರಿಸುತ್ತೇವೆ. ಮುಸ್ಲಿಮರಿಗೆ ಸಂವಿಧಾನ ಬಾಹಿರವಾಗಿ ನೀಡಿರುವ ಮೀಸಲಾತಿ ರದ್ದುಗೊಳಿಸಿ, ಅದರಲ್ಲಿ ನಾವು ಮೀಸಲಾತಿ ಪಡೆದುಕೊಳ್ಳುತ್ತೇವೆ' ಎಂದರು.

ಉ.ಕ. ಸಮಸ್ಯೆಗಳ ಚರ್ಚೆ ಇಂದಿನಿಂದ: ಸಿದ್ದರಾಮಯ್ಯ

ಗದಗ (ರೋಣ): 'ಅಧಿವೇಶನದಲ್ಲಿ ಸೋಮವಾರ, ಮಂಗಳವಾರ ಹಾಗೂ ಬುಧವಾರ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಲಿದೆ. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲು ಭಾನುವಾರ ರೋಣ ಪಟ್ಟಣಕ್ಕೆ ಆಗಮಿಸಿದ ವೇಳೆ ಹೆಲಿಪ್ಯಾಡ್‌ನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದರು.

'ಚಿಕ್ಕೋಡಿಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಸರ್ಕಾರದ ವಿರೋಧವಿಲ್ಲ. ಜೆ.ಎಚ್. ಪಾಟೀಲರು ಇರುವಾಗಲೇ ಜಿಲ್ಲೆಯನ್ನಾಗಿ ಮಾಡಬೇಕು ಎಂದು ಸರ್ಕಾರ ಹೇಳಿದೆ. ಬೆಳಗಾವಿಯ ಎಲ್ಲ ಶಾಸಕರ ಸಭೆ ಕರೆದು, ಅಭಿಪ್ರಾಯ ಪಡೆದು ಚರ್ಚಿಸಲಾಗುವುದು' ಎಂದರು.

ಅಶೋಕ ಕಾರ್ಯವೈಖರಿ ಅತೃಪ್ತಿ?

ಪ್ರಜಾವಾಣಿ ವಾರ್ತೆ



ಆಶೋಕ

ಬೆಳಗಾವಿ: ವಿಧಾನಸಭೆ ವಿರೋಧಪಕ್ಷದ ನಾಯಕರಾಗಿ ಆರ್. ಅಶೋಕ ಅವರು ಪರಿಣಾಮಕಾರಿ-ಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಬಿಜೆಪಿ ಶಾಸಕರು ಅಸಮಾಧಾನ ಹೊರಹಾಕಿದ್ದಾರೆ.

'ವಿಧಾನಸಭೆಯಲ್ಲಿ ಕಳೆದ ವಾರ ಪಕ್ಷ ಮತ್ತು ಆರ್‌ಎಸ್‌ಎಸ್‌ಗೆ ಮುಜುಗರವಾಗುವಂತೆ ಕಾಂಗ್ರೆಸ್ ಸದಸ್ಯರು ಟೀಕಿಸಿದಾಗ ತಿರುಗೇಟು ನೀಡದೇ ಅಶೋಕ ಮೌನವಹಿಸಿದ್ದರು' ಎಂಬುದು ಬಿಜೆಪಿ ಶಾಸಕರ ಆಕ್ಷೇಪ.

ಪಂಚಮಸಾಲಿ ಹೋರಾಟ ಕುರಿತ ಚರ್ಚೆ ವೇಳೆ ಗದ್ದಲ ಉಂಟಾಗಿ ಕಲಾಪ ಮುಂದೂಡಲಾಯಿತು. 'ಸಭಾಧ್ಯಕ್ಷರು ಪಕ್ಷಪಾತ ಮಾಡುತ್ತಿದ್ದಾರೆ. ಕೊಠಡಿಗೆ ಹೋಗಿ ಪ್ರಶ್ನಿಸಬೇಕು' ಎನ್ನುತ್ತಲೇ ಕೆಲ ಶಾಸಕರು ಆಕ್ರೋಶದಿಂದ ಅಶೋಕ ವಿರುದ್ಧವೂ ಕಿಡಿಕಾರಿದರು.

ಇದಕ್ಕೂ ಮುನ್ನ ಬಿ.ವೈ.ವಿಜಯೇಂದ್ರ ಸೇರಿ ಕೆಲವು ಶಾಸಕರು 'ಪಂಚಮಸಾಲಿ ವಿಷಯವನ್ನು ನೀವೇ ನಿಯಂತ್ರಣಕ್ಕೆ ತೆಗೆದುಕೊಂಡು ಮುನ್ನಡೆಸಬೇಕು' ಎಂದು ವಿ.ಸುನಿಲ್‌ಕುಮಾರ್ ಅವರಿಗೆ ಸಲಹೆ ನೀಡಿದ್ದರು. 'ಆದರೆ, ಅಶೋಕ ಹಿರಿಯರು, ಬೇಸರ ಮಾಡಿಕೊಳ್ಳುವರು ಎಂಬ ಕಾರಣಕ್ಕೆ ವಿಷಯ ಮುನ್ನಡೆಸಿಕೊಂಡು ಹೋಗಲು ಹಿಂದೇಟು ಹಾಕಿದರು' ಎಂದು ಮೂಲಗಳು ಹೇಳಿವೆ.

'ಪಂಚಮಸಾಲಿ ಪ್ರತಿಭಟನೆ ವೇಳೆ ಲಾಠಿ ಪ್ರಹಾರ ಪ್ರಕರಣ ಪ್ರಸ್ತಾಪಿಸಿದಾಗ ಪ್ರತಿಭಟನೆ ವೇಳೆ ಕಲ್ಲು ಹೊಡೆಸಿದ್ದು ಆರ್‌ಎಸ್‌ಎಸ್‌ನವರೇ ಎಂದು ಕಾಂಗ್ರೆಸ್ ಸದಸ್ಯರು ಆರೋಪಿಸಿದಾಗ ಖಂಡಿಸಲು ಮುಂದಾಗಲಿಲ್ಲ. ವಿರೋಧ ಪಕ್ಷದ ನಾಯಕರೇ ಈ ರೀತಿ ನಡೆದುಕೊಂಡರೆ ಹೇಗೆ' ಎಂದು ಶಾಸಕರೊಬ್ಬರು ಪ್ರಶ್ನಿಸಿದರು.

'ನಮ್ಮ ದೌರ್ಬಲ್ಯ ಆಡಳಿತ ಪಕ್ಷಕ್ಕೆ ಗೊತ್ತಾಗಿದೆ. ಕಾಂಗ್ರೆಸ್‌ನವರು ಸದನವನ್ನು ಬೇಕಾದಂತೆ ನಡೆಸಿಕೊಂಡು ಹೋಗುತ್ತಿದ್ದಾರೆ. ಹಿರಿಯ ಸಚಿವರೊಬ್ಬರು ಬಂದು ನಿಮ್ಮ ನಾಯಕರಿಗೆ ನಿಭಾಯಿಸಲು ಕಷ್ಟ-ವಾಗುತ್ತಿದೆ ಎಂದು ನಮ್ಮ ಬಳಿಯೇ ಹೇಳುವ ಹಂತಕ್ಕೆ ತಲುಪಿದೆ. ಇದನ್ನು ನಾವು ಯಾರ ಬಳಿ ಹೇಳಿಕೊಳ್ಳಬೇಕು, ಮುಂದೆ ಏನು ಮಾಡಬೇಕು ಎಂಬುದು ಗೊತ್ತಾಗುತ್ತಿಲ್ಲ' ಎಂದು ಹೇಳಿದರು.

ಮಾಣಿಪ್ಪಾಡಿ ಆರೋಪ: ಸದನದಲ್ಲಿ ಸಂಘರ್ಷ?

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಕ್ಫ್ ಆಸ್ತಿ ಕಬಳಿಕೆ ಕುರಿತು ಮೌನ ವಹಿಸಲು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಅನ್ವರ್ ಮಾಣಿಪ್ಪಾಡಿ ಅವರಿಗೆ ₹ 150 ಕೋಟಿ ಆಮಿಷ ಒಡ್ಡಿರುವ ಆರೋಪ, ಕೋವಿಡ್ ಅಕ್ರಮಗಳ ಕುರಿತ ನ್ಯಾಯಮೂರ್ತಿ ಡಿಕುನ್ಹ ವರದಿ, ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣವನ್ನು ವಿಧಾನಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ಸೋಮವಾರದಂದು ಕಲಾಪದಲ್ಲಿ ಬಳ್ಳಾರಿಯಲ್ಲಿ ಗರ್ಭಿಣಿಯರ ಸರಣಿ ಸಾವು, ಅಬಕಾರಿ ಸಚಿವರಿಂದ ₹ 700 ಕೋಟಿ ವಸೂಲಿ ಆರೋಪದ ವಿಷಯಗಳ ಪ್ರಸ್ತಾಪಕ್ಕೆ ಸಿದ್ಧತೆ ನಡೆಸಿರುವ ಬಿಜೆಪಿಯನ್ನು ಕಟ್ಟಿ ಹಾಕಲು ಕಾಂಗ್ರೆಸ್ ಪ್ರತಿತಂತ್ರ ರೂಪಿಸಿದೆ.

ಶುಕ್ರವಾರ ಸಚಿವ ಸಂಪುಟ ಸಭೆಯಲ್ಲಿ ಬಿಜೆಪಿ ವಿರುದ್ಧ ಇನ್ನಷ್ಟು ಆಕ್ರಮಣಕಾರಿಯಾಗಿ ವಿಷಯಗಳನ್ನು ಪ್ರಸ್ತಾಪಿಸಲು ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇದು ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಸಂಘರ್ಷಕ್ಕೆ ಕಾರಣವಾಗಲಿದೆ.

ಕಾಂಗ್ರೆಸ್ ಸದನದ ದಿಕ್ಕು ತಪ್ಪಿಸುತ್ತಿದೆ: ವಿಜಯೇಂದ್ರ

'ಕಾಂಗ್ರೆಸ್ ಸರ್ಕಾರ ಜನರ ಸಮಸ್ಯೆ ಬಗ್ಗೆ ಚರ್ಚಿಸುತ್ತಿಲ್ಲ. ಬದಲಿಗೆ, ಕೋವಿಡ್‌ಗೆ ಸಂಬಂಧಿಸಿ ಮಧ್ಯಂತರ ವರದಿ ಪಡೆದು ಎಫ್‌ಐಆರ್ ದಾಖಲಿಸಿ, ಚರ್ಚೆಗೆ ಮುಂದಾಗಿದೆ. ಈ ಮೂಲಕ ಸದನದ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈಗ ಕೋವಿಡ್‌ಗೆ ಸಂಬಂಧಿಸಿದ ಮಧ್ಯಂತರ ವರದಿ ತರಿಸಲು ಏನು ಆತುರವಿತ್ತು' ಎಂದು ಪ್ರಶ್ನಿಸಿದರು.

'ರಾಜಕೀಯ ಪ್ರೇರಿತ ತನಿಖೆ, ದಬ್ಬಾಳಿಕೆಗೆ ಹೆದರುವ ಪ್ರಶ್ನೆ ಇಲ್ಲ. ಧೈರ್ಯವಾಗಿ ಎದುರಿಸುತ್ತೇವೆ' ಎಂದರು. 'ಆಗ ಸಿ.ಎಂ ಮಗನಾಗಿ ನಾನೇಕೆ ಅನ್ವರ್ ಮಾಣಿಪ್ಪಾಡಿ ಅವರ ಮನೆಗೆ ಹೋಗಲಿ? ಕಾಂಗ್ರೆಸ್ ಮುಖಂಡರ ಬಚಾವ್ ಮಾಡಲು ಏಕೆ ₹150 ಕೋಟಿ ಆಫರ್ ಕೊಡಲಿ?' ಎಂದರು.

ಮಾಣಿಪ್ಪಾಡಿ ದ್ವಿಪಾತ್ರ ಅಭಿನಯ: ಪ್ರಿಯಾಂಕ್ ಪ್ರಶ್ನೆ

ಬೆಂಗಳೂರು: 'ವಿಜಯೇಂದ್ರ ಮೇಲಿನ ಆರೋಪ ಸುಳ್ಳು' ಎನ್ನುತ್ತಿರುವ ಬಿಜೆಪಿ ಮುಖಂಡ ಅನ್ವರ್ ಮಾಣಿಪ್ಪಾಡಿ ಅವರು ದ್ವಿಪಾತ್ರ ಅಭಿನಯ ಮಾಡುತ್ತಿದ್ದಾರೆಯೇ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

'ಎಕ್ಸ್'ನಲ್ಲಿ ಅವರು, 'ವಕ್ಫ್ ವರದಿ ಮುಚ್ಚಿಹಾಕಲು ವಿಜಯೇಂದ್ರ ಕೋಟಿ ಕೋಟಿ ಆಮಿಷ ಒಡ್ಡಿದ್ದಾರೆ ಎಂದಿದ್ದರು. ಈಗ ಮಾತು ಬದಲಿಸಿದ್ದಾರೆ. ಅದಕ್ಕೆ ಎಷ್ಟು 'ಆಫರ್' ಬಂದಿದೆ? ಸತ್ಯಕ್ಕಾಗಿ ಹುತಾತ್ಮರಾಗಲು ಸಿದ್ಧ ಎಂದಿದ್ದ ಮಣಿಪ್ಪಾಡಿಯವರಿಗೆ ಈಗ ಏನಾಯಿತು' ಎಂದೂ ಪ್ರಶ್ನಿಸಿದ್ದಾರೆ.

ವಕ್ಫ್ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ನಡೆದಿದ್ದು, ಸೋಮವಾರ ಮುಖ್ಯಮಂತ್ರಿ ಸಿದ್ಧರಾಮಯ್ಯ ಉತ್ತರ ನೀಡಲಿದ್ದಾರೆ.

ಪೂರ್ವಭಾವಿಯಾಗಿ ಸಿ.ಎಂ, ವಿಜಯೇಂದ್ರ ಅವರು ಮಾಣಿಪ್ಪಾಡಿ ಅವರಿಗೆ ₹150 ಕೋಟಿ ಆಮಿಷ ಒಡ್ಡಿದ್ದರು ಎಂಬ ಆರೋಪವನ್ನು ಮುನ್ನಲೆಗೆ ತಂದಿದ್ದಾರೆ. ಮಾಣಿಪ್ಪಾಡಿ ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ. ಪ್ರಧಾನಿ ಇದನ್ನು ಗಂಭೀರವಾಗಿ ಪರಿಗಣಿಸಿ ಸಿಬಿಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದ್ದು, ಬಿಜೆಪಿ ವಿರುದ್ಧ ಪ್ರಹಾರ ನಡೆಸುವ ಮುನ್ಸೂಚನೆ ನೀಡಿದ್ದಾರೆ.

ರೈತರ ಜಮೀನು, ಮಠ-ಮಂದಿರಗಳ ಜಮೀನುಗಳಿಗೆ ವಕ್ಫ್ ನೋಟಿಸ್ ಪ್ರಕರಣಗಳ ಇತ್ಯರ್ಥಕ್ಕಾಗಿ ಸಮಿತಿ ರಚಿಸುವ ವಿಚಾರವನ್ನೂ ಸಿ.ಎಂ ಪ್ರಕಟಿಸುವ ನಿರೀಕ್ಷೆಯಿದೆ. ಮೇಲ್ಮನೆಯಲ್ಲಿ ಚರ್ಚೆ ಪೂರ್ಣಗೊಂಡಿದ್ದು, ಸಚಿವ ಜಮೀರ್ ಅಹಮದ್ ಖಾನ್ ಉತ್ತರಿದ್ದಾರೆ.

'ವಿಜಯೇಂದ್ರ ಆಮಿಷ ಒಡ್ಡಿದ್ದು ಗೊತ್ತಿಲ್ಲ, ನೆನಪಿಲ್ಲ'

ಪ್ರಜಾವಾಣಿ ವಾರ್ತೆ



ಅನ್ವರ್ ಮಾಣಿಪ್ಪಾಡಿ

ಮಂಗಳೂರು: 'ವಕ್ಫ್ ಆಸ್ತಿ ಕಬಳಿಕೆ ಸಂಬಂಧ ಬಿ.ವೈ. ವಿಜಯೇಂದ್ರ ₹150 ಕೋಟಿ ಆಮಿಷ ಒಡ್ಡಿದ ವಿಷಯ ನನಗೆ ಗೊತ್ತಿಲ್ಲ. ನನಗೆ ಈಗ ಅದು ನೆನಪಾಗುತ್ತಲೂ ಇಲ್ಲ' ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ತಿಳಿಸಿದರು.

ವಕ್ಫ್ ಆಸ್ತಿ ಕಬಳಿಕೆ ಕುರಿತು ಮೌನ ವಹಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ₹150 ಕೋಟಿ ಆಮಿಷ ಒಡ್ಡಿದ್ದಾರೆ ಎಂಬ ಆರೋಪದ ಕುರಿತು ಸುದ್ದಿಗಾರರ ಪ್ರಶ್ನೆಗೆ ಭಾನುವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, '2013ರಲ್ಲಿ ನಾನು ಅವರನ್ನು ನೋಡಿಯೂ ಇರಲಿಲ್ಲ. ಅವರ ಹೆಸರು ಮಾತ್ರ ಕೇಳಿದ್ದೆ. ವಿಜಯೇಂದ್ರ ಅವರು ರಾಜ್ಯ ಉಪಾಧ್ಯಕ್ಷರಾಗಿದ್ದಾಗ, ಅವರ ತಂದೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾ-ಗಿದ್ದರು. ಆಗ ವಿಜಯೇಂದ್ರ ಅವರನ್ನು ಇದೇ ವಿಚಾರವಾಗಿ ಭೇಟಿ ಮಾಡಿದ್ದೆ. ಆಗ ಅವರು, 'ನೀವು ಬಹಳಷ್ಟು ನೊಂದಿದ್ದೀರಿ. ನಿಮಗೆ ಬಹಳಷ್ಟು ನಷ್ಟವಾಗಿದೆ. ಹಾಗಾಗಿ ಈ ವಿಚಾರವನ್ನು ಇಲ್ಲಿಗೆ ಮುಗಿಸಬಹುದು' ಎಂದು ಹೇಳಿದ್ದರು. ಅದಕ್ಕೆ ನಾನು ಅವರ ಮೇಲೆ ಕಿಡಿಕಾರಿದ್ದು ಸತ್ಯ' ಎಂದರು.

'ನಮ್ಮದೇ ಸರ್ಕಾರ ಇದ್ದರೂ ನನ್ನ ವರದಿಯ ಶಿಫಾರಸುಗಳನ್ನು ಏಕೆ ಜಾರಿಮಾಡುತ್ತಿಲ್ಲ ಎಂದು ಒಮ್ಮೆ ಪಕ್ಷದ ಕಚೇರಿಯಲ್ಲಿ ಪ್ರಶ್ನಿಸಿದ್ದೆ. ಆಗ ಸಿಟ್ಟಿನಲ್ಲಿ ಮಾತನಾಡಿರಬಹುದು. ನನ್ನ ವರದಿ ಜಾರಿಗೊಳಿಸುವುದಕ್ಕೆ ಯಾರು ತಡೆಒಡ್ಡುತ್ತಾರೊ ಅಂತಹವರ ಮೇಲೆ ನನಗೆ ಬರುವ ಕೋಪ ಅಷ್ಟಿಷ್ಟಲ್ಲ. ನನ್ನ ವರದಿ ನಿರ್ಲಕ್ಷಿಸಿದ ರಾಜಕೀಯ ವ್ಯಕ್ತಿಗಳು ಹಾಗೂ ಅಧಿಕಾರಿಗಳ ವಿರುದ್ಧವೂ ಕಿಡಿಕಾರಿದ್ದೇನೆ' ಎಂದರು.

'2012ರಲ್ಲಿ ನಾನು ವರದಿ ತಯಾರಿಸುವಾಗ ಹಾಗೂ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಸಂದರ್ಭದಲ್ಲಿ ಬಹಳಷ್ಟು ಮಂದಿ ನನಗೆ ಆಮಿಷ ಒಡ್ಡಲು ಬಂದಿದ್ದರು. ಸತ್ಯ ಹೇಳಬೇಕಾದರೆ, ₹150 ಕೋಟಿಯಲ್ಲ, ಅದಕ್ಕಿಂತ ಎಷ್ಟೋ ಜಾಸ್ತಿ ಆಮಿಷ ಒಡ್ಡಿದ್ದಾರೆ. ಅವರಲ್ಲಿ ಬಹಳಷ್ಟು ಮಂದಿ ಕಾಂಗ್ರೆಸ್ಸಿಗರೇ ಆಗಿದ್ದಾರೆ. ಆಮಿಷ ಒಡ್ಡಿದ್ದು ಯಾರು ಎಂದು ಈಗ ಹೇಳಲು ಸಾಧ್ಯವಿಲ್ಲ' ಎಂದರು.

'ವಕ್ಫ್ ಆಸ್ತಿ ಕಬಳಿಕೆಗೆ ಸಂಬಂಧಿಸಿದಂತೆ ನನ್ನ ವರದಿ ಅನು-ಷ್ಠಾನಕ್ಕಾಗಿ ಈಗಲೂ ಹೋರಾಟ ಮಾಡುತ್ತಿದ್ದೇನೆ. ಈಗಲೂ ಈ ವಿಚಾರ ಹೈಕೋರ್ಟ್ ಮುಂದೆ ಇದೆ' ಎಂದರು.

ಕೇಂದ್ರ ಸರ್ಕಾರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರುತ್ತಿರುವ ಕುರಿತು ಪ್ರತಿ-ಕ್ರಿಯಿಸಿದ ಅವರು, 'ನನ್ನ ವರದಿಯ ಆಧಾರದಲ್ಲಿ ವಕ್ಫ್ ಕಾಯ್ದೆಗೆ ಕೆಲವೊಂದು ತಿದ್ದುಪಡಿ ತರುವಂತೆ ನಾನೇ ಕೋರಿದ್ದೆ. ಯಾವ ರೀತಿಯಲ್ಲೂ ವಕ್ಫ್ ಆಸ್ತಿ ಕಬಳಿಕೆ ಆಗಬಾರದು ಎಂಬುದು ನನ್ನ ಉದ್ದೇಶ. ಅಲ್ಪಸಂಖ್ಯಾತರಿಗೆ ತೊಂದರೆ ಆಗದಿದ್ದರೆ, ಅವರಿಗೆ ಒಳ್ಳೆಯದಾಗುವು-ದಿದ್ದರೆ ಕೇಂದ್ರ ಸರ್ಕಾರ ತರುವ ಕಾಯ್ದೆ ತಿದ್ದುಪಡಿಗೆ ನನ್ನ ಸಹಮತ ಖಂಡಿತಾ ಇದೆ' ಎಂದರು.

ವಿಡಿಯೊ ರೆಕಾರ್ಡ್‌ನ ಆಧಾರದ ಮೇಲೆ ಮಾತನಾಡಿರುವೆ: ಸಿ.ಎಂ

ಗದಗ (ರೋಣ): 'ನಾನು ವಿಡಿಯೊ ರೆಕಾರ್ಡ್‌ನ ಆಧಾರದ ಮೇಲೆ ಮಾತನಾಡಿರುವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ವಕ್ಫ್ ವಿಚಾರದಲ್ಲಿ ಬಿ.ವೈ. ವಿಜಯೇಂದ್ರ ₹150 ಕೋಟಿ ಆಮಿಷ ಒಡ್ಡಿದ್ದಾರೆ' ಎಂದು ಮುಖಂಡ ಅನ್ವರ್ ಮಾಣಿಪ್ಪಾಡಿ ಮಾಡಿರುವ ಆರೋಪದ ಕುರಿತು ಪ್ರತಿಕ್ರಿಯಿಸಿದರು.

'ಸಿಬಿಐ ತನಿಖೆಗೆ ಕೊಟ್ಟರೆ ಕಾಂಗ್ರೆಸ್ಸಿನವರೇ ಸಿಕ್ಕಿ ಬೀಳುತ್ತಾರೆ' ಎನ್ನುವ ಬಿಜೆಪಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, 'ಹಾಗಾದರೆ ಕೇಂದ್ರ ಸರ್ಕಾರ ಸಿಬಿಐಗೆ ಕೊಟ್ಟು ತನಿಖೆ ಮಾಡಿಸಲಿ' ಎಂದು ಅವರು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರಧಾನಿ 'ನ ಖಾವುಂಗಾ, ಖಾನೆದುಂಗಾ' ಎಂದು ಹೇಳುತ್ತಾರೆ. ಅದಕ್ಕಾಗಿ ಅವರೇ ಸಿಬಿಐ ತನಿಖೆಗೆ ಕೊಡಲಿ. ಪ್ರಧಾನಿಗೆ, ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ ಎಂದು ವಿಡಿಯೊದಲ್ಲಿ ಹೇಳಿದ್ದಾರೆ. ಅದರ ಆಧಾರದ ಮೇಲೆ ನಾನು ಮಾತನಾಡಿರುವೆ. ಈಗ ಇಲ್ಲ ಅಂತ ಹೇಳಿದರೆ ಅವರು ಸುಳ್ಳು ಹೇಳುತ್ತಿದ್ದಾರೆ ಎಂದರ್ಥ. ವಿಡಿಯೊದಲ್ಲಿರುವ ಧ್ವನಿ ಅನ್ವರ್ ಮಾಣಿಪ್ಪಾಡಿ ಅವರದು ಹೌದೋ, ಅಲ್ಲವೋ ಎನ್ನುವ ಬಗ್ಗೆ ಮಾಧ್ಯಮದವರಿಗೆ ಚೆನ್ನಾಗಿ ಗೊತ್ತಿರುತ್ತದೆ ತಾನೇ' ಎಂದು ಮುಖ್ಯಮಂತ್ರಿ ಪತ್ರಕರ್ತರನ್ನೇ ಪ್ರಶ್ನಿಸಿದರು.

ರಂಭಾಪುರಿ ಮಠಕ್ಕೆ ನಟಿ ಶಿಲ್ಪಾ ಶೆಟ್ಟಿ ರೊಬೊಟಿಕ್ ಆನೆ ಕೊಡುಗೆ



ಬಾಳೆಹೊನ್ನೂರಿನ ರಂಭಾಪುರಿ ಮಠಕ್ಕೆ ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಕೊಡುಗೆ ನೀಡಿರುವ 'ರೊಬೊಟಿಕ್ ಆನೆ'ಯನ್ನು ಮಠದ ಸ್ವಾಮೀಜಿ ಪಡೆದುಕೊಂಡರು

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು: ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರು ರಂಭಾಪುರಿ ಮಠಕ್ಕೆ ಪ್ರಾಣಿದಯಾ ಸಂಘ 'ಪೆಟಾ' ವತಿಯಿಂದ ಸುಮಾರು ₹10 ಲಕ್ಷ ಮೌಲ್ಯದ ರೊಬೊಟಿಕ್ ಆನೆಯನ್ನು ಕೊಡುಗೆಯಾಗಿ ನೀಡಿದ್ದಾರೆ.

ರೊಬೊಟಿಕ್ ಆನೆಯನ್ನು ರಂಭಾಪುರಿ ಪೀಠದ ವೀರ ಸೋಮೇಶ್ವರ ಸ್ವಾಮೀಜಿ ಮಠಕ್ಕೆ ಬರಮಾಡಿಕೊಂಡು ಚಾಲನೆ ನೀಡಿದರು.

ನೋಡಲು ನೈಜ ಆನೆಯಂತೆ ಕಾಣುವ ಈ ರೊಬೊಟಿಕ್ ಆನೆಯು, ಮಠದ ಆವರಣದಲ್ಲೇ ಇರಲಿದ್ದು, ಮಠಕ್ಕೆ ಬರುವ ಭಕ್ತರನ್ನು ಆಶೀರ್ವದಿಸಲಿದೆ. ಮಠದ ಆವರಣದಲ್ಲಿ ಈ ಆನೆಗಾಗಿ ಪ್ರತ್ಯೇಕ ಕಟ್ಟಡ ನಿರ್ಮಿಸಲಾಗಿದೆ. ಕಣ್ಣು ತೆರೆದು, ತಲೆ, ಸೊಂಡಿಲು ಹಾಗೂ ಬಾಲವನ್ನು ಅಲುಗಾಡಿಸುತ್ತಿರುವ ಆನೆಯನ್ನು ನೋಡಿದರೆ ನಿಜವಾದ ಆನೆಯೇ ಎದುರಿಗಿದ್ದಂತೆ ಭಾಸವಾಗುತ್ತದೆ.

'ನಟಿ ಶಿಲ್ಪಾಶೆಟ್ಟಿ ರಂಭಾಪುರಿ ಮಠಕ್ಕೆ ನಿಜವಾದ ಆನೆಯನ್ನೇ ಕೊಡುವ ಯೋಚನೆ ಹೊಂದಿದ್ದರು. ಆದರೆ, ಕಾನೂನಿನ ತೊಡಕಾಗಬಹುದು ಎಂದು, ರೊಬೊಟಿಕ್ ಆನೆಯನ್ನು ಕೊಡುಗೆಯಾಗಿ ನೀಡಿದ್ದಾರೆ' ಎಂದು ಪೆಟಾ ಸಂಸ್ಥೆಯ ಕಾರ್ಯಕರ್ತರು ಹೇಳಿದರು.

ಮಠಕ್ಕೆ ಬಂದಿದ್ದ ಭಕ್ತರು ರೊಬೊಟಿಕ್ ಆನೆಯ ಜತೆಗೆ ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು.

ಮಾಜಿ ಶಾಸಕ ಜೆ.ನರಸಿಂಹಸ್ವಾಮಿ ನಿಧನ

ದೊಡ್ಡಬಳ್ಳಾಪುರ: ತಾಲ್ಲೂಕಿನ ಹಿರಿಯ ರಾಜಕಾರಣಿ ದಿವಂಗತ ಆರ್.ಎಲ್. ಜಾಲಪ್ಪ ಅವರ ಹಿರಿಯ ಪುತ್ರ ಮಾಜಿ ಶಾಸಕ ಜೆ.ನರಸಿಂಹಸ್ವಾಮಿ (78) ಭಾನುವಾರ ಬೆಳಗ್ಗೆ ನಿಧನ ಹೊಂದಿದರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.



ಜೆ.ನರಸಿಂಹಸ್ವಾಮಿ

2004ರಲ್ಲಿ ಹಾಗೂ 2008ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ದೊಡ್ಡಬಳ್ಳಾಪುರ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. 2008ರಲ್ಲಿ ಅಪರೇಷನ್ ಕಮಲದಿಂದ ಬಿಜೆಪಿಗೆ ಸೇರ್ಪಡೆಗೊಂಡು ಉಪ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿ ರಾಜ್ಯ ಕೊಳಚೆ ನಿರ್ಮೂಲನೆ ಮಂಡಳಿ ಅಧ್ಯಕ್ಷರಾಗಿದ್ದರು. 2013 ಹಾಗೂ 2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋಲು ಕಂಡಿದ್ದರು.

ಮೃತರಿಗೆ ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಅವರ ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮ ತೂಬಗೆರೆಯಲ್ಲಿ ನಡೆಯಿತು.

ಇದಕ್ಕೂ ಮೊದಲು ದೊಡ್ಡಬಳ್ಳಾಪುರ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು.

ಪತ್ನಿ, ಅತ್ತೆ, ಬಾಮೈದ ಬಂಧನ

ಒಂದನೇ ಪುಟದಿಂದ...

ಹಾಗಾಗಿ ಉತ್ತರ ಪ್ರದೇಶದ ಜೌನ್‌ಪುರ ದಲ್ಲಿರುವ ನಿಖಿತಾ ಮನೆ ಬಾಗಿಲಿಗೆ ಡಿಸೆಂಬರ್ 13ರಂದು ಸಮನ್ಸ್ ಅಂಟಿಸಿ, ಮೂರು ದಿನದೊಳಗಾಗಿ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಿದ್ದರು.

ತಲೆಮರೆಸಿಕೊಂಡಿದ್ದ ನಿಖಿತಾ ಸೇರಿ ಎಲ್ಲ ಆರೋಪಿಗಳು ಅಲಹಾಬಾದ್ ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಮೊಬೈಲ್ ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಸ್ನೇಹಿತರ ನೆರವು ಪಡೆದು ಆರೋಪಿಗಳು ಪದೇ ಪದೇ ವಾಸ ಸ್ಥಳ ಬದಲಿಸುತ್ತಿದ್ದರು. ಸ್ಥಳೀಯ ಪೊಲೀಸರ ಸಹಕಾರದಿಂದ ಆರೋಪಿಗಳನ್ನು ಬಂಧಿಸುವಲ್ಲಿ ರಾಜ್ಯ ಪೊಲೀಸರು ಯಶಸ್ವಿಯಾಗಿದ್ದಾರೆ.

'ಅತುಲ್ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಅತುಲ್ ಅವರ ನಾಲ್ಕು ವರ್ಷದ ಮಗು ನಿಖಿತಾ ಅವರ ಸಂಬಂಧಿಕರ ಬಳಿ ಇದೆ. ನಿಷ್ಪಕ್ಷಪಾತವಾಗಿ ಪ್ರಕರಣದ ತನಿಖೆ ಮಾಡಲಾಗುತ್ತಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಗುಣಾರೆ ತಿಳಿಸಿದರು.

ಮಾರತ್‌ಹಳ್ಳಿಯ ಬಹುರಾಷ್ಟ್ರೀಯ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಅತುಲ್ ಸುಭಾಷ್, ಪತ್ನಿ ಹಾಗೂ ಆಕೆಯ ಮನೆಯವರು ಕಿರುಕುಳ ನೀಡುತ್ತಿರುವು-ದಾಗಿ ಆರೋಪಿಸಿ ಡಿಸೆಂಬರ್ 9ರಂದು ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು.

ಅತುಲ್ ಅವರ ಲ್ಯಾಪ್‌ಟಾಪ್, ಮೊಬೈಲ್ ಪಾಸ್‌ವರ್ಡ್ ಪತ್ತೆಯಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.



ಆರೋಪಿಗಳಾದ ನಿಶಾ ಸಿಂಘಾನಿಯಾ, ನಿಖಿತಾ ಸಿಂಘಾನಿಯಾ, ಅನುರಾಗ್ ಸಿಂಘಾನಿಯಾ ಅವರನ್ನು ಪೊಲೀಸರು ಬಂಧಿಸಿದ್ದಾರೆ

ವರದಕ್ಷಿಣೆ ಕಿರುಕುಳ ಕಾನೂನು ಬದಲಾವಣೆ ಅಗತ್ಯ: ಪರಮೇಶ್ವರ

'ವರದಕ್ಷಿಣೆ ಕಿರುಕುಳ ಕಾನೂನು ದುರ್ಬಳಕೆಯ ಬಗ್ಗೆ ಭಾರತೀಯ ನ್ಯಾಯ ಸಂಹಿತೆಯಲ್ಲಿ ಚರ್ಚೆಯಾಗಬೇಕು. ದೇಶ ಹಾಗೂ ರಾಜ್ಯದ ಕಾನೂನಿನಲ್ಲಿಯೂ ಬದಲಾವಣೆ ಆಗಬೇಕಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಅಭಿಪ್ರಾಯ-ಪಟ್ಟರು.

ಸಾಫ್ಟ್‌ವೇರ್ ಎಂಜಿನಿಯರ್ ಅತುಲ್ ಸುಭಾಷ್ ಅವರ ಪತ್ನಿ ನಿಖಿತಾ, ಅತ್ತೆ ನಿಶಾ ಮತ್ತು ಬಾಮೈದ ಬಂಧನ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ಮಹಿಳೆಯರಿಗಿರುವ ಕಾನೂನು ದುರ್ಬಳಕೆ ಆಗಿದೆ ಎಂಬುದೂ ಸೇರಿದಂತೆ ಅನೇಕ ವಿಚಾರಗಳನ್ನು ಅತುಲ್ ಮರಣಪತ್ರದಲ್ಲಿ ಬರೆದಿದ್ದಾರೆ. ಕಾನೂನಿನಲ್ಲಿರುವ ಅಂಶಗಳು ಗಂಡಂದಿರಿಗೆ ತೊಂದರೆ ಆಗುತ್ತಿವೆ ಎಂಬುದು ಆರೋಪ. ಇದು ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗುತ್ತಿದೆ. ಮಹಿಳೆಯರಿಗೆ ನೀಡಿರುವ ಹಕ್ಕು ದುರ್ಬಳಕೆ ಆಗುತ್ತಿದೆ ಎನ್ನುವ ಕೂಗು ಕೇಳಿ ಬಂದಿದೆ' ಎಂದು ಹೇಳಿದರು.

'ನ್ಯಾಯ ಸಿಗುವವರೆಗೆ ಚಿತಾಭಸ್ಮ ವಿಸರ್ಜಿಸಲ್ಲ'

ಸಮಸ್ತಿಪುರ (ಬಿಹಾರ) (ಪಿಟಿಐ): 'ಪುತ್ರನ ಸಾವಿಗೆ ನ್ಯಾಯ ಸಿಗುವವರೆಗೂ, ಆತನ ಚಿತಾಭಸ್ಮವನ್ನು ವಿಸರ್ಜನೆ ಮಾಡುವುದಿಲ್ಲ' ಎಂದು ಟೆಕಿ ಅತುಲ್ ಸುಭಾಷ್ ಅವರ ತಂದೆ ಪವನ್ ಕುಮಾರ್ ಹೇಳಿದ್ದಾರೆ.

'ನನ್ನ ಪುತ್ರ ಅತುಲ್‌ನನ್ನು ಹಣಕ್ಕಾಗಿ ಪೀಡಿಸಿ, ಚಿತ್ರಹಿಂಸೆ ನೀಡಲಾಗಿದೆ. ಪತ್ನಿಯಿಂದಲೇ ಆತ ಅವಮಾನಕ್ಕೊಳಗಾ-ಗಿದ್ದಾನೆ. ಆತನಿಗೆ ಕಿರುಕುಳ ನೀಡಿದ ಎಲ್ಲರಿಗೂ ಕಠಿಣ ಶಿಕ್ಷೆಯಾಗಬೇಕು. ಆಗ ಮಾತ್ರ ಆತನ ಆತ್ಮಕ್ಕೆ ನೆಮ್ಮದಿ ಸಿಗಲಿದೆ' ಎಂದು ಪವನ್ ಅವರು ಭಾನುವಾರ ಪ್ರತಿಕ್ರಿಯಿಸಿದ್ದಾರೆ.

ಪ್ರಕರಣದ ಆರೋಪಿಗಳನ್ನು ಬಂಧಿಸಿರುವ ಕರ್ನಾಟಕ ಪೊಲೀಸರಿಗೆ ಧನ್ಯವಾದಗಳನ್ನು ಅರ್ಪಿಸಿರುವ ಅವರು, ತಮಗೆ ನ್ಯಾಯ ದೊರಕಿಸುವಂತೆ, ಪ್ರಧಾನಿ ನರೇಂದ್ರ ಮೋದಿ ಆದಿಯಾಗಿ ಎಲ್ಲರಿಗೂ ಕಳಕಳಿಯಿಂದ ಮನವಿ ಮಾಡುವುದಾಗಿ ಹೇಳಿದ್ದಾರೆ.

ಇದೇ ವೇಳೆ, ಮೃತ ಅತುಲ್ ಮರಣಪತ್ರದಲ್ಲಿ ಉಲ್ಲೇಖಿ-ಸಿರುವಂತೆ, ಆತನ ನಾಲ್ಕು ವರ್ಷದ ಪುತ್ರನನ್ನು ತಮ್ಮ ವಶಕ್ಕೆ ನೀಡಬೇಕೆಂದು ಕೋರಿದ್ದಾರೆ.

ಪಂಚಾಯಿತಿಯಲ್ಲೂ ಪಕ್ಷ ಚಿಹ್ನೆ?

ಒಂದನೇ ಪುಟದಿಂದ...

ಆದರೆ, ಎಲ್ಲ ಪಕ್ಷಗಳೂ ಸ್ಪರ್ಧಿಸಿದ ಅಭ್ಯರ್ಥಿಗಳನ್ನು ಬೆಂಬಲಿತ ಎಂದೇ ಬಿಂಬಿಸುತ್ತಾ ಚುನಾವಣೆ ನಡೆಸುತ್ತಾ ಬಂದಿವೆ. ಅಭ್ಯರ್ಥಿಗಳೂ ಚುನಾವಣಾ ಆಯೋಗ ತಮಗೆ ಹಂಚಿಕೆ ಮಾಡಿದ ಚಿಹ್ನೆಯ ಜತೆಗೆ, ಪಕ್ಷದ ಚಿಹ್ನೆಗಳನ್ನೂ ಬಳಸಿಕೊಂಡು ಪ್ರಚಾರ ನಡೆಸುವುದು ಸಾಮಾನ್ಯ ಸಂಗತಿಯಾಗಿದೆ. ಗೆದ್ದ ಅಭ್ಯರ್ಥಿಗಳನ್ನು ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಅಭ್ಯರ್ಥಿಗಳೆಂದೇ ಬಿಂಬಿಸಿಕೊಳ್ಳುತ್ತವೆ. ಇದು ಗ್ರಾಮ ಗದ್ದುಗೆ ಏರುವಲ್ಲಿ ಹಲವು ಗೊಂದಲಗಳಿಗೆ ದಾರಿ ಮಾಡಿಕೊಡುತ್ತಿದೆ. ಪಕ್ಷಾಂತರ ನಿಷೇಧ ಕಾಯ್ದೆಯ ಹಂಗಿಲ್ಲದ ಕಾರಣ ವಿಜೇತರಾದ ಅಭ್ಯರ್ಥಿಗಳು ತಮ್ಮ ಅನುಕೂಲ ನೋಡಿಕೊಂಡು ಬಣಗಳನ್ನು ಬದಲಿಸುತ್ತಾರೆ.

'ಇಂತಹ ಅನಿಶ್ಚಿತ ಸ್ಥಿತಿಗೆ ತೆರೆ ಎಳೆಯಲು ಪಕ್ಷದ ಚಿಹ್ನೆ ಅಡಿಯಲ್ಲೇ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು' ಎಂದು ಹಲವು ಶಾಸಕರು, ವಿಧಾನಪರಿಷತ್ ಸದಸ್ಯರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ವಿಷಯ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಅಧಿವೇಶನದಲ್ಲೂ ಚರ್ಚೆಗೆ ಬರಲಿದೆ.

ಪ್ರಸ್ತುತ ಕೇರಳದಲ್ಲಿ ಪಕ್ಷಗಳ ಚಿಹ್ನೆ ಅಡಿಯಲ್ಲೇ ಗ್ರಾಮ ಪಂಚಾಯಿತಿ ಚುನಾವಣೆಗಳು ನಡೆಯುತ್ತಿದ್ದು, ಅಲ್ಲಿನ ಪಂಚಾಯಿತಿಗಳು ಕರ್ನಾಟಕದ ಗ್ರಾಮಗಳಿಗಿಂತಲೂ ಹೆಚ್ಚಿನ ಅಭಿವೃದ್ಧಿ ಸಾಧಿಸಿವೆ. ಉತ್ತಮ ಆಡಳಿತಕ್ಕೆ ಮಾದರಿಯಾಗಿವೆ. ಎಲ್ಲ ರಾಜಕೀಯ ಪಕ್ಷಗಳ ಬುನಾದಿಯೂ ಗಟ್ಟಿಗೊಂಡಿವೆ ಎನ್ನುವ ಮಾಹಿತಿಯನ್ನು ಸರ್ಕಾರಕ್ಕೆ ನೀಡಲಾಗಿದೆ.

ಮುಂದಿನ ಡಿಸೆಂಬರ್‌ಗೆ ಚುನಾವಣೆ

ರಾಜ್ಯದ ಗ್ರಾಮ ಪಂಚಾಯಿತಿಗಳ ಅವಧಿ ಒಂದು ವರ್ಷದ ಒಳಗೆ ಪೂರ್ಣ-ಗೊಳ್ಳಲಿದೆ. 2025ರ ಡಿಸೆಂಬರ್‌ಗೆ ಚುನಾವಣೆ ನಡೆಯಲಿದೆ. ಮೀಸಲಾತಿ, ಕೋರ್ಟ್ ಪ್ರಕರಣ ಮತ್ತಿತರ ಕಾರಣಕ್ಕೆ ವಿಳಂಬವಾದ ಪಂಚಾಯಿತಿಗಳ ಚುನಾವಣೆ ಆಯಾ ಅವಧಿ ಪೂರ್ಣಗೊಂಡ ನಂತರ ಪ್ರತ್ಯೇಕವಾಗಿ ನಡೆಯಲಿವೆ.

2020ರಲ್ಲಿ ರಾಜ್ಯದ 5,728 ಗ್ರಾಮ ಪಂಚಾಯಿತಿಗಳಿಗೆ ಎರಡು ಹಂತಗಳಲ್ಲಿ ಚುನಾವಣೆ ನಡೆದಿತ್ತು. ಡಿ. 22ರಂದು ಮೊದಲ ಹಂತ, ಡಿ. 27ರಂದು ಎರಡನೇ ಹಂತದ ಚುನಾವಣೆ ನಡೆದಿತ್ತು. ಎರಡೂ ಹಂತಗಳಿಂದ 2,14,740 ಅಭ್ಯರ್ಥಿಗಳು ಪಂಚಾಯಿತಿ ಉಮೇದುವಾರಿಕೆ ಬಯಸಿ, ಸ್ಪರ್ಧೆಗೆ ಇಳಿದಿದ್ದರು. ಬೀದರ್ ಜಿಲ್ಲೆಯಲ್ಲಿ ಮಾತ್ರ ಇವಿಎಂ ಬಳಸಲಾಗಿತ್ತು. ಉಳಿದ ಕಡೆಗಳಲ್ಲಿ ಮತ ಪತ್ರಗಳ ಬಳಸಿ, ಮತದಾನ ಮಾಡಲು ಅವಕಾಶ ನೀಡಲಾಗಿತ್ತು.

ಕೇರಳ ಮಾದರಿ ಸದಸ್ಯ ಕ್ಷೇತ್ರಗಳಿಗೆ ಪಟ್ಟು

ಪಂಚಾಯಿತಿವಾರು ಸದಸ್ಯ ಕ್ಷೇತ್ರಗಳನ್ನು ಕೇರಳ ಮಾದರಿಯಲ್ಲಿ ಪುನರ್ ನಿಗದಿ ಮಾಡಲು ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ ವಿಧಾನಪರಿಷತ್ ಸದಸ್ಯರು ಪಟ್ಟುಹಿಡಿದಿದ್ದಾರೆ.

ಕೇರಳದಲ್ಲಿ 1,500ರಿಂದ 1,800 ಜನಸಂಖ್ಯೆಗೆ ಒಬ್ಬರು ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಪಂಚಾಯಿತಿ ಅಧ್ಯಕ್ಷರಿಗೆ ಮಾಸಿಕ ₹15,000, ಉಪಾಧ್ಯಕ್ಷರಿಗೆ ₹12,000 ಹಾಗೂ ಸದಸ್ಯರಿಗೆ ₹7,000 ಗೌರವಧನವಿದೆ. ಪ್ರತಿ ಗ್ರಾಮ ಪಂಚಾಯಿತಿಯ ವಾರ್ಷಿಕ ಬಜೆಟ್ ಕನಿಷ್ಠ ₹12 ಕೋಟಿ ಇದೆ.

ಕರ್ನಾಟಕದಲ್ಲಿ 400 ಹಾಗೂ ಅದಕ್ಕಿಂತ ಕಡಿಮೆ ಜನಸಂಖ್ಯೆ ನಿಗದಿ ಮಾಡಲಾಗಿದೆ. ಇದರಿಂದ ಸದಸ್ಯರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಗ್ರಾಮಗಳ ಅಭಿವೃದ್ಧಿ, ಸದಸ್ಯರ ಗೌರವಧನ ಹೆಚ್ಚಳಕ್ಕೂ ತೊಡಕಾಗಿದೆ ಎಂದು ಸರ್ಕಾರದ ಗಮನ ಸೆಳೆದಿದ್ದಾರೆ.



❦ ಸುಭಾಷಿತ ❦
ಮತ್ತೊಂದು ದೀಪವನ್ನು ಹೊತ್ತಿಸಿದ ಹಣತೆ ಏನನ್ನೂ ಕಳೆದುಕೊಳ್ಳುವುದಿಲ್ಲ.
– ಎ.ಪಿ.ಜೆ ಅಬ್ದುಲ್ ಕಲಾಂ

ಸಂವಿಧಾನ ಕುರಿತ ಚರ್ಚೆ: ಮೂದಲಿಕೆಗೆ ಸೀಮಿತವಾದದ್ದು ವಿಷಾದನೀಯ

ಸಂವಿಧಾನ ರಚನಾ ಸಭೆಯು ಸಂವಿಧಾನವನ್ನು ಅಂಗೀಕರಿಸಿದ 75ನೇ ವರ್ಷಾಚರಣೆಯ ಭಾಗವಾಗಿ ಸಂವಿಧಾನದ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆಸಿದ್ದು ಪ್ರಸ್ತುತವೂ ಸಮಂಜಸವೂ ಆಗಿತ್ತು. ಸಂವಿಧಾನ ರಚನೆಯ ಹಿಂದಿನ ಚಿಂತನೆಗಳು ಮತ್ತು ಆದರ್ಶಗಳ ಬಗ್ಗೆ ಚರ್ಚೆ ನಡೆಯಬೇಕಿತ್ತು. ನಮ್ಮ ಸಂವಿಧಾನವು ದೇಶವನ್ನು ಮುನ್ನಡೆಸುವ ಮಾರ್ಗದರ್ಶಿ ಮತ್ತು ರಾಷ್ಟ್ರ ಹಾಗೂ ಪೌರರಿಗೆ ದೊರೆತಿರುವ ಪ್ರಜಾಸತ್ತಾತ್ಮಕ ಸನ್ನದು. ಸಂವಿಧಾನವನ್ನು ಯಾವ ರೀತಿ ಅನುಸರಿಸಿಕೊಂಡು ಬರಲಾಗಿದೆ ಎಂಬುದರ ಕುರಿತು ಆತ್ಮಾವಲೋಕನ ನಡೆಯಬೇಕಿತ್ತು. ಹಾಗೆಯೇ, ಸಂವಿಧಾನವು ಭವಿಷ್ಯದಲ್ಲಿ ಎದುರಿಸಬಹುದಾದ ಸವಾಲುಗಳು ಏನು ಎಂಬುದರ ಕುರಿತು ಸಂವಾದ ನಡೆಯಬೇಕಿತ್ತು. ಕ್ರಿಯೆ ಮತ್ತು ಆಕಾಂಕ್ಷೆ ನಡುವೆ ಹೊಂದಾಣಿಕೆ ಇಲ್ಲದ ಸಂದರ್ಭಗಳು ಎದುರಾಗುತ್ತವೆ. ಸಂವಿಧಾನ ಅದೆಷ್ಟೇ ಅತ್ಯುತ್ತಮವಾಗಿದ್ದರೂ ಅದನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಸಂಸತ್ತಿನಲ್ಲಿ ಎರಡು ದಿನ ನಡೆದ ಚರ್ಚೆಯು ಸಂವಿಧಾನವನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ಮತ್ತು ಭವಿಷ್ಯದ ಸಾಮೂಹಿಕ ಆತ್ಮಾವಲೋಕನ ಆಗಿರಲಿಲ್ಲ. ನಡೆದದ್ದು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಣ ತೀಕ್ಷ್ಣ ವಾಕ್ಸಮರ. ಎರಡೂ ಕಡೆಯವರು ವೈಫಲ್ಯಕ್ಕೆ ಪರಸ್ಪರರನ್ನು ದೂರಿದರು. ಹಾಗೆಯೇ, ಯಶಸ್ಸಿನ ಶ್ರೇಯವು ತಮ್ಮದೇ ಎಂದು ಹೇಳಿಕೊಂಡರು.



ಸಂವಿಧಾನದ ಕುರಿತು ನಿಜವಾದ ಕಳಕಳಿ ಇದ್ದಿದ್ದರೆ ಚರ್ಚೆಯು ಅರ್ಥಪೂರ್ಣವಾಗಿ ನಡೆಯಬೇಕಿತ್ತು. ಅದು ಆಗದಿದ್ದುದು ದುರದೃಷ್ಟಕರ

1975ರಲ್ಲಿ ತುರ್ತುಪರಿಸ್ಥಿತಿ ಹೇರಿದ್ದಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಆಡಳಿತ ಪಕ್ಷ ಬಿಜೆಪಿ ಟೀಕಿಸಿತು. ದೇಶದಲ್ಲಿ ಈಗ 'ಅಘೋಷಿತ ತುರ್ತುಪರಿಸ್ಥಿತಿ' ಇದೆ ಎಂದು ಕಾಂಗ್ರೆಸ್ ಪಕ್ಷವು ಆಡಳಿತ ಪಕ್ಷವನ್ನು ಮೂದಲಿಸಿತು. ಈ ಎರಡು ಆರೋಪಗಳಲ್ಲಿಯೂ ಸತ್ಯಾಂಶ ಇದೆ. ಸಂವಿಧಾನದ ಕೇಂದ್ರದಲ್ಲಿ ಇರುವ ಪೌರ ಹಕ್ಕುಗಳಿಗೆ ಸರ್ಕಾರದಿಂದ ಸದಾ ಸವಾಲುಗಳು ಎದುರಾಗುತ್ತಲೇ ಇರುತ್ತವೆ. ಇಂತಹ ಸವಾಲುಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗಿವೆ. ಜನರ ಹಕ್ಕುಗಳನ್ನು ಮೊಟಕುಗೊಳಿಸುವ ತುರ್ತುಪರಿಸ್ಥಿತಿಯಂತಹ ಕ್ರಮಗಳ ವಿಚಾರವಾಗಿ ದೇಶ ಸದಾ ಎಚ್ಚರದಿಂದ ಇರಬೇಕು. ಸಂವಿಧಾನದ ಆಶಯಗಳಿಗೆ ಬದ್ಧವಾಗಿ ನಡೆದುಕೊಳ್ಳುವುದು ತುರ್ತುಪರಿಸ್ಥಿತಿಯಂತಹ ಅತಿರೇಕಗಳಿಂದ ರಕ್ಷಣೆ ಪಡೆಯುವ ಮಾರ್ಗವಾಗಿದೆ. ಜಾತ್ಯತೀತತೆ, ಒಕ್ಕೂಟ ವ್ಯವಸ್ಥೆ, ಅಧಿಕಾರದ ಹಂಚಿಕೆ, ನ್ಯಾಯಾಂಗದ ಸ್ವಾತಂತ್ರ್ಯ, ತಾರತಮ್ಯಕ್ಕೆ ಅವಕಾಶವಿಲ್ಲದಿರುವುದು, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಸೇರಿದಂತೆ ಹಲವು ಮೂಲಭೂತ ಅಂಶಗಳು ಸಂವಿಧಾನದಲ್ಲಿ ಇವೆ. ಇವುಗಳಲ್ಲಿ ಕೆಲವು ಅಂಶಗಳಿಗೆ ಕೆಲವು ವರ್ಗಗಳಿಂದ ಹಿನ್ನಡೆ ಆಗಿದೆ. ಕೆಲವು ಅಂಶಗಳ ಮೌಲಿಕತೆಯನ್ನೂ ಪ್ರಶ್ನಿಸಲಾಗಿದೆ. ನಡವಳಿಕೆಯು ಸಂವಿಧಾನದ ಆಶಯಗಳನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಇಲ್ಲದಿದ್ದರೂ ಸರ್ಕಾರಗಳು ಮತ್ತು ಪಕ್ಷಗಳು ಸಂವಿಧಾನದ ಹೆಸರನ್ನು ಪ್ರಮಾಣವನ್ನಾಗಿ ಸ್ವೀಕರಿಸಿವೆ. ಹಾಗೆಯೇ, ಸಂವಿಧಾನದ ವಿವಿಧ ವಿಧಿಗಳ ಬಗ್ಗೆ ಸರ್ಕಾರಗಳು ಮತ್ತು ಪಕ್ಷಗಳು ನೀಡಿದ ವ್ಯಾಖ್ಯೆಯು ಸಂವಿಧಾನದ ಉದ್ದೇಶಕ್ಕೆ ವ್ಯತಿರಿಕ್ತವಾಗಿಯೂ ಕಾಣಿಸಿದೆ.

ಈ ಎಲ್ಲ ಅಂಶಗಳು ಸಂಸತ್ತಿನ ಚರ್ಚೆಯಲ್ಲಿ ಬಂದಿವೆ; ಆದರೆ, ಅವುಗಳಲ್ಲಿ ಹೆಚ್ಚಿನವು ಪರಸ್ಪರರ ಮೇಲೆ ವೈಯಕ್ತಿಕ ಮತ್ತು ರಾಜಕೀಯ ದಾಳಿಗೆ ಸೀಮಿತವಾಗಿದ್ದವು ಎಂಬುದು ವಿಷಾದನೀಯ. ಪ್ರಧಾನಿ ನರೇಂದ್ರ ಮೋದಿ ಅವರ ಮಾತು ಕೂಡ ಇದಕ್ಕಿಂತ ಭಿನ್ನವಾಗಿ ಇರಲಿಲ್ಲ. ಉಪದೇಶ ನೀಡಿಕೆಯ ಸ್ವರೂಪದಿಂದ ಅವರ ಮಾತುಗಳು ಮೇಲಕ್ಕೆ ಏರಲಿಲ್ಲ ಹಾಗೂ ಅವರ ಪಕ್ಷ ಮತ್ತು ಸರ್ಕಾರದ ರಾಜಕೀಯ ಉದ್ದೇಶ ಸಾಧನೆ ಬಿಂಬಿಸಿಕೊಳ್ಳುವುದಕ್ಕೆ ಅವು ಸೀಮಿತವಾಗಿದ್ದವು. ಪ್ರಜಾಪ್ರಭುತ್ವದಲ್ಲಿ ಸಂವಿಧಾನವು ದೇಶದ ಆತ್ಮದಂತೆ ಇರಬೇಕು; ರಾಜಕೀಯ ಮತ್ತು ಆಳ್ವಿಕೆಯು ಅದಕ್ಕೆ ಬದ್ಧವಾಗಿ ಇರಬೇಕು. ಜೊತೆಗೆ, ಸಂವಿಧಾನವು ರಾಜಕಾರಣಕ್ಕೆ ಅತೀತವಾಗಿಯೂ ಇರಬೇಕು. ಆದರೆ, ಚರ್ಚೆಯು ಬಹುಪಾಲು ನೆಹರೂ ಕುಟುಂಬ, ತುರ್ತುಪರಿಸ್ಥಿತಿ, ಮೋದಿ ನೇತೃತ್ವದ ಸರ್ಕಾರ ಮತ್ತು ಇತರ ಹಲವು ವಿಚಾರಗಳ ಆರೋಪ ಮತ್ತು ಪ್ರತ್ಯಾರೋಪಗಳಿಗೆ ಸೀಮಿತವಾಯಿತು. ಇಡೀ ಚರ್ಚೆಯು ವಿಶ್ವಾಸಮತ ಅಥವಾ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಂತೆ ಭಾಸವಾಯಿತು. ಸಂವಿಧಾನದ ಕುರಿತು ನಿಜವಾದ ಕಳಕಳಿ ಇದ್ದಿದ್ದರೆ ಚರ್ಚೆಯು ಅರ್ಥಪೂರ್ಣವಾಗಿ ನಡೆಯಬೇಕಿತ್ತು. ಸಂವಿಧಾನಕ್ಕೆ ನಮನ ಅಥವಾ ಸಂವಿಧಾನದ ಪ್ರತಿಯನ್ನು ಎತ್ತಿ ತೋರುವಂತಹ ಸಾಂಕೇತಿಕ ನಡವಳಿಕೆಯನ್ನು ಮೀರಿದ ಚರ್ಚೆ ನಡೆಯಬೇಕಿತ್ತು. ಇತರರನ್ನು ಕಟುಮಾತುಗಳಿಂದ ಟೀಕಿಸುವುದೇ ಸಂವಿಧಾನದ ಮೇಲಿನ ಚರ್ಚೆ ಆಗುವುದಿಲ್ಲ.

ಅಧಿಕಾರದ ಹಪಹಪಿಯಿಂದ ಸ್ಥಳೀಯಾಡಳಿತಕ್ಕೆ ಹೊಡೆತ

ಶಾಸಕರಿಗೆ ಬೆಣ್ಣೆ: ಸಂವಿಧಾನಕ್ಕೆ 'ದೊಣ್ಣೆ'



ಗತಿಬಿಂಬ
ವೈ.ಗ. ಜಗದೀಶ್

ಸಂವಿಧಾನದ ಪ್ರಸ್ತಾವನೆಯನ್ನು ನಿತ್ಯ ಪಠಣ ಮಾಡಬೇಕೆಂಬ ಆದೇಶ, ವಿಶ್ವ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಮಾನವ ಸರಪಳಿ ನಿರ್ಮಾಣ, ಮಾತೆತ್ತಿದರೆ 'ಸಂವಿಧಾನ ರಕ್ಷಕರು ನಾವೇ' ಎಂದೆನ್ನುವ ಕರ್ನಾಟಕ ಸರ್ಕಾರದ ನೇತಾರರು ಹಾಗೂ ದೇಶದಾದ್ಯಂತ 'ಸಂವಿಧಾನ ಸನ್ಮಾನ' ಅಭಿಯಾನ ನಡೆಸುತ್ತಿರುವ ಬಿಜೆಪಿ ನಾಯಕರು ಈ ಎಲ್ಲರೂ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಷಯದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೌನ್ಸಿಲ್ ಅವಧಿಯು 2020ರ ಸೆಪ್ಟೆಂಬರ್‌ನಲ್ಲಿ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಸದಸ್ಯರ ಅವಧಿಯು 2021ರ ಏಪ್ರಿಲ್‌ನಲ್ಲೇ ಮುಕ್ತಾಯವಾಗಿವೆ. ಮೈಸೂರು, ಶಿವಮೊಗ್ಗ, ತುಮಕೂರು ಪಾಲಿಕೆಗಳ ಅವಧಿ ಮುಗಿದು ವರ್ಷ ಕಳೆದಿದೆ. ಅನೇಕ ಪಟ್ಟಣ ಪಂಚಾಯಿತಿ, ಪುರಸಭೆ ಹಾಗೂ ನಗರಸಭೆಗಳ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ನನೆಗುದಿಗೆ ಬಿದ್ದಿದೆ. ರಾಜ್ಯದಲ್ಲಿ ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಆಡಳಿತ ನಡೆಸಿದರೂ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿಯುವ ಹೊತ್ತಿಗೆ ಚುನಾವಣೆ ನಡೆಸಲು ಒಲವು ತೋರಿದ್ದೇ ಇಲ್ಲ. ಬಿಬಿಎಂಪಿಯು ಶಾಸಕರ ಪಾಲಿಗೆ ಹಾಲು ಕರೆಯುವ ಸೀಮೆಹಸು ಇದ್ದಂತೆ. ಅಲ್ಲಿ ಚುನಾಯಿತ ಸದಸ್ಯರಿದ್ದರೆ, ಶಾಸಕರಿಗೆ ಸಿಗುವುದು ಅತ್ಯಲ್ಪ ಕಪ್ಪ. ಹೀಗಾಗಿ, ಬಿಬಿಎಂಪಿ ಚುನಾವಣೆಗೆ ಎಲ್ಲರದ್ದೂ ಸಾರ್ವಕಾಲಿಕ, ಸಾರ್ವತ್ರಿಕ ವಿರೋಧ.

ಅಧಿಕಾರ ವಿಕೇಂದ್ರೀಕರಣಕ್ಕೆ ಬಲಿಷ್ಠ ಚೌಕಟ್ಟು ಹಾಕಿಕೊಟ್ಟ ಭವ್ಯ ಪರಂಪರೆಯನ್ನು ಕರ್ನಾಟಕ ಹೊಂದಿದೆ. ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್ ಅವರ ದೂರದೃಷ್ಟಿಯಿಂದಾಗಿ ಈ ಕನಸು ಮೊಳೆತಿತ್ತು. 1987ರಲ್ಲಿ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿಗಳಿಗೆ ಚುನಾವಣೆ ನಡೆಯಿತು. ರಾಜ್ಯಕ್ಕೆ ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿ ಇರುವಂತೆಯೇ ಜಿಲ್ಲೆಯೂ ಪರ್ಯಾಯ ಅಧಿಕಾರ ಕೇಂದ್ರವಾಗಬೇಕೆಂಬ ಸಂಕಲ್ಪಕ್ಕೆ ಸಾಂವಿಧಾನಿಕ ಶಕ್ತಿಯನ್ನು ಕಾಯ್ದೆ ನೀಡಿತ್ತು. ಪರಿಷತ್ತಿನ ಅಧ್ಯಕ್ಷರಿಗೆ ರಾಜ್ಯ ಸಚಿವ ದರ್ಜೆಯ ಸ್ಥಾನದ ಜತೆಗೆ ಪರಿಷತ್ತಿನ ಅಧಿಕಾರಿಗಳ ಕಾರ್ಯವೈಖರಿ ಕುರಿತ ರಹಸ್ಯ ವರದಿ (ಸಿ.ಆರ್) ಬರೆಯುವ ಅಧಿಕಾರವನ್ನೂ ನೀಡಲಾಗಿತ್ತು. ಪರಿಷತ್ತಿನ ಮುಖ್ಯ ಅಧಿಕಾರಿಯನ್ನು 'ಮುಖ್ಯ ಕಾರ್ಯದರ್ಶಿ' ಎಂದು ಕರೆದು, ಜಿಲ್ಲಾಧಿಕಾರಿಗೆ ಸಮನಾದ ಅಧಿಕಾರ ನೀಡಲಾಗಿತ್ತು. ಯಾರೊಬ್ಬರೂ ತಮ್ಮ ಕೆಲಸಗಳಿಗಾಗಿ ರಾಜಧಾನಿಗೆ ಬರದೆ, ಸ್ಥಳೀಯ ಹಂತದಲ್ಲೇ ಎಲ್ಲವೂ ಇತ್ಯರ್ಥವಾಗಬೇಕೆಂಬ ಸದಾಶಯ ಇದರ ಹಿಂದಿತ್ತು. ಮಂಡಲ ಪಂಚಾಯಿತಿಯ ಮುಖ್ಯಸ್ಥನನ್ನು 'ಪ್ರಧಾನ' ಎಂದು ಉಲ್ಲೇಖಿಸಿ, 'ಗ್ರಾಮ ಪ್ರಧಾನಿ'ಯಂತೆ ಬಿಂಬಿಸಲಾಗಿತ್ತು.

ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಗಳನ್ನು ತರುವ ಮೂಲಕ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಂವಿಧಾನಿಕ ಬಲ ಕೊಟ್ಟರು. ಪರಿಶಿಷ್ಟ ಜಾತಿ- ಪಂಗಡದವರಿಗಷ್ಟೇ ಸೀಮಿತವಾಗಿದ್ದ ರಾಜಕೀಯ ಮೀಸಲಾತಿಯನ್ನು ಈ ತಿದ್ದುಪಡಿಯು ಬದಲಿಸಿತು. 1996ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಿಂದ ಮಹಿಳೆಯರು, ಹಿಂದುಳಿದ ವರ್ಗದವರಿಗೂ ವಿಸ್ತರಿಸಿದ್ದರಿಂದ ರಾಜಕೀಯಕ್ಕೆ ಹೊಸ ಸ್ಪರ್ಶ ಸಿಕ್ಕಿ, ನವಪರ್ವಕ್ಕೆ ನಾಂದಿಯಾಯಿತು. ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿಯಾಗಿದ್ದಾಗ, ಮಹಿಳೆಯರಿಗೆ ಶೇಕಡ 50ರಷ್ಟು ಮೀಸಲಾತಿ ಜಾರಿ ಮಾಡುವ ಮೂಲಕ, ಮತ್ತೊಂದು ಕ್ರಾಂತಿಕಾರಕ ಹೆಜ್ಜೆ ಇಟ್ಟರು. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ 2006ರಲ್ಲಿ ಚುನಾವಣೆ ನಡೆಯಬೇಕಿತ್ತು. ಆಗ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯನ್ನು ಹೆಚ್ಚಿಸಲು ಮುಂದಾದ ಅವರು, ಬಿಬಿಎಂಪಿ ರಚಿಸಿದರು. ಆಗಲೂ ಚುನಾವಣೆ ನಡೆಯಲಿಲ್ಲ. 2008ರಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ನಾನಾ ಕಾರಣಗಳನ್ನು ಮುಂದೊಡ್ಡಿ ಚುನಾವಣೆ ಮುಂದೂಡಲು ಯತ್ನಿಸಿತು. ಕೋರ್ಟ್ ತರಾಟೆ ಕೊಟ್ಟ ಬಳಿಕ 2010ರಲ್ಲಿ ಚುನಾವಣೆ ನಡೆಯಿತು.

ಬಳಿಕ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಚುನಾವಣೆ ನಡೆಸದೇ ಇದ್ದುದನ್ನು ಪ್ರಶ್ನಿಸಿ ಕೆಲವರು ಕೋರ್ಟ್ ಮೊರೆ ಹೋದರು. ಚುನಾವಣೆಯಿಂದ ತಪ್ಪಿಸಿಕೊಳ್ಳಲು ಮುಂದಾದ ಸರ್ಕಾರ, ಬಿಬಿಎಂಪಿಯನ್ನು ಪಾಲಿಕೆಗಳಾಗಿ ವಿಭಜಿಸುವ ಉದ್ದೇಶದಿಂದ ಕಾಯ್ದೆಗೆ ತಿದ್ದುಪಡಿ ತರಲು ಮಸೂದೆಯ ಅಂಗೀಕಾರಕ್ಕೆ ವಿಶೇಷ ಅಧಿವೇಶನ ನಡೆಸಿತು. ಈ ಮಸೂದೆಗೆ ರಾಜ್ಯಪಾಲರು ಅನುಮೋದನೆ ನೀಡಲಿಲ್ಲ. ಮೂರು ದಿನಗಳ ಅಂತರದಲ್ಲಿ ಮತ್ತೆ ಅಧಿವೇಶನ ಕರೆದು ಮಸೂದೆಗೆ ಅಂಗೀಕಾರ ಪಡೆಯಿತು. ಅದನ್ನು ಮುಂದಿಟ್ಟು ಕೋರ್ಟ್ ಮೊರೆ ಹೋದರೂ, ಚುನಾವಣೆ ನಡೆಸಲೇಬೇಕು ಎಂದು ಕೋರ್ಟ್ ತಾಕೀತು ಮಾಡಿತು. ಹೀಗಾಗಿ, 2015ರಲ್ಲಿ ಚುನಾವಣೆ ನಡೆಯಿತು.

ಚುನಾಯಿತ ಬಿಬಿಎಂಪಿ ಕೌನ್ಸಿಲ್ ಅವಧಿ 2020ಕ್ಕೆ ಮುಗಿದಾಗ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿತ್ತು. ಬಳಿಕ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದರು. ಈ ಹೊತ್ತಿನೊಳಗೆ, ಚುನಾವಣೆ ನಡೆಸಲು ವಿಳಂಬ ಮಾಡುತ್ತಿರುವ ಬಗ್ಗೆ ಕೆಲವರು ಕೋರ್ಟ್ ಮೊರೆ ಹೋದರು. ಕಾರಣ ಬದಿಗಿಟ್ಟು ಚುನಾವಣೆ ನಡೆಸಿ ಎಂದು ಕೋರ್ಟ್ ಕಟ್ಟಾಜ್ಞೆ ಮಾಡಿತು. ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್,



ರಾಜಧಾನಿಯ ಪ್ರಮುಖರ ಸಭೆ ನಡೆಸಿದರು. 'ಚುನಾವಣೆ ವಿರೋಧಿಸುವವರು ಪಕ್ಷದ್ರೋಹಿಗಳು. ಎಲ್ಲರೂ ಸೇರಿ ಚುನಾವಣೆಗೆ ತಯಾರಾಗಬೇಕು' ಎಂದು ಸೂಚನೆ ಕೊಟ್ಟರು. ಆಗ ಕೆಲವು ಪ್ರಭಾವಿ ಸಚಿವರು ತಮ್ಮ ಹಿಂಬಾಲಕರ ಮೂಲಕ ಮತ್ತೆ ಕೋರ್ಟ್‌ನಲ್ಲಿ ಆಕ್ಷೇಪ ಸಲ್ಲಿಸಿದರು. ಅದಕ್ಕೆ ಪೂರಕವೆಂಬಂತೆ ಸರ್ಕಾರವು ವಾರ್ಡ್ ಮರುವಿಂಗಡಣೆಯ ನೆಪದಲ್ಲಿ ಸಮಿತಿ ರಚಿಸಿ ಒಂದೂವರೆ ವರ್ಷ ಕಾಲಹರಣ ಮಾಡಿತು. 198ರಷ್ಟಿದ್ದ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಏರಿಸುವಂತೆ ಸಮಿತಿ ಶಿಫಾರಸು ಮಾಡಿತು. ಇದನ್ನೇ ಕೋರ್ಟ್ ಮುಂದಿಟ್ಟು ಕಾಲಾವಕಾಶ ಪಡೆಯುವ ಕಸರತ್ತು ನಡೆಯಿತು.

ಈ ಪ್ರಕ್ರಿಯೆ ಬೆನ್ನಲ್ಲೇ, ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಿಂದೆ ಮಾಡಿದ್ದ ವಾರ್ಡ್ ವಿಂಗಡಣೆಯನ್ನು ರದ್ದುಪಡಿಸಿ, ಹೊಸದಾಗಿ 225 ವಾರ್ಡ್‌ಗಳನ್ನು ಮಾಡಲು ನಿರ್ಧರಿಸಿತು. ಏತನ್ಮಧ್ಯೆ, ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್, ಗ್ರೇಟರ್ ಬೆಂಗಳೂರು ರಚನೆ ಹಾಗೂ ಬಿಬಿಎಂಪಿಯನ್ನು ಮೂರಕ್ಕೂ ಹೆಚ್ಚು ಪಾಲಿಕೆಗಳಾಗಿ ವಿಭಜಿಸುವ ಪ್ರಕ್ರಿಯೆ ಆರಂಭಿಸಿದರು. ಚುನಾವಣೆಗೆ ಮಾತ್ರ ಗಳಿಗೆ ಕೂಡಿಬರಲೇ ಇಲ್ಲ.

ಅತ್ತ ಜಿಲ್ಲೆ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರ ಅವಧಿ ಪೂರ್ಣಗೊಳ್ಳುವ ಮೊದಲೇ ಚುನಾವಣೆ ನಡೆಸಲು ಚುನಾವಣಾ ಆಯೋಗವು ಪ್ರಕ್ರಿಯೆ ಶುರು ಮಾಡಿತ್ತು. ಆಗ ಅಧಿಕಾರದಲ್ಲಿದ್ದ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ಚುನಾವಣಾ ಆಯೋಗದಿಂದ ಕಿತ್ತುಕೊಂಡು ಹೊಸ ಆಟ ಆಡಿತು. ಅದಕ್ಕಾಗಿ, ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತಂದು 'ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ' ರಚಿಸಿತು. ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆ ನಿಗದಿಪಡಿಸಲು ರಚನೆಯಾಗಿದ್ದ ಆಯೋಗದ ಶಿಫಾರಸುಗಳನ್ನು ಅಂಗೀಕರಿಸಿದ್ದ ಈಗಿನ ಕಾಂಗ್ರೆಸ್ ನೇತೃತ್ವದ ಸರ್ಕಾರವು ಈ ಕುರಿತ ಅಧಿಸೂಚನೆಯನ್ನೇನೋ ಹೊರಡಿಸಿದೆ. ಮೀಸಲಾತಿ ಗೊಂದಲ ಮುಂದುವರಿದಿದೆ.

31 ಜಿಲ್ಲಾ ಪಂಚಾಯಿತಿಗಳಲ್ಲಿನ 1,116 ಹಾಗೂ 233 ತಾಲ್ಲೂಕು ಪಂಚಾಯಿತಿಗಳಲ್ಲಿನ 3,621 ಸದಸ್ಯರನ್ನು ಅಧಿಕಾರದಿಂದ ವಂಚಿತರನ್ನಾಗಿಸಲಾಗಿದೆ. ಪಾಲಿಕೆಗಳ ಕತೆಯೂ ಹಾಗೆಯೇ ಇದೆ. ಮೀಸಲಾತಿ, ಸಂವಿಧಾನದ ಬಗ್ಗೆ ಮಾತನಾಡುವವರು ಚುನಾವಣೆ ನಡೆಸದೇ, ಇಷ್ಟೊಂದು ಸಂಖ್ಯೆಯ ಜನಪ್ರತಿನಿಧಿಗಳು ಅಧಿಕಾರದ ಹತ್ತಿರ ಸುಳಿಯದಂತೆ ನೋಡಿಕೊಂಡಿದ್ದಾರೆ. ಸ್ಥಳೀಯ ಸಂಸ್ಥೆಗಳನ್ನೇ ಮೆಟ್ಟಿಲು ಮಾಡಿಕೊಂಡು ವಿಧಾನಸಭೆ ಪ್ರವೇಶಿಸಿದವರ ದೊಡ್ಡ ಪರಂಪರೆಯೇ ಇದೆ. ಆದರೂ ತಮಗೆ ಅಧಿಕಾರ ಸಿಕ್ಕ ಬಳಿಕ ಆ ಏಣಿಯನ್ನೇ ಮುರಿಯುವುದು ಪ್ರಜಾತಂತ್ರಕ್ಕೆ ಬಗೆಯುವ ದ್ರೋಹ. ವಿಧಾನಸಭೆ, ವಿಧಾನಪರಿಷತ್ ಅಥವಾ ಲೋಕಸಭಾ ಕ್ಷೇತ್ರಗಳ ಚುನಾಯಿತ ಸದಸ್ಯರ ಸ್ಥಾನಗಳು ತೆರವಾದರೆ ನಿಗದಿತ ಅವಧಿಗೆ ಚುನಾವಣೆ ನಡೆಸುವ ಸ್ವಾತಂತ್ರ್ಯವನ್ನು ಕೇಂದ್ರ ಚುನಾವಣಾ ಆಯೋಗ ಹೊಂದಿದೆ. ಅದೇ ಮಾದರಿಯ ಸ್ವಾಯತ್ತತೆಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ನೀಡುವುದೊಂದೇ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ತಡೆಗೆ ಪರಿಹಾರ ಆಗಬಲ್ಲದು.

ಚುರುಮುರಿ



ಮುಪ್ಪಿಲ್ಲದವರು!

• ಸುಮಂಗಲಾ

'ಅಲ್ಲಾ... ಮನುಸ್ಯಾರಿಗೆ, ಪ್ರಾಣಿಗಳಿಗೆ ಮಾತ್ರ ವಯಸ್ಸಾಗತೈತಿ ಅಂತ ನಾ ಅಂದುಕಂಡಿದ್ದೆ. ನೋಡಿಲ್ಲಿ... ಬಸ್ಸುಗಳಿಗೂ ವಯಸ್ಸಾಗತೈತಿ!' ಬೆಕ್ಕಣ್ಣ ಪೇಪರಿನಲ್ಲಿ ಸುದ್ದಿ ಓದುತ್ತ ವದರಿತು.

'ಅಂದ್ರ ಅವೂ ಮುದಿಯಾಗತಾವೇನು!' ನಂಬಿಕೆಯೇ ಬರದಂತೆ ಉದ್ಗರಿಸಿತು.

'ಹ್ಞೂಂ ಮತ್ತ, ಹದಿನೈದು ಇಪ್ಪತ್ತು ವರ್ಷ ಆದಮ್ಯಾಗೆ ಎಲ್ಲಾ ವಾಹನಗಳಿಗೂ ವಯಸ್ಸಾಗತೈತಿ, ಮುಪ್ಪು ಬರತೈತಿ' ಎಂದೆ.

'25 ಪರ್ಸೆಂಟ್ ಬಿಎಂಟಿಸಿ ಬಸ್ಸುಗಳಿಗೆ ವಯಸ್ಸಾಗೈತಿ, ಅವುಗಳ ಪ್ರೊಡಕ್ಟಿವಿಟಿ ಕಮ್ಮಿ ಆಗ್ಯೆತಂತ ಸಿಎಜಿ ವರದಿ ಹೇಳ್ಯೆತಿ. ಅವು ದಿನಕ್ಕೆ ಸರಾಸರಿ 206 ಕಿ.ಮೀ. ಓಡಬೇಕಂತೆ, ಆದ್ರ ಈಗ ಸರಾಸರಿ 80- 147 ಕಿ.ಮೀ. ಓಡೋದಕ್ಕೇ ಏದುಬ್ಬಸ ಬಿಡ್ತಾವಂತೆ' ಬೆಕ್ಕಣ್ಣ ವಿವರಿಸಿತು.

'ಅದಕ್ಕೇ ಮತ್ತ ಬಿಎಂಟಿಸಿ ಯಾವಾಗಲೂ ನಷ್ಟದಲ್ಲೇ ನಡೀತೈತೆ'.

'ಈಗ ವೈದ್ಯಕೀಯ ಸೌಲಭ್ಯ ಛಲೋ ಐತಿ ಅಂತ ಮನುಸ್ಯಾರ ಸರಾಸರಿ ಆಯುಷ್ಯ ಹೆಚ್ಚಾಗೈತಲ್ಲ, ಹಂಗೇ ಈ ಬಸ್ಸುಗಳ ನಿರ್ವಹಣೆ ಛಲೋತ್ನಾಗಿ ಮಾಡಿ, ಆಯುಷ್ಯ ಇನ್ನೂ ವೃದ್ಧಿಸಬೇಕು' ಬೆಕ್ಕಣ್ಣ ತನ್ನ ಸಲಹೆ ಮುಂದಿಟ್ಟಿತು.

'ನಿಗಮದೊಳಗಿರೋ ನುಂಗಣ್ಣಗಳು ನಿರ್ವಹಣೆ ಹೆಸರಲ್ಲೂ ಗೋಟಾಳೆ ಮಾಡತಾರೆ! ಪಾಪ, ನಮ್ ಬಸ್ಸುಗಳು ವಯಸ್ಸಾಗಿದ್ದರೂ ಹೆಂಗೆ ರಸ್ತೆ ಮ್ಯಾಗೆ ಓಡತಾವೆ ನೋಡು'.

'ಮುಪ್ಪಿನ ಮುದುಕರಾದರೂ ಜನರ ಸೇವೆ ಮಾಡೋ ರಾಜಕಾರಣಿಗಳೇ ಈ ಬಸ್ಸುಗಳಿಗೆ ರೋಲ್ ಮಾಡೆಲ್. ನಮ್ಮ ಪಾರ್ಲಿಮಂಟಿನಾಗೆ 52 ಎಂಪಿಗಳು 71 ವರ್ಷದ ಮೇಲಿನವರು' ಬೆಕ್ಕಣ್ಣ ಉದ್ಗರಿಸಿತು.

'ರಾಜಕಾರಣಿಗಳಿಗೆ ವಯಸ್ಸು ಒಂದು ಸಂಖ್ಯೆ ಅಷ್ಟೆ, ಅವ್ರು ಎಂದೂ ಮುದುಕರಾಗಲ್ಲ! ನೋಡು, ಕ್ಯಾಮರೂನಿನ ಅಧ್ಯಕ್ಷರಿಗೆ 91 ವರ್ಷ ಅಂತೆ. ಅಮೆರಿಕದ ಅಧ್ಯಕ್ಷ ಬೈಡನ್ನರಿಗೆ 82' ಎನ್ನುತ್ತ ಅಧಿಕಾರದಲ್ಲಿರುವ ವಿಶ್ವದ ಹತ್ತು ಹಿರಿಯ ರಾಜಕಾರಣಿಗಳ ಪಟ್ಟಿ ತೋರಿಸಿದೆ. ಅದನ್ನು ನೋಡಿದ ಬೆಕ್ಕಣ್ಣ 'ಆಹಾ... 74 ವರ್ಷದ ನಮ್ ಮೋದಿಮಾಮಾರೂ ಈ ಪಟ್ಟಿವಳಗೆ ಅದಾರೆ' ಎಂದು ಖುಷಿಯಿಂದ ಕೇಕೆ ಹಾಕಿತು.

ದಿನದ ಟ್ವೀಟ್

ಊಹಾಪೋಹ ಸಲ್ಲ



ವೈವಾಹಿಕ ಕಲಹಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಜನ ನಾನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಆದರೆ ನಿಜಜೀವನದಲ್ಲಿ ವಿಷಯವು ಬೇರೆ ಬೇರೆ ಆಯಾಮಗಳನ್ನು ಹೊಂದಿರಬಹುದು. ಹೆಂಡತಿಯನ್ನು ಹೀನಾಯವಾಗಿ ಶೋಷಿಸಿದ ನೂರಾರು ಪ್ರಕರಣಗಳನ್ನು ಕಂಡಿದ್ದೇನೆ. ಮಹಿಳೆಯರ ಪರವಾದ ಕಾನೂನುಗಳು ಇಲ್ಲಿ ನೆರವಿಗೆ ಬಂದಿರುವುದಿಲ್ಲ. ಹಾಗೆಯೇ ಇದೇ ಕಾನೂನುಗಳನ್ನು ಹೆಂಡತಿಯರು ದುರ್ಬಳಕೆ ಮಾಡಿಕೊಂಡಿರುವ ಬಹಳಷ್ಟು ಪ್ರಕರಣಗಳಿವೆ... ಒಂದೊಂದೂ ಭಿನ್ನ. ಅನೇಕ ಪ್ರಕರಣಗಳಲ್ಲಿ ಎರಡೂ ಕಡೆ ಸಮಸ್ಯೆ ಇರುತ್ತದೆ. ಹಾಗಾಗಿ, ಒಂದು ಕಡೆಯ ವಿವರಣೆಯನ್ನಷ್ಟೇ ಆಧರಿಸಿ ನಿಲುವು ತಳೆಯಬಾರದು...

ಅರುಣ್ ಬೋತ್ರಾ, ಐಪಿಎಸ್ ಅಧಿಕಾರಿ

ಕಿಡಿನುಡಿ



ಜನರ ನುಡಿಯಲ್ಲಿ ಆಡಳಿತ ಮತ್ತು ಗ್ರಾಹಕ ಸೇವೆ ನೀಡಬೇಕೆಂಬ ಮಾನವೀಯ ಮನಸ್ಸು ಬ್ರಿಟಿಷರಿಗೆ ಕೂಡ ಇತ್ತು. ಕರ್ನಾಟಕದಲ್ಲಿ ಮಾರಾಟವಾಗುವ ವಸ್ತುಗಳ ಮೇಲೆ ಅಗತ್ಯವಾಗಿ ಕನ್ನಡದಲ್ಲಿ ವಿವರ ಇರಬೇಕೆಂಬ ಕಟ್ಟುನಿಟ್ಟಾದ ಕಾನೂನು ತನ್ನಿ. ದುರಂತಗಳನ್ನು ತಪ್ಪಿಸಿ.

(ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವ್ಯಕ್ತಿಯೊಬ್ಬರು ಟಾನಿಕ್ ಎಂದು ಬಗೆದು ಕ್ರಿಮಿನಾಶಕ ಸೇವಿಸಿ ಮೃತಪಟ್ಟಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ಕಿರಣ್ ಕೊಡ್ಲಾಡಿ

25 ವರ್ಷಗಳ ಹಿಂದೆ

ಗುರುವಾರ, 16-12-1999

• ಪಂಚಾಯತ್ ವ್ಯವಸ್ಥೆ: ಸಂವಿಧಾನ ತಿದ್ದುಪಡಿಗೆ ಕೇಂದ್ರ ಸಂಪುಟ ಅಸ್ತು

ನವದೆಹಲಿ, ಡಿ. 15 (ಪಿಟಿಐ)– ಸದ್ಯ ಅಸ್ತಿತ್ವದಲ್ಲಿ ಇರುವ ಐದು ಹಂತದ ಪಂಚಾಯತ್ ವ್ಯವಸ್ಥೆಯಿಂದ ಮೂರು ಹಂತದ ವ್ಯವಸ್ಥೆಗೆ ಮರಳಲು ರಾಜ್ಯಗಳಿಗೆ ಅವಕಾಶ ಮಾಡಿಕೊಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ಕೇಂದ್ರ ಸಚಿವ ಸಂಪುಟ ಇಂದು ತನ್ನ ಒಪ್ಪಿಗೆ ನೀಡಿತು.

ಪ್ರಧಾನಿ ವಾಜಪೇಯಿ ಅವರು ಸಂಪುಟ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಈ ಸಂಬಂಧ ಅಗತ್ಯ ಕಾನೂನು ಜಾರಿಗೆ ತರಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

• ಮೈಸೂರು ಅರಮನೆಗೆ ಬಕಿಂಗ್‌ಹ್ಯಾಂ 'ಸ್ಪರ್ಶ'

ಬೆಂಗಳೂರು, ಡಿ. 15– ಬ್ರಿಟನ್ನಿನ ಬಕಿಂಗ್‌ಹ್ಯಾಂ ಅರಮನೆಯನ್ನು ನಿರ್ವಹಿಸುತ್ತಿರುವ ಟ್ರಸ್ಟ್ ಮಾದರಿಯಲ್ಲಿ ಟ್ರಸ್ಟ್ ಒಂದನ್ನು ರಚಿಸಿ, ಅದರ ಮುಖಾಂತರ ವಿಶ್ವವಿಖ್ಯಾತ ಮೈಸೂರು ಅರಮನೆಯ ನಿರ್ವಹಣೆ ಮಾಡಲು ಸರ್ಕಾರ ಆಲೋಚಿಸುತ್ತಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಡಿ.ಬಿ.ಚಂದ್ರೇಗೌಡ ಅವರು ಇಂದು ಇಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 16-12-1974

• ಪಠ್ಯಕ್ರಮ, ಪರೀಕ್ಷಾ ಪದ್ಧತಿ ಅಶಾಂತಿಗೆ ಪೂರಕ

ನವದೆಹಲಿ, ಡಿ. 15– ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಒಳ್ಳೆಯ ಸಾಮಾಜಿಕ ಜೀವನದ ಕೊರತೆ, ವಿಶ್ವವಿದ್ಯಾಲಯ ಪಠ್ಯಕ್ರಮದಲ್ಲಿ ಬಳಕೆ ತಪ್ಪಿರುವ ವಿಷಯಗಳು, ಈಗಿನ ಪರೀಕ್ಷಾ ಪದ್ಧತಿ ವಿದ್ಯಾರ್ಥಿಗಳ ಅಶಾಂತಿಗೆ ಸಾಕಷ್ಟು ಕಾಣಿಕೆ ಸಲ್ಲಿಸುತ್ತಿವೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ನಡೆಸಿರುವ ವಿಶ್ಲೇಷಣೆ ಈ ಅಂಶಗಳನ್ನು ತಿಳಿಸಿದೆ.

ಮೂಡುತ್ತಿರುವ ಸಮಸ್ಯೆಗಳು ಮತ್ತು ಭಾರತದಲ್ಲಿ ಉನ್ನತ ಶಿಕ್ಷಣದ ಸ್ಥಿತಿಗತಿ ಕುರಿತು 1972– 73ನೇ ಸಾಲಿನ ಧನ ಸಹಾಯ ಆಯೋಗ ವಿಶ್ಲೇಷಣೆ ನಡೆಸಿದೆ. ಪಾಠಪ್ರವಚನಗಳ ವಿಷಯಕ್ಕೆ ಸಂಬಂಧಿಸದ ವಿಷಯಗಳ ಬಗ್ಗೆ ವಿದ್ಯಾರ್ಥಿ ಸಮುದಾಯ ಕೊಂಚ ಕಾಲ ನಿಶ್ಚಿಂತೆಯಿಂದ ಇತ್ತು. ಕೊರತೆ ಮತ್ತು ನಿರುದ್ಯೋಗ ಅಶಾಂತಿಗೆ ಕಾರಣವಾದವು. ಅದು ವಿದ್ಯಾಭ್ಯಾಸ ಜೀವನಕ್ಕೂ ವ್ಯಾಪಿಸಿತು.

• ಕಲಬೆರಕೆ ಎಷ್ಟು?!

ಬೆಂಗಳೂರು, ಡಿ. 15– ಉದ್ಘಾಟನೆಯ ಸಂಕೇತ ಜ್ಯೋತಿ ಬೆಳಗುವುದು. ಸಚಿವ ಎಸ್.ಎಂ.ಕೃಷ್ಣರವರು ಸಮಾರಂಭಗಳ ಉದ್ಘಾಟನೆಗೆ ಎಷ್ಟೋ ದೀಪ ಹಚ್ಚಿದ್ದಾರೆ. ಇಂದೂ ಬೆಂಕಿಕಡ್ಡಿ ಗೀರಿದರು. ಮೊದಲ ಬಾರಿಗೆ ಹತ್ತಲಿಲ್ಲ. ಹತ್ತಿದ ನಂತರ ಒಂದು ಬಾರಿ ಆರಿತು, ಮತ್ತೆ ಹಚ್ಚಿಸಿದರು.

ಎಣ್ಣೆ ಮತ್ತು ಬೆಂಕಿಕಡ್ಡಿ ಎರಡೂ 'ಕಲಬೆರಕೆಯಾಗಿರಬೇಕು' ಸಚಿವರೇ ವಿನೋದವಾಗಿ ಹೇಳಿದರು.

ಸಚಿವರು ಉದ್ಘಾಟಿಸಿದ್ದು ಅಖಿಲ ಭಾರತ ಬಳಕೆದಾರರ ಸಮ್ಮೇಳನ. ಸಮ್ಮೇಳನದಲ್ಲಿ ವಿಶೇಷವಾಗಿ ಪ್ರಸ್ತಾಪಿಸಿದ ವಿಷಯಗಳಲ್ಲಿ ಕಲಬೆರಕೆ ವಿಷಯವೂ ಒಂದು.

ಸಂಗತ

ಹಕ್ಕು ರಕ್ಷಣೆ: ಬೇಕಾಗಿದೆ ಬದ್ಧತೆ

ತಮ್ಮ ಹಕ್ಕುಗಳನ್ನು ಅನುಭವಿಸಲು ಕಷ್ಟಪಡಬೇಕಾದ ಸಮುದಾಯಗಳನ್ನು ರಕ್ಷಿಸುವ ಹೊಣೆ ಸರ್ಕಾರಗಳು ಹಾಗೂ ಸಮಾಜಮುಖಿ ಸಂಸ್ಥೆಗಳ ಮೇಲೆ ಇರುತ್ತದೆ

• ಎಂ. ಅಬ್ದುಲ್ ರೆಹಮಾನ್ ಪಾಷ

ಭಾರತವು ಹಲವಾರು ಧರ್ಮ, ಜಾತಿ, ಮತ, ಬುಡಕಟ್ಟು, ಸಂಸ್ಕೃತಿ, ಭಾಷೆಗಳ ಜನ ತಲೆತಲಾಂತರಗಳಿಂದ ಒಟ್ಟಿಗೇ ಬದುಕುತ್ತಿರುವ ಒಂದು ದೇಶ. 1947ರಲ್ಲಿ ಸ್ವಾತಂತ್ರ್ಯ ಪಡೆದ ದೇಶದಲ್ಲಿ, ಹಿಂದಿನಿಂದ ನಡೆದುಬಂದಿದ್ದ ಸತಿಪದ್ಧತಿಯಿಂದ ಹಿಡಿದು ಅಸ್ಪೃಶ್ಯತೆವರೆಗಿನ ಹಲವಾರು ಕ್ರೂರ ಆಚರಣೆಗಳನ್ನು ತೊಡೆದು ಹಾಕಬೇಕಾಗಿತ್ತು. ಅದಕ್ಕಾಗಿ ಭಾರತ ಸಂವಿಧಾನವು ಮೊದಲಿಗೆ ಮಾಡಿದ್ದು ಧರ್ಮ, ಜಾತಿ, ಲಿಂಗ, ವರ್ಗ, ಪ್ರದೇಶ, ಭಾಷೆ ಇವು ಯಾವುದರ ಆಧಾರದ ಮೇಲೆಯೂ ತಾರತಮ್ಯವನ್ನು ಮಾಡದೆ ದೇಶದ ಎಲ್ಲ ನಾಗರಿಕರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ ಸ್ವಾತಂತ್ರ್ಯ ಹಾಗೂ ಸ್ಥಾನಮಾನಗಳ ಸಮಾನತೆಯನ್ನು ಘೋಷಿಸಿದ್ದು.

ಮಾನವ ಹಕ್ಕುಗಳು ಮಾನವರಿಗೆ ಹುಟ್ಟಿನಿಂದಲೇ ಪ್ರಕೃತಿದತ್ತವಾಗಿ ದೊರಕಿರುತ್ತವೆ. ಆದರೆ, ಕೆಲವು ಶಕ್ತಿಗಳು ಕೆಲವರ ಮಾನವಹಕ್ಕುಗಳನ್ನು ಕಸಿಯಬಹುದು, ಅವರನ್ನು ಅಮಾನವೀಯವಾಗಿ ಶೋಷಿಸಬಹುದು. ಆದರೆ ಸಂವಿಧಾನದ ಪ್ರಕಾರ ರಚಿತವಾದ ಸರ್ಕಾರಗಳು ಈ ಹಕ್ಕುಗಳನ್ನು ಸಂರಕ್ಷಿಸಬೇಕು. ಆದರೆ ನೂರಾರು ವರ್ಷಗಳಿಂದ ಐತಿಹಾಸಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ದಮನಕ್ಕೆ ಒಳಗಾಗಿ, ನಂತರ ವಿಮೋಚನೆ ಹೊಂದಿರುವ ಕೆಲವು ಸಮುದಾಯಗಳು ಹಾಗೂ ಸಮಾಜಗಳು ತಮ್ಮ ಹಕ್ಕುಗಳನ್ನು ಅನುಭವಿಸಲು ಕಷ್ಟಪಡಬೇಕಾಗಿದೆ. ಹೀಗಾಗಿ, ಇಂಥ ಕೆಲವು ದುರ್ಬಲ ವರ್ಗಗಳನ್ನು ರಕ್ಷಿಸುವ ಕೆಲಸವನ್ನು ಸರ್ಕಾರಗಳು, ಸಮಾಜಮುಖಿ ಸಂಸ್ಥೆಗಳು ಮಾಡಬೇಕಾಗುತ್ತದೆ.

ಜಾಗತಿಕ ಮಟ್ಟದಲ್ಲಿ ವಿಶ್ವಸಂಸ್ಥೆಯು ಅಲ್ಪಸಂಖ್ಯಾತರ ಹಕ್ಕುಗಳನ್ನು ಸಂರಕ್ಷಿಸುವ ಅಗತ್ಯವನ್ನು ಗುರುತಿಸಿತು. ಅದನ್ನು ಅನುಸರಿಸಿ 1992ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ರಾಷ್ಟ್ರೀಯ ಅಥವಾ ಜನಾಂಗೀಯ, ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರ ಹಕ್ಕುಗಳ ಕುರಿತ ಘೋಷಣೆಯನ್ನು ಅಂಗೀಕರಿಸಿತು. ಇದು ಎಲ್ಲಾ ಬಗೆಯ ಅಲ್ಪಸಂಖ್ಯಾತರಿಗೆ ಸುನಿಶ್ಚಿತಗೊಳಿಸಬೇಕಾದ ಮೂಲಭೂತ ಹಕ್ಕುಗಳನ್ನು ನಿರೂಪಿಸಿತು. ಇದರ ನೆನಪಿಗಾಗಿ ಡಿಸೆಂಬರ್ 18 ಅನ್ನು ಅಲ್ಪಸಂಖ್ಯಾತರ ಹಕ್ಕುಗಳ ದಿನವನ್ನಾಗಿ ಘೋಷಿಸಲಾಯಿತು. ಭಾರತವು 2013ರಿಂದ ಈ ದಿನವನ್ನು ಆಚರಿಸುತ್ತಿದೆ.

ದೇಶದಲ್ಲಿ ಮುಸ್ಲಿಮರು, ಕ್ರೈಸ್ತರು, ಬೌದ್ಧರು, ಸಿಖ್ಖರು, ಜೈನರು ಮತ್ತು ಪಾರ್ಸಿಗಳನ್ನು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳು ಎಂದು ಪರಿಗಣಿಸಲಾಗಿದೆ. ಕರ್ನಾಟಕದಲ್ಲಿಯೂ ಈ ಸಮುದಾಯಗಳು ಬೇರೆ ಬೇರೆ ಪ್ರಮಾಣದಲ್ಲಿ ಇವೆ. ಈ ಬಾರಿಯ ದಿನಾಚರಣೆಯ ಘೋಷವಾಕ್ಯ 'ವೈವಿಧ್ಯಕ್ಕೆ ಉತ್ತೇಜನ, ಹಕ್ಕುಗಳ ರಕ್ಷಣೆ'. ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಭಾರತದಲ್ಲಿ ಅಲ್ಪಸಂಖ್ಯಾತ ಸಮುದಾಯಗಳು ಎದುರಿಸುತ್ತಿರುವ ಸವಾಲುಗಳ ಕುರಿತು ಜನಜಾಗೃತಿ ಮೂಡಿಸುವುದು, ಅಲ್ಪಸಂಖ್ಯಾತ ಸಮೂಹಗಳ ವಿಶಿಷ್ಟ ಅಗತ್ಯಗಳು, ಕಾಳಜಿಗಳನ್ನು ಒಳಗೊಳ್ಳುವಂಥ ಕಾರ್ಯನೀತಿಗಳನ್ನು ರೂಪಿಸುವುದು, ದೇಶದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಅಲ್ಪಸಂಖ್ಯಾತ ಸಮುದಾಯವನ್ನು ಸಬಲೀಕರಿಸುವುದು, ಅಂಥ ಸಮುದಾಯದ ವಿರುದ್ಧ ತೋರಲಾಗುವ ತಾರತಮ್ಯದ ವಿರುದ್ಧ ಹೋರಾಡುವುದು, ಶಿಕ್ಷಣ, ಉದ್ಯೋಗ ಹಾಗೂ ಇತರ ವಲಯಗಳಲ್ಲಿ ಅವರಿಗೆ ಸೂಕ್ತ ಅವಕಾಶಗಳನ್ನು ಖಚಿತಪಡಿಸಿಕೊಳ್ಳುವುದು, ಎಲ್ಲಾ ನಾಗರಿಕರಲ್ಲಿ ಸೌಹಾರ್ದವನ್ನು ಬಲಪಡಿಸುವುದು– ಇವು ಅಲ್ಪಸಂಖ್ಯಾತರ ಹಕ್ಕುಗಳ ದಿನದ ಉದ್ದೇಶಗಳಾಗಿವೆ.



ಅಲ್ಪಸಂಖ್ಯಾತರ ಮಾನವಹಕ್ಕುಗಳನ್ನು ಖಾತರಿಗೊಳಿಸುವ ಸಲುವಾಗಿ ಹಲವಾರು ವಿಶಿಷ್ಟ ಕಾಯ್ದೆಗಳು ಮತ್ತು ನಿಯಮಾವಳಿಗಳನ್ನು ಜಾರಿಗೊಳಿಸಲಾಗಿದೆ. ಅವುಗಳ ಅನುಷ್ಠಾನಕ್ಕಾಗಿ ಹಲವು ಹಂತಗಳ ಅಧಿಕೃತ ವ್ಯವಸ್ಥೆ ಇದೆ. ಕೇಂದ್ರದಲ್ಲಿ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವನ್ನು ಸ್ಥಾಪಿಸಲಾಗಿದೆ. ಇದೇ ಮಾದರಿಯಲ್ಲಿ ರಾಜ್ಯದಲ್ಲಿ ಈ ಮೊದಲು ಇದ್ದ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಪ್ರತ್ಯೇಕಿಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಲಾಗಿದೆ. ಜೊತೆಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವೂ ಕಾರ್ಯನಿರತವಾಗಿದೆ. ಇವೆರಡೂ ರಾಜ್ಯದ ಅಲ್ಪಸಂಖ್ಯಾತ ಸಮುದಾಯಗಳ ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ ಅಭಿವೃದ್ಧಿಗಾಗಿ ವಿಶಿಷ್ಟ ಯೋಜನೆಗಳನ್ನು ರೂಪಿಸಿ ಜಾರಿಗೆ ತರುತ್ತವೆ.

ಇವೆಲ್ಲವೂ ಸರ್ಕಾರಿ ಸಂಸ್ಥೆಗಳು. ಅವುಗಳ ಕಾರ್ಯಕ್ಷೇತ್ರ ತುಂಬಾ ವಿಶಾಲವಾದದ್ದು. ಕೆಲವೊಮ್ಮೆ ಇಲಾಖೆ, ನಿಗಮಗಳು ಸಕ್ರಿಯವಾಗಿದ್ದರೂ ಸರ್ಕಾರಗಳ ವತಿಯಿಂದ ಅಪೇಕ್ಷಿತ ನೈತಿಕ ಮತ್ತು ಆರ್ಥಿಕ ಬೆಂಬಲ ಸಿಗದೇ ಇರಬಹುದು. ಇದರಿಂದಾಗಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಸಿಗಬೇಕಾದ ಹಕ್ಕುಗಳು ಸಿಗದೇ ಹೋಗುವ ಸಾಧ್ಯತೆ ಇರುತ್ತದೆ. ಇದರ ಮೇಲೆ ನಿಗಾ ಇಡಲು, ಸಾರ್ವಜನಿಕ ಜೀವನದಿಂದ ಆಯ್ದ ಪರಿಣತರು, ತಜ್ಞರು, ಗಣ್ಯರನ್ನು ಒಳಗೊಂಡ ಆಯೋಗಗಳನ್ನೂ ಸ್ಥಾಪಿಸಲಾಗಿದೆ. ಕೇಂದ್ರದಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವಿದ್ದರೆ, ಕರ್ನಾಟಕದಲ್ಲಿ ರಾಜ್ಯ ಅಲ್ಪಸಂಖ್ಯಾತರ ಆಯೋಗ ರಚಿತವಾಗಿದೆ.

ದೇಶದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳಿಗೆ ಆಗಾಗ ಚ್ಯುತಿ ಉಂಟಾಗುತ್ತಿರುವ ಇಂದಿನ ಸ್ಥಿತಿಯಲ್ಲಿ, ಅಲ್ಪಸಂಖ್ಯಾತರ ಆಯೋಗಗಳು ಹೆಚ್ಚು ಬದ್ಧತೆ ಹಾಗೂ ತತ್ಪರತೆಯಿಂದ ಕೆಲಸ ಮಾಡಬೇಕಾಗಿದೆ.

ವಾಚಕರ ವಾಣಿ

ಮಾಡುವ ಕೆಲಸ ಗೌರವಿಸೋಣ

'ರಸ್ತೆಬದಿ ಪಾನಿಪುರಿ, ಗೋಬಿ ಮಂಚೂರಿ ಮಾರುವವರು ನನಗಿಂತ ಸಂತೋಷವಾಗಿದ್ದಾರೆ. ಈ ಕೆಲಸ ಬಿಟ್ಟು ಪಾನಿಪುರಿ ಮಾರಿಕೊಂಡಿದ್ದರೆ ಹೆಚ್ಚು ನೆಮ್ಮದಿಯಿಂದ ಇರಬಹುದಿತ್ತೇನೊ ಎಂದು ಒಮ್ಮೊಮ್ಮೆ ನನಗೂ ಅನ್ನಿಸಿಬಿಡುತ್ತದೆ' ಎಂದು ಹೊಳೆನರಸೀಪುರ ತಹಶೀಲ್ದಾರ್ ಕೆ.ಕೆ.ಕೃಷ್ಣಮೂರ್ತಿ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 15). ಪಾನಿಪುರಿ ಮಾರುವ ವ್ಯಕ್ತಿಯನ್ನು ಕೇಳಿದರೆ, 'ಯಾವುದಾದರೂ ಸರ್ಕಾರಿ ಕಚೇರಿಯಲ್ಲಿ ಒಂದು ಜವಾನನ ಕೆಲಸ ಸಿಕ್ಕಿದರೂ ಸಾಕಿತ್ತು, ನೆಮ್ಮದಿಯಾಗಿ ಇರುತ್ತಿದ್ದೆ. ಈ ಕೆಲಸ ಬೇಡ' ಎನ್ನುತ್ತಾರೆ. ಪ್ರತಿ ಕೆಲಸದಲ್ಲೂ ಒತ್ತಡ, ಆತಂಕ ಇರುತ್ತದೆ. ಖಾಸಗಿ ಕ್ಷೇತ್ರದಲ್ಲಿ ಸಣ್ಣಪುಟ್ಟ ನೌಕರಿಯಲ್ಲಿ ಇರುವವರು, ತಿಂಗಳಿಗೆ ಲಕ್ಷಾಂತರ ರೂಪಾಯಿ ಪಗಾರ ಎಣಿಸುವ ಸಾಫ್ಟ್‌ವೇರ್ ಉದ್ಯೋಗಿಗಳೂ ಸರ್ಕಾರಿ ಕೆಲಸವೆಂದರೆ ಗಳಿಕೆ ಮತ್ತು ಸೇವಾಭದ್ರತೆಯ ದೃಷ್ಟಿಯಿಂದ ಒಂದು 'ಕಲ್ಪವೃಕ್ಷ' ಎಂದೇ ಭಾವಿಸುತ್ತಾರೆ. ಇದು ಮನುಷ್ಯನ 'ಇದ್ದುದನ್ನು ಬಿಟ್ಟು ಇಲ್ಲದಿರುವುದರ ಕಡೆಗೆ ಆಕರ್ಷಿತವಾಗುವ' ಒಂದು ಗುಣ. ಇದ್ದುದರಲ್ಲೇ ತೃಪ್ತಿ ಕಂಡುಕೊಂಡು, ತಾನು ಮಾಡುತ್ತಿರುವ ಕೆಲಸವನ್ನೇ ಗೌರವಿಸುತ್ತ, ಅದಕ್ಕೆ ನ್ಯಾಯ ಒದಗಿಸುತ್ತ ನಡೆಯುವುದೇ ನೆಮ್ಮದಿಯ ಜೀವನ. ಅಲ್ಲವೇ?!

ಚಾವಲ್ಮನೆ ಸುರೇಶ್ ನಾಯಕ್, ಕೊಪ್ಪ, ಚಿಕ್ಕಮಗಳೂರು

'ಲಿಂಗಾಯತ ವಿರೋಧಿ' ಹೇಳಿಕೆ ಸಲ್ಲ

'ಮುಖ್ಯಮಂತ್ರಿ ಸಿದ್ದರಾಮಯ್ಯ ಲಿಂಗಾಯತ ವಿರೋಧಿ ನಾಯಕ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆರೋಪಿಸಿರುವುದರಲ್ಲಿ (ಪ್ರ.ವಾ., ಡಿ. 12) ಹುರುಳಿಲ್ಲ. ನಾವೆಲ್ಲ ಬಲ್ಲಂತೆ ಸಿದ್ದರಾಮಯ್ಯ ಅವರು ಲಿಂಗಾಯತ ವಿರೋಧಿಯಲ್ಲ. ಲಿಂಗಾಯತರೇ ಮುಖ್ಯಮಂತ್ರಿಗಳಾಗಿದ್ದಾಗ ಬಸವಣ್ಣನನ್ನು ಕಿರುಗಣ್ಣಿನಲ್ಲೂ ನೋಡದೆ ಉಪೇಕ್ಷೆ ಮಾಡಿರುವುದಿದೆ. ಆದರೆ ಸಿದ್ದರಾಮಯ್ಯ ಅವರು ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ಮೊದಲ ಲಿಂಗಾಯತೇತರ ಮುಖ್ಯಮಂತ್ರಿ ಎನ್ನುವುದು ಸ್ವಾಮೀಜಿಗಳಿಗೆ ತಿಳಿಯದ್ದೇನೂ ಅಲ್ಲ. ಜತೆಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದು ಬಸವ ಜಯಂತಿಯಂದು ಮತ್ತು ಬಸವಣ್ಣನ ಭಾವಚಿತ್ರವನ್ನು ಅಧಿಕೃತವಾಗಿ ಸರ್ಕಾರಿ ಕಚೇರಿಗಳಲ್ಲಿ ಇರಿಸುವಂತೆ ಆದೇಶಿಸಿದ್ದು ಸಹ ಅವರೇ. ಸಮಾಜವಾದಿ ನೆಲೆಯ ಚಿಂತಕರಾಗಿರುವ ಸಿದ್ದರಾಮಯ್ಯ, ರಾಮಮನೋಹರ ಲೋಹಿಯಾ ಅವರ ಅನುಯಾಯಿ. ಪಂಚಮಸಾಲಿ ಸಮಾಜದ ಮೀಸಲಾತಿ ಬೇಡಿಕೆಗಾಗಿನ ಚಳವಳಿ ಹಾದಿ ತಪ್ಪಿದಾಗ ಅದನ್ನು ನಿಯಂತ್ರಿಸಲು ಮಾಡಿದ ಲಾಠಿಪ್ರಹಾರವನ್ನೇ ನೆಪ ಮಾಡಿಕೊಂಡು ಹೀಗೆ ವಿನಾಕಾರಣ ಹಾಗೂ ಸಾರಾಸಗಟಾಗಿ 'ಲಿಂಗಾಯತ ವಿರೋಧಿ' ಎನ್ನುವುದು ದುಡುಕಿನ ಹೇಳಿಕೆಯಾಗಿದೆ. ಲಿಂಗಾಯತ ಸಮುದಾಯ ಇದನ್ನು ಒಪ್ಪಲಾರದು. ಸ್ವಾಮೀಜಿ ಈ ಹೇಳಿಕೆಯ ಬಗ್ಗೆ ಶಾಂತಚಿತ್ತರಾಗಿ ಮರು ಚಿಂತಿಸಲಿ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ನ್ಯಾಯಪೀಠದ ಮಾದರಿ ನಡೆ

ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠವು ಇತ್ತೀಚೆಗೆ ಪ್ರಕರಣವೊಂದರ ತೀರ್ಪನ್ನು ಕನ್ನಡದಲ್ಲಿ ನೀಡುವ ಮೂಲಕ ಮುಖ್ಯವಾದ ಪರಂಪರೆಯೊಂದಕ್ಕೆ ನಾಂದಿ ಹಾಡಿದೆ. ಬಹು ಸಂಸ್ಕೃತಿಗಳ, ಬಹು ಭಾಷೆಗಳ ಒಕ್ಕೂಟವಾದ ಭಾರತಕ್ಕೆ ಇಂತಹ ಒಂದು ಅವಶ್ಯಕತೆ ಬಹಳ ಹಿಂದಿನಿಂದಲೂ ಇತ್ತು.

ಜನರ ನಾಡಿಯನ್ನು, ಅರ್ಥವಾಗದ ಭಾಷೆಯಲ್ಲಿ ಬರುತ್ತಿದ್ದ ತೀರ್ಪುಗಳಿಂದ ಅವರಿಗೆ ಆಗುತ್ತಿದ್ದ ತೊಂದರೆಯನ್ನು ಸರಿಯಾಗಿ ಅರ್ಥೈಸಿಕೊಂಡ ಈ ನ್ಯಾಯಮೂರ್ತಿಗಳು ಅಭಿನಂದನಾರ್ಹರು. ಇವರ ಈ ನಡೆ ರಾಜ್ಯದ ಇತರ ನ್ಯಾಯಾಧೀಶರು, ನ್ಯಾಯಮೂರ್ತಿಗಳು ಹಾಗೂ ನ್ಯಾಯಾಲಯಗಳಿಗೂ ಒಂದು ಮಾದರಿಯಾಗಿ, ಭವಿಷ್ಯದಲ್ಲಿ ಎಲ್ಲರೂ ಕನ್ನಡದಲ್ಲಿಯೇ ಆದೇಶ–ತೀರ್ಪು ಹೊರಡಿಸಲು ಪ್ರೇರಣೆಯಾಗುವಂತೆ ಆಗಲಿ. ಅಷ್ಟೇ ಅಲ್ಲ, ದೇಶದ ಇತರ ರಾಜ್ಯಗಳ ಹೈಕೋರ್ಟ್‌ಗಳೂ ಈ ತೀರ್ಪನ್ನು, ಹೊಸ ಹೆಜ್ಜೆಯನ್ನು ಪಾಲಿಸುವಂತೆ ಆಗಲಿ.

ಮನು ಬಳಿಗಾರ್, ಬೆಂಗಳೂರು

ಸಂಬಂಧವಿಲ್ಲದ ಕೆಲಸ ಮಾಡುವುದೇಕೆ?

ಕರ್ನಾಟಕ ಹಾಲು ಮಹಾಮಂಡಳವು (ಕೆಎಂಎಫ್) ದೋಸೆ ಹಿಟ್ಟು ಉತ್ಪಾದನಾ ಘಟಕ ಆರಂಭಿಸಲು ಚಿಂತನೆ ನಡೆಸಿರುವುದನ್ನು ಉದ್ದೇಶಿಸಿ 'ದೋಸೆ ಹಿಟ್ಟಿಗೂ ಕೆಎಂಎಫ್‌ಗೂ ಏನು ಸಂಬಂಧ?' ಎಂದು ಎಚ್.ಎಸ್.ಮಂಜುನಾಥ ಅವರು ಕೇಳಿರುವುದು (ವಾ.ವಾ., ಡಿ. 7) ಅರ್ಥಪೂರ್ಣವಾಗಿದೆ. ಯಾರು ಯಾವ ಕೆಲಸದಲ್ಲಿ ಪರಿಣತರೋ ಅದನ್ನು ಮಾಡಿದಾಗ, ಅದರ ಬೆಳವಣಿಗೆಗೆ ಹೆಚ್ಚು ಗಮನಹರಿಸಿದಾಗ ಮಾತ್ರ ಉತ್ತಮ ಗುಣಮಟ್ಟದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಕಾರ್ಯಕ್ಷಮತೆ, ಉತ್ಪಾದನೆ, ಉತ್ಪಾದಕತೆ ಎಲ್ಲವೂ ಹೆಚ್ಚಾಗುತ್ತವೆ. ಆದಾಯ ಸಹ ಏರಿಕೆಯಾಗಿ, ಪಾಲುದಾರರಿಗೆ ಅದರ ಲಾಭ ಸಿಗುತ್ತದೆ.

ಅದನ್ನು ಬಿಟ್ಟು ಸಂಬಂಧವಿಲ್ಲದ ಕೆಲಸ ಮಾಡಿದಾಗ, ಗಮನ ಕೇಂದ್ರೀಕರಿಸಲಾಗದೆ, ಲಭ್ಯ ಸಂಪನ್ಮೂಲಗಳ ಸಮರ್ಥ ಬಳಕೆಯಾಗದೆ, ಹೊಸ ಕೆಲಸದಲ್ಲಿ ನುರಿತ ಜ್ಞಾನ ಅಥವಾ ತಂತ್ರಜ್ಞಾನದ ಕೊರತೆ ಅನುಭವಿಸಬೇಕಾಗಿ ಬರುವ ಸಾಧ್ಯತೆಯೇ ಹೆಚ್ಚು. ಇದಕ್ಕೆ ಚರಿತ್ರೆಯಲ್ಲಿ ಬೇಕಾದಷ್ಟು ಉದಾಹರಣೆಗಳಿವೆ. ಕೆಲವು ಬ್ಯಾಂಕೇತರ ಹಣಕಾಸು ಸಂಸ್ಥೆಗಳು, ಸಹಕಾರಿ ಸಂಘಗಳು ಮತ್ತು ಖಾಸಗಿ ಬ್ಯಾಂಕುಗಳು ವಿಮಾ ಸಂಬಂಧಿತ ವ್ಯವಹಾರಗಳಲ್ಲಿ ತೊಡಗಿ ನಷ್ಟ ಅನುಭವಿಸುವುದು, ಕೆಲವು ಉದ್ಯಮಿಗಳು ಸಿಕ್ಕಸಿಕ್ಕ ಕಡೆ ಮೂಗು ತೂರಿಸಿ ದಿವಾಳಿ ಆಗಿರುವಂತಹ ನಿದರ್ಶನಗಳಿವೆ. ಆದರೆ ಕೆಲವು ಸಂಸ್ಥೆಗಳು ಆರ್ಥಿಕವಾಗಿ ಸದೃಢವಾಗಿದ್ದರಿಂದ, ಇಲ್ಲಿ ಅನುಭವಿಸಿದ ನಷ್ಟವನ್ನು ತಮ್ಮ ಇತರ ಕ್ಷೇತ್ರದ ವಹಿವಾಟುಗಳಲ್ಲಿ ಲಾಭ ಗಳಿಸಿ ಸರಿದೂಗಿಸಿಕೊಂಡಿವೆ. ಅಂತಹವರನ್ನು ನೋಡಿಕೊಂಡು ಬೇರೆಯವರು 'ಹಗಲು ಕಂಡ ಬಾವಿ'ಗೆ ಬೀಳುವಂತೆ ಆಗಬಾರದು. ಹೈನು ಉತ್ಪನ್ನ ಕ್ಷೇತ್ರದಲ್ಲಿ ಹೆಸರು ಮಾಡಿರುವ ಕೆಎಂಎಫ್, ಹಾಲು ಮತ್ತು ಹಾಲಿನ ಉತ್ಪನ್ನಗಳ ಕಡೆ ಹೆಚ್ಚು ಗಮನ ಕೇಂದ್ರೀಕರಿಸಲಿ. ಈ ವಲಯದ ಕಾರ್ಯವಿಧಾನಗಳಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಹೊಸ ಹೊಸ ಉತ್ಪನ್ನಗಳ ಆವಿಷ್ಕಾರದತ್ತ, ಈಗಾಗಲೇ ತಯಾರಿಸುತ್ತಿರುವ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವತ್ತ ಗಮನಹರಿಸಲಿ.

ಟಿ.ವಿ.ಬಿ.ರಾಜನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿಶ್ವ ಚೆಸ್: ಏಷ್ಯಾ ರಾಷ್ಟ್ರಗಳ ಪಾರಮ್ಯ



ಭಾರತದ ಚೆಸ್ ಭವಿಷ್ಯ: ಗ್ರ್ಯಾಂಡ್‌ಮಾಸ್ಟರ್‌ಗಳಾದ ಪ್ರಜ್ಞಾನಂದ, ಅಧಿಬನ್ ಭಾಸ್ಕರನ್, ರೌನಕ್ ಸಧ್ವಾನಿ, ನಿಹಾಲ್ ಸರಿನ್ ಅವರೊಂದಿಗೆ ವಿಶ್ವ ಚಾಂಪಿಯನ್ ಗುಕೇಶ್ ದೊಮ್ಮರಾಜು

ಉಕ್ಕಿನ ಹಿಡಿತ ಕಳೆದುಕೊಂಡ ರಷ್ಯಾ

ಒಂದು ಕಾಲದಲ್ಲಿ ವಿಶ್ವ ಚೆಸ್‌ನಲ್ಲಿ ಪ್ರಬಲ ಶಕ್ತಿಯಾಗಿದ್ದ ರಷ್ಯಾ ಈಗ ಸೊರಗಿದೆ. ಪೂರ್ವ ಯುರೋಪಿನ ರಾಷ್ಟ್ರಗಳೂ ಶಕ್ತಿಗುಂದಿವೆ. ಏಷ್ಯಾದ ರಾಷ್ಟ್ರಗಳು ಪ್ರವರ್ಧಮಾನಕ್ಕೆ ಬಂದಿದ್ದು, ಭಾರತ ಮುಂಚೂಣಿಯಲ್ಲಿದೆ. ಇತ್ತೀಚೆಗೆ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಗುಕೇಶ್ ಅವರಿಗೆ ಎದುರಾಳಿ ಆಗಿದ್ದವರು ಚೀನಾದ ಡಿಂಗ್ ಲಿರೆನ್. ಚಾಂಪಿಯನ್ ಪಟ್ಟಕ್ಕಾಗಿ ಏಷ್ಯಾದ ಇಬ್ಬರು ಕ್ರೀಡಾಪಟುಗಳು ಪೈಪೋಟಿ ನಡೆಸಿದ್ದು ಇದೇ ಮೊದಲು. ಏಷ್ಯಾದಲ್ಲಿ ಚೆಸ್‌ನ ಬೆಳವಣಿಗೆಯನ್ನು ಇದು ತೋರಿಸುತ್ತದೆ



ಮ್ಯಾಗ್ನಸ್ ಕಾರ್ಲ್‌ಸನ್

• ನಾಗೇಶ ಶೆಣೈ

ಭಾರತದ ಹದಿಹರೆಯದ ಗ್ರ್ಯಾಂಡ್‌ಮಾಸ್ಟರ್ ಗುಕೇಶ್ ದೊಮ್ಮರಾಜು ಸಿಂಗಪುರದಲ್ಲಿ ಚೀನಾದ ಡಿಂಗ್ ಲಿರೆನ್ ಅವರನ್ನು ಸೋಲಿಸಿ ವಿಶ್ವದ ಅತಿ ಕಿರಿಯ ಚೆಸ್ ಚಾಂಪಿಯನ್ ಆಗಿ ಸಂಭ್ರಮಿಸಿದರು. ದೀರ್ಘ ಇತಿಹಾಸದ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಏಷ್ಯಾದ ಇಬ್ಬರು ಮುಖಾಮುಖಿಯಾಗಿದ್ದು ಅದೇ ಮೊದಲು. ಇದಕ್ಕೆ ಕೇವಲ ಮೂರು ತಿಂಗಳ ಹಿಂದೆ (ಸೆಪ್ಟೆಂಬರ್‌ನಲ್ಲಿ) ಹಂಗೆರಿಯ ಬುಡಾಪೆಸ್ಟ್‌ನಲ್ಲಿ 45ನೇ ಚೆಸ್ ಒಲಿಂಪಿಯಾಡ್ ನಡೆದಿತ್ತು. ಇದರಲ್ಲಿ ಓಪನ್ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದು ಅಮೆರಿಕ. ಇದರ ಜೊತೆಗೆ ಪ್ರಶಸ್ತಿಗೆ ಇತರ ನೆಚ್ಚಿನ ತಂಡಗಳೆನಿಸಿದ್ದು ಭಾರತ, ಚೀನಾ, ಉಜ್ಬೇಕಿಸ್ತಾನ ತಂಡಗಳು. ಅಮೆರಿಕ ಬಿಟ್ಟರೆ ಉಳಿದ ಮೂರೂ ಏಷ್ಯಾದ ತಂಡಗಳೇ. ಮಹಿಳಾ ವಿಭಾಗದಲ್ಲಿ ಭಾರತ ಅಗ್ರ ಶ್ರೇಯಾಂಕ ಪಡೆದಿತ್ತು.

ಒಲಿಂಪಿಯಾಡ್ ಇತಿಹಾಸದಲ್ಲಿ ಮೊದಲ ಬಾರಿ ಫೇವರಿಟ್ ತಂಡಗಳಲ್ಲಿ ರಷ್ಯಾ ಇರಲಿಲ್ಲ. ಇದರ ಜೊತೆಗೆ ಪೂರ್ವ ಯುರೋಪಿನ ಹಂಗೆರಿ, ಬಲ್ಗೇರಿಯಾ, ರುಮೇನಿಯಾ, ಪೋಲೆಂಡ್ ತಂಡಗಳೂ ದಿಗ್ಗಜ ರಾಷ್ಟ್ರಗಳ ಪಟ್ಟಿಯಿಂದ ಹೊರಬಿದ್ದಿವೆ. ಚೆಸ್ ವಿಶ್ವದಲ್ಲಿ ಈ ಭಾಗದ ಪ್ರಭಾವ ಒಂದು ಕಾಲದಲ್ಲಿ ಕಣ್ಣು ಕೋರೈಸುವಂತೆ ಇತ್ತು. ಮೊದಲು ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಉಜ್ಬೇಕಿಸ್ತಾನ ಈಗ ಏಷ್ಯಾ ಖಂಡದಲ್ಲಿದೆ.



ಗುಕೇಶ್ ದೊಮ್ಮರಾಜು

ಚೆಸ್ ಆಟ ಕಂಡ ಘಟಾನುಘಟಿ ಆಟಗಾರರೆನಿಸಿದ ಅಲೆಕ್ಸಾಂಡರ್ ಅಲೆಖಿನ್, ಮಿಖಾಯಿಲ್ ಬೊತ್ವಿನಿಕ್, ಮೈಕೆಲ್ ತಾಲ್, ಟಿಗ್ರಾನ್ ಪೆಟ್ರೋಸಿಯಾನ್, ಅನತೋಲಿ ಕಾರ್ಪೋವ್, ಗ್ಯಾರಿ ಕ್ಯಾಸ್ಪರೋವ್.... ಈ ಎಲ್ಲರೂ ಅವಿಭಜಿತ ಸೋವಿಯತ್ ರಷ್ಯಾಕ್ಕೆ ಸೇರಿದವರು. ಇವರೆಲ್ಲರೂ ವಿಶ್ವ ಚಾಂಪಿಯನ್ ಆಗಿ ಮೆರೆದವರು. ತಾಲ್ ಅವರು ಲಾತ್ವಿಯಾ ದೇಶದ ರಿಗಾ ಎಂಬ ಪಟ್ಟಣದ ಆಟಗಾರ. ಅದ್ಭುತ ಆಟಕ್ಕಾಗಿ 'ರಿಗಾದ ಜಾದೂಗಾರ' ಎಂದೇ ಪ್ರಸಿದ್ಧರಾದವರು. 1975ರಲ್ಲಿ ಮೊದಲ ಬಾರಿ ಚಾಂಪಿಯನ್ ಆದ ಕಾರ್ಪೋವ್ ಪೊಸಿಷನಲ್ ಚೆಸ್‌ನಲ್ಲಿ (ಶಾಸ್ತ್ರಬದ್ಧವಾಗಿ ಪಡೆಗಳನ್ನು ಸಜ್ಜುಗೊಳಿಸುವ) ಬಲಾಢ್ಯ ಆಟಗಾರ. ಅದೇ ದೇಶದವರಾದರೂ ಸೈದ್ಧಾಂತಿಕವಾಗಿ ಅವರ ಎದುರಾಳಿಯಾದ ಕ್ಯಾಸ್ಪರೋವ್ ಆಕ್ರಮಣದ ಆಟದ ಶೈಲಿಗೆ ವಿಶ್ವಪ್ರಸಿದ್ಧರಾದವರು.

ಪ್ರಬಲ ರಷ್ಯಾ ಮಂಕಾಗಿದ್ದು ಹೇಗೆ?

ರಷ್ಯಾದಲ್ಲಿ 1960ರ ದಶಕದಿಂದ ಸಾಂಪ್ರದಾಯಿಕ ಚೆಸ್ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ರಷ್ಯನ್ ಚೆಸ್ ಶಾಲೆ ಎಂದೇ ಅವುಗಳನ್ನು ಕರೆಯಲಾಗುತಿತ್ತು. ವ್ಲಾದಿಮಿರ್ ಕ್ರಾಮ್ನಿಕ್, ಕ್ಯಾಸ್ಪರೋವ್ ಮೊದಲಾದ ಆಟಗಾರರೂ ಇಂಥ ಶಾಲೆಗಳಿಂದ ಚೆಸ್ ಕಲಿತವರು. ನುರಿತ ಚೆಸ್ ತರಬೇತುದಾರರು ಇಲ್ಲಿ ಪ್ರತಿಭಾನ್ವಿತ ಆಟಗಾರರನ್ನು ಸಜ್ಜುಗೊಳಿಸುತ್ತಿದ್ದರು. ಚಾಂಪಿಯನ್ ಆಟಗಾರರ ಯಶಸ್ಸಿನ ಪ್ರೇರಣೆ ಒಂದೆಡೆ, ಇಂಥ ಮಾದರಿ ಶಾಲೆಗಳ ವ್ಯವಸ್ಥಿತ ತರಬೇತಿ ಇನ್ನೊಂದೆಡೆ. ಇವುಗಳು ಸರ್ಕಾರದ ಆಸರೆಯಲ್ಲೇ ನಡೆಯುತ್ತಿದ್ದವು.

ದೇಶದ ಹಲವು ಕಡೆ ಇಂಥ ಶಾಲೆಗಳಲ್ಲಿ ಉನ್ನತ ಮಟ್ಟದ ತರಬೇತಿ ನೀಡಲಾಗುತಿತ್ತು. ಆಗಿನ ಕಾಲದಲ್ಲಿ ಈಗಿನಷ್ಟು ಸಂಪರ್ಕ ವ್ಯವಸ್ಥೆ, ಇಂಟರ್‌ನೆಟ್ ಇರಲಿಲ್ಲ. ಹೀಗಾಗಿ ಹೊರಜಗತ್ತಿಗೆ ಗೊತ್ತಾಗದ ರೀತಿ ತರಬೇತಿ ವ್ಯವಸ್ಥೆಯಿತ್ತು ಎಂದು ಹಿಂದೊಮ್ಮೆ ಮಾಜಿ ವಿಶ್ವ ಚಾಂಪಿಯನ್ ವ್ಲಾದಿಮಿರ್ ಕ್ರಾಮ್ನಿಕ್ ಚೆಸ್ ವೆಬ್‌ಸೈಟ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದರು.

ಆದರೆ 1990ರಲ್ಲಿ ಮತ್ತು ನಂತರ ಸೋವಿಯತ್ ಒಕ್ಕೂಟ ವಿಭಜನೆಯಾಗುತ್ತಿದ್ದಂತೆ ಸಮಸ್ಯೆಗಳು ಶುರುವಾದವು. ಇವುಗಳಿಗೆ ಮೊದಲಿನಂತೆ ಹಣಕಾಸಿನ ಹರಿವು ನಿಂತುಹೋಯಿತು. ಕೆಲವು ತರಬೇತುದಾರರು ವಲಸೆ ಹೋದರು. ಕೆಲವು ಆಟಗಾರರು ತಾವು ಜನಿಸಿದ ದೇಶಗಳಿಗೆ (ಲಾತ್ವಿಯಾ, ಅಜರ್‌ಬೈಜಾನ್, ಕಜಕಸ್ತಾನ್, ಜಾರ್ಜಿಯಾ, ಉಕ್ರೇನ್, ಉಜ್ಬೇಕಿಸ್ತಾನ) ಹಂಚಿಹೋದರು. ಇನ್ನು ಕೆಲವರು ಅಮೆರಿಕ (ಉದಾಹರಣೆಗೆ ಗಾತಾ ಕಾಮ್‌ಸ್ಕಿ), ಇಸ್ರೇಲ್ (ಬೋರಿಸ್ ಗೆಲ್ಫಾಂಡ್), ಸ್ಪೇನ್ (ಅಲೆಕ್ಸಿ ಶಿರೋವ್), ಜರ್ಮನಿ, ನೆದರ್ಲೆಂಡ್ಸ್, ಸ್ವಿಜರ್ಲೆಂಡ್ ಮೊದಲಾದ ದೇಶಗಳಿಗೆ ವಲಸೆ ಹೋದರು ಅಥವಾ ಆಶ್ರಯ ಪಡೆದರು. ಹೀಗಾಗಿ ರಷ್ಯಾದಲ್ಲಿ ಪ್ರಬಲವಾಗಿದ್ದ ಚೆಸ್ ಕ್ರೀಡೆ ನಿಧಾನವಾಗಿ ಸೊರಗತೊಡಗಿತು.



ವಿಶ್ವನಾಥನ್ ಆನಂದ್

ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರ ವೆಸ್ಟ್‌ಬ್ರಿಜ್– ಆನಂದ್ ಚೆಸ್ ಅಕಾಡೆಮಿ (WACA) ಕೂಡ ಇಂಥ ಶಾಲೆಗಳ ಪ್ರೇರಣೆಯಿಂದ ಆರಂಭವಾಗಿದ್ದು. 'ನಾನು ಮೂರು ದಶಕಗಳ ಹಿಂದೆ ಸೋವಿಯತ್ ರಷ್ಯಾಕ್ಕೆ ಭೇಟಿ ನೀಡಿದ್ದ ವೇಳೆ ಚೆಸ್ ಶಾಲೆಗಳಿಗೆ ಹೋಗಿದ್ದೆ. ನಾನು ಅವುಗಳ ಕಾರ್ಯಶೈಲಿಯಿಂದ ಪ್ರಭಾವಿತನಾಗಿದ್ದೆ' ಎಂದು ಭಾರತ ತಂಡಗಳು ಒಲಿಂಪಿಯಾಡ್‌ನಲ್ಲಿ ಐತಿಹಾಸಿಕ ಚಿನ್ನ ಗೆದ್ದ ಬಳಿಕ ಆನಂದ್ ಹೇಳಿದ್ದರು.

ರಷ್ಯಾದ ತರಬೇತುದಾರರು ಬೇರೆ ದೇಶಗಳಲ್ಲಿ ನೆಲಸಿದ ಬಳಿಕ ಚೀನಾ, ಪಾಶ್ಚಾತ್ಯ ರಾಷ್ಟ್ರಗಳೂ ಚೆಸ್‌ನಲ್ಲಿ ಪ್ರಗತಿ ಕಂಡವು ಎನ್ನುತ್ತಾರೆ ಕ್ರಾಮ್ನಿಕ್. ಅವರು 1980ರ ದಶಕದಲ್ಲಿ ಬೊತ್ವಿನಿಕ್ ಚೆಸ್ ಸ್ಕೂಲ್ ಮೂಲಕ ತರಬೇತುಗೊಂಡವರು. 'ಈ ಚೆಸ್ ಶಾಲೆಗಳು ವರ್ಷಕ್ಕೆ ಎರಡು ಬಾರಿ ಎರಡು ವಾರಗಳ ತರಬೇತಿ ನೀಡುತ್ತಿದ್ದವು. ಆದರೆ ಹೊರಜಗತ್ತು ತಿಳಿದುಕೊಂಡಂತೆ ಅವು ಶಿಕ್ಷಾ ಕೇಂದ್ರಗಳ ರೀತಿ ಇರುತ್ತಿರಲಿಲ್ಲ. ತರಬೇತಿ ತುಂಬಾ ಕಠಿಣವೇನೂ ಇರಲಿಲ್ಲ' ಎನ್ನುತ್ತಾರೆ ಅವರು.

ಏಷ್ಯಾ ರಾಷ್ಟ್ರಗಳ ಏಳಿಗೆ

ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು 2000ದಿಂದ 2013ರ ಅವಧಿಯಲ್ಲಿ ಐದು ಬಾರಿ ವಿಶ್ವ ಚಾಂಪಿಯನ್ ಆಗಿ ಮೊದಲ ಬಾರಿ ರಷ್ಯಾದ ಪ್ರಾಬಲ್ಯಕ್ಕೆ ಸಡ್ಡು ಹೊಡೆದರು.

2015ರಿಂದೀಚೆಗೆ ಭಾರತ, ಇರಾನ್, ಚೀನಾ, ಉಜ್ಬೇಕಿಸ್ತಾನ ಮೊದಲಾದ ರಾಷ್ಟ್ರಗಳಲ್ಲೂ ಬಹಳಷ್ಟು ಪ್ರತಿಭಾನ್ವಿತರು ಪ್ರವರ್ಧಮಾನಕ್ಕೆ ಬಂದಿದ್ದಾರೆ. ಆನಂದ್ ಹಾಕಿಕೊಟ್ಟ ಪರಂಪರೆಯಲ್ಲಿ ಪ್ರಜ್ಞಾನಂದ, ಅರ್ಜುನ್ ಇರಿಗೇಶಿ, ಗುಕೇಶ್ ಸಾಗಿ ಬಹುಬೇಗ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೇಲೇರಿದರು. ಪ್ರತಿಷ್ಠಿತ ಟೂರ್ನಿಗಳಲ್ಲಿ ಪ್ರಶಸ್ತಿಗಳನ್ನು ಗೆದ್ದುಕೊಂಡರು.

2014ರ ಟ್ರೊಮ್ಸೊ (ನಾರ್ವೆ) ಒಲಿಂಪಿಯಾಡ್‌ನಲ್ಲಿ ಭಾರತ ತಂಡ ಮೊದಲ ಬಾರಿ ಕಂಚಿನ ಪದಕ ಪಡೆಯಿತು. 2022ರ ಒಲಿಂಪಿಯಾಡ್‌ನಲ್ಲಿ ಚಿನ್ನ ಗೆದ್ದ ತಂಡ ಮಧ್ಯ ಏಷ್ಯಾದ ಉಜ್ಬೇಕಿಸ್ತಾನ. ಭಾರತ ಓಪನ್ ಮತ್ತು ಮಹಿಳಾ ತಂಡಗಳು ಕಂಚಿನ ಪದಕ ಪಡೆದವು. 2024ರ ಬುಡಾಪೆಸ್ಟ್‌ನ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕ ಮೊದಲ ಬಾರಿ ಭಾರತದ ಪಾಲಾಯಿತು. ಗುಕೇಶ್, ಅರ್ಜುನ್ ವೈಯಕ್ತಿಕ ಚಿನ್ನಗಳನ್ನೂ ಗೆದ್ದುಕೊಂಡಿದ್ದು ಭಾರತದ ಪ್ರಾಬಲ್ಯ ಸಾಬೀತುಪಡಿಸಿತು. ನಾಲ್ಕನೇ ಬೋರ್ಡ್ ಚಿನ್ನ ಗೆದ್ದಿದ್ದು ಉಜ್ಬೇಕಿಸ್ತಾನದ ಸಂಶುದ್ದೀನ್ ವಾಖಿಡೋವ್.

ಪ್ರಸ್ತುತ ಫಿಡೆ ರ‍್ಯಾಂಕಿಂಗ್‌ನ ಮೊದಲ ಹತ್ತು ಆಟಗಾರರಲ್ಲಿ ಭಾರತದ ಮೂವರು ಸೇರಿದಂತೆ ಏಷ್ಯಾದ ಐವರು ಇದ್ದಾರೆ. ಅರ್ಜುನ್ ಇರಿಗೇಶಿ, ಡಿ.ಗುಕೇಶ್, ವಿಶ್ವನಾಥನ್ ಕ್ರಮವಾಗಿ ನಾಲ್ಕು, ಐದು, ಹತ್ತನೇ ಸ್ಥಾನದಲ್ಲಿದ್ದಾರೆ. ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಆರನೇ ಸ್ಥಾನದಲ್ಲಿ ಮತ್ತು ಚೀನಾದ ವೀ ಯಿ 9ನೇ ಸ್ಥಾನ ಪಡೆದಿದ್ದಾರೆ. ಏಳನೇ ಸ್ಥಾನದಲ್ಲಿರುವ ಅಲಿರೇಝಾ ಫಿರೋಝ್ ಅವರು ಫ್ರಾನ್ಸ್ ದೇಶ ಪ್ರತಿನಿಧಿಸುತ್ತಿದ್ದರೂ, ಇರಾನ್‌ನಲ್ಲಿ ಆಡಿ ಗ್ರ್ಯಾಂಡ್‌ಮಾಸ್ಟರ್ ಆದವರು.

ವಿಯೆಟ್ನಾಮಿನ ಕ್ವಾಮ್ ಲೀಮ್ ಲೀ ಮತ್ತು ಭಾರತದ ಪ್ರಜ್ಞಾನಂದ ಆರ್. ಕ್ರಮವಾಗಿ 15 ಮತ್ತು 17ನೇ ಸ್ಥಾನದಲ್ಲಿದ್ದಾರೆ. ಆದರೆ ಈ ಪಟ್ಟಿಯಲ್ಲಿ ರಷ್ಯಾದ ಒಬ್ಬರಷ್ಟೇ ಇದ್ದಾರೆ. ಕಳೆದ ವರ್ಷ ವಿಶ್ವ ಚಾಂಪಿಯನ್ ಪಟ್ಟಕ್ಕೆ ಡಿಂಗ್ ಲಿರೆನ್ ಎದುರಾಳಿಯಾಗಿದ್ದ ಇಯಾನ್ ನಿಪೊಮ್‌ನಿಷಿ (ಎಂಟನೇ ಸ್ಥಾನ) ಮಾತ್ರ ಆ ಆಟಗಾರ.

ಚೀನಾದ ಡಿಂಗ್ ಲಿರೆನ್ ಮತ್ತು ಭಾರತದ ವಿದಿತ್ ಗುಜರಾತಿ ಕ್ರಮವಾಗಿ 22 ಮತ್ತು 23ನೇ ಸ್ಥಾನದಲ್ಲಿದ್ದಾರೆ.


ಏಷ್ಯಾದ ಇನ್ನೊಂದು ರಾಷ್ಟ್ರ ಇರಾನ್ ಕೂಡ ಹಿಂದೆ ಬಿದ್ದಿಲ್ಲ. ಅಲಿರೇಝಾ ಫಿರೋಜ್ ಫ್ರಾನ್ಸ್ ಪ್ರಜೆಯಾದ ಬಳಿಕ ಪರ್ಹಾಮ್ ಮಘಸೂಡ್ಲು (ರೇಟಿಂಗ್ 2703), ಮೊಹಮ್ಮದ್ ಅಮೀನ್ ತಬಾತಬೇಯಿ (2695) ಕ್ರಮವಾಗಿ 29 ಮತ್ತು 37ನೇ ಸ್ಥಾನದಲ್ಲಿದ್ದಾರೆ.

ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ವಿಶ್ವ ಚಾಂಪಿಯನ್ ರೇಸ್‌ನಿಂದ ಹಿಂದೆ ಸರಿದರೂ ಅವರು ನಿರ್ವಿವಾದವಾಗಿ ಈಗ ವಿಶ್ವ ಶ್ರೇಷ್ಠ ಆಟಗಾರ. ಭಾರತ ಯುವ ಪಡೆಯ ಯಶಸ್ಸನ್ನು ಅವರು ಹಲವು ಬಾರಿ ಶ್ಲಾಘಿಸಿದ್ದಾರೆ. ಪ್ರಜ್ಞಾನಂದ ಅವರು ಕಳೆದ ವರ್ಷ ವಿಶ್ವಕಪ್ ಫೈನಲ್ ಆಡಿ ಕಾರ್ಲ್‌ಸನ್ ಎದುರು ಸೋತಿದ್ದರು. ಕ್ಯಾಂಡಿಡೇಟ್ಸ್ ಓಪನ್ ವಿಭಾಗದ ಎಂಟು ಮಂದಿಯಲ್ಲಿ ಭಾರತದ ಮೂವರು, ಮಹಿಳಾ ವಿಭಾಗದಲ್ಲಿ ಇಬ್ಬರು ಆಡಿದ್ದರು ಎಂಬುದು ಗಮನಾರ್ಹ. ಟೊರಾಂಟೊದಲ್ಲಿ ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದು ವಿಶ್ವ ಚೆಸ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎನಿಸಿದ್ದ ಗುಕೇಶ್ ಈಗ ಅತಿ ಕಿರಿಯ ಚಾಂಪಿಯನ್ ಎನಿಸಿದ್ದಾರೆ. ಯುವ ಪಡೆಯ ಆಟಗಾರರಿಂದಾಗಿ ಭಾರತ ಏಷ್ಯಾದ ಜೊತೆಗೆ ವಿಶ್ವದ ಚೆಸ್ ರಾಷ್ಟ್ರಗಳ ಸಾಲಿನಲ್ಲಿ ಅಗ್ರಗಣ್ಯನಾಗಿದೆ.



ಇಯಾನ್ ನಿಪೊಮ್‌ನಿಷಿ

ಒಲಿಂಪಿಯಾಡ್‌ನಲ್ಲೂ ಪ್ರಬಲವಾಗಿದ್ದ ರಷ್ಯಾ



ಗ್ಯಾರಿ ಕ್ಯಾಸ್ಪರೋವ್



ವ್ಲಾದಿಮಿರ್ ಕ್ರಾಮ್ನಿಕ್


ಎರಡು ವರ್ಷಗಳಿಗೊಮ್ಮೆ ನಡೆಯುವ ಚೆಸ್ ಒಲಿಂಪಿಯಾಡ್‌ನ ಓಪನ್ ವಿಭಾಗದಲ್ಲಿ ಸೋವಿಯತ್ ರಷ್ಯಾ ಒಟ್ಟು 18 ಬಾರಿ ಚಿನ್ನ ಗೆದ್ದಿದೆ. ಇದರಲ್ಲಿ 1952ರಿಂದ 1974ರವರೆಗೆ ಸತತವಾಗಿ 12 ಒಲಿಂಪಿಯಾಡ್ ಚಿನ್ನ ಗೆದ್ದಿದ್ದು ಒಂದು ಕಾಲದ ಅದರ ಪ್ರಾಬಲ್ಯಕ್ಕೆ ಪುರಾವೆ. 1980ರಿಂದ 1990ರವರೆಗೆ ಸತತವಾಗಿ ಆರು ಬಾರಿ ಅದು ಒಲಿಂಪಿಯಾಡ್‌ನಲ್ಲಿ ಚಾಂಪಿಯನ್ ಆಗಿ ಮೆರೆದಿತ್ತು. 1990ರಲ್ಲಿ ಸೋವಿಯತ್ ಒಕ್ಕೂಟ ಒಡೆದುಹೋದ ನಂತರ ರಷ್ಯಾ ತಂಡ ಸ್ವತಂತ್ರವಾಗಿ ಐದು ಬಾರಿ (1992 ರಿಂದ 2000) ಚಿನ್ನ ಜಯಿಸಿದೆ. ಸೋವಿಯತ್ ಒಕ್ಕೂಟದಿಂದ ಬೇರ್ಪಟ್ಟ ಅರ್ಮೇನಿಯಾ ಮೂರು ಬಾರಿ, ಉಕ್ರೇನ್ ಒಮ್ಮೆ, ಉಜ್ಬೇಕಿಸ್ತಾನ ಒಮ್ಮೆ (2022, ಭಾರತದಲ್ಲಿ) ಚಿನ್ನ ಗೆದ್ದಿವೆ.

ಸೋವಿಯತ್ ರಷ್ಯಾದ ವಿಶ್ವ ಚಾಂಪಿಯನ್ನರು

- ಅಲೆಕ್ಸಾಂಡರ್ ಅಲೆಖಿನ್ (ರಷ್ಯಾ)
- ಮಿಖಾಯಿಲ್ ಬೊತ್ವಿನಿಕ್
- ಮೈಕೆಲ್ ತಾಲ್ (ಈಗಿನ ಲಾತ್ವಿಯಾ)
- ಟಿಗ್ರಾನ್ ಪೆಟ್ರೋಸಿಯಾನ್ (ಈಗಿನ ಜಾರ್ಜಿಯಾ)
- ಬೋರಿಸ್ ಸ್ಪಾಸ್ಕಿ
- ಅನತೋಲಿ ಕಾರ್ಪೋವ್
- ಗ್ಯಾರಿ ಕ್ಯಾಸ್ಪರೋವ್ (ಬಾಕು, ಅಜರ್‌ಬೈಜಾನ್)
- ಅಲೆಕ್ಸಾಂಡರ್ ಖಾಲಿಫ್‌ಮನ್
- ರಸ್ಲಾನ್ ಪೊನೊಮರಿಯೇವ್
- ರುಸ್ತಾಮ್ ಕಾಸಿಮ್‌ಝನೋವ್
- ವ್ಲಾದಿಮಿರ್ ಕ್ರಾಮ್ನಿಕ್

ಸಿನಿ ಬಿಟ್ಸ್

'ಕಣ್ಣಾ ಮುಚ್ಚೆ...'ಯಲ್ಲಿ ರಾಘವೇಂದ್ರ ರಾಜ್‌ಕುಮಾರ್



ಚಿತ್ರದ ಹಾಡಿನ ಸಾಲುಗಳನ್ನು ಶೀರ್ಷಿಕೆಯಾಗಿಸಿಕೊಂಡ ಸಾಕಷ್ಟು ಚಿತ್ರಗಳು ಬಂದಿವೆ. ಇದೇ ಸಾಲಿಗೆ 'ಕಣ್ಣಾ ಮುಚ್ಚೆ ಕಾಡೇ ಗೂಡೇ' ಹೊಸ ಸೇರ್ಪಡೆ. ರಾಘವೇಂದ್ರ ರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

ಡಾರ್ಲಿಂಗ್ ಪ್ರೊಡಕ್ಷನ್ಸ್ ಅಡಿಯಲ್ಲಿ ಅನಿತಾ ವೀರೇಶ್‌ಕುಮಾರ್ ನಿರ್ಮಾಣ ಮಾಡಿದ್ದು, ಹಲವು ನಿರ್ದೇಶಕರ ಬಳಿ ಸಹಾಯಕರಾಗಿ ಅನುಭವ ಪಡೆದುಕೊಂಡಿರುವ ನಟರಾಜ್ ಕೃಷ್ಣೇಗೌಡ ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಿನಿಮಾವು ಒಂದು ಕೊಲೆಯ ಸುತ್ತ ನಡೆಯುತ್ತದೆ. ಅದನ್ನು ಕಂಡು ಹಿಡಿಯಲು ಖಾಸಗಿ, ಸರ್ಕಾರಿ ಪಡೆ ಮುಂದೆ ಬರುತ್ತದೆ. ಇದರ ಮಧ್ಯೆ ಹುಡುಗಿಯೊಬ್ಬಳು ಸಮಸ್ಯೆಯಲ್ಲಿ ಸಿಲುಕಿಕೊಳ್ಳುತ್ತಾಳೆ. ಅಂತಿಮವಾಗಿ ಅಪರಾಧಿ ಸಿಗುತ್ತಾನಾ? ಆಕೆಯು ಕಷ್ಟದಿಂದ ಹೊರ ಬರುತ್ತಾಳಾ? ಎಂಬುದನ್ನು ಸಸ್ಪೆನ್ಸ್, ಥ್ರಿಲ್ಲರ್ ರೀತಿಯಲ್ಲಿ ತೋರಿಸಿದ್ದೇವೆ. ಸೆನ್ಸಾರ್ ಮುಗಿದಿದ್ದು ಜನವರಿಯಲ್ಲಿ ಚಿತ್ರ ಬಿಡುಗಡೆ ಆಲೋಚನೆಯಿದೆ' ಎಂದರು ನಿರ್ದೇಶಕರು.

ರಾಘವೇಂದ್ರ ರಾಜ್‌ಕುಮಾರ್ ನಿವೃತ್ತ ವೈದ್ಯರಾಗಿ ಕಾಣಿಸಿಕೊಂಡಿದ್ದಾರೆ. ಅಥರ್ವ ಪ್ರಕಾಶ್ ನಾಯಕ. ತುಳು ಚಿತ್ರದಲ್ಲಿ ನಟಿಸಿದ್ದ ಪ್ರಾರ್ಥನಾ ನಾಯಕಿ. ಸಂತೋಷ್-ವಿಜಿತ್‌ಕೃಷ್ಣ ಸಂಗೀತ, ದೀಪಕ್‌ಕುಮಾರ್.ಜೆ.ಕೆ ಛಾಯಾಚಿತ್ರಗ್ರಹಣವಿದೆ. ಮಂಗಳೂರು, ಬೆಂಗಳೂರು ಮುಂತಾದೆಡೆ ಚಿತ್ರೀಕರಣಗೊಂಡಿದೆ. ❖

ತರುಣ್ ಸುಧೀರ್ ಹೊಸ ಸಿನಿಮಾ



ಚಿತ್ರದ ಪೋಸ್ಟರ್

ಶರಣ್ ನಟನೆಯ 'ಗುರು ಶಿಷ್ಯರು' ಚಿತ್ರ ನಿರ್ಮಿಸಿದ್ದ ನಿರ್ಮಾಪಕ, ನಿರ್ದೇಶಕ ತರುಣ್ ಕಿಶೋರ್ ಸುಧೀರ್ ತಮ್ಮ ನಿರ್ಮಾಣ ಸಂಸ್ಥೆಯಿಂದ ಹೊಸ ಸಿನಿಮಾ ಘೋಷಿಸಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಪೋಸ್ಟರ್ ಬಿಡುಗಡೆಗೊಂಡಿದ್ದು, ಶೀರ್ಷಿಕೆಯನ್ನು ಬಹಿರಂಗಪಡಿಸಿಲ್ಲ.

'ಏಳುಮಲೆಯ ಮಡಿಲಲ್ಲಿ ಎದೆ ನಡುಗಿಸಿದ ಪ್ರೇಮಕಥೆ' ಎಂಬ ಅಡಿಬರಹ ಚಿತ್ರಕ್ಕಿದೆ. 'ಕರ್ನಾಟಕ–ತಮಿಳುನಾಡು ಗಡಿಯಲ್ಲಿ ನಡೆಯುವ ಕಥೆ. ಡಿ.25ರಂದು ಚಿತ್ರೀಕರಣ ಪ್ರಾರಂಭವಾಗಲಿದೆ. ನೈಜ ಪ್ರೇಮಕಥೆಯನ್ನು ಆಧರಿಸಿದ ಚಿತ್ರವಿದು. ಎಲ್ಲರಿಗೂ ಗೊತ್ತಿರುವ ಕಥೆ. ಆದರೆ ಅದನ್ನು ಬೇರೆ ರೀತಿ ಹೇಳಿದ್ದೇವೆ. ಗಟ್ಟಿಯಾದ ಪ್ರೇಮಕಥೆಯಿದೆ. ಬಹುತೇಕ ಹೊಸಬರಿಂದ ಕೂಡಿದ ತಂಡ' ಎನ್ನುತ್ತಾರೆ ತರುಣ್ ಸುಧೀರ್.

ದ್ವೇಷದ ಬೆಂಕಿಯಿಂದ ಹೊತ್ತಿ ಉರಿದ ಕಾರನ್ನು ಪೋಸ್ಟರ್‌ನಲ್ಲಿ ತೋರಿಸಲಾಗಿದೆ. ಪ್ರೇಮದ ಜೊತೆಗಿನ ಹೋರಾಟದ ಸುಳಿವನ್ನು ಪೋಸ್ಟರ್ ನೀಡುತ್ತಿದೆ. ಈ ಚಿತ್ರವನ್ನು ತರುಣ್ ಸುಧೀರ್ ಜೊತೆಗೆ ಅಟ್ಲಾಂಟ ನಾಗೇಂದ್ರ ನಿರ್ಮಿಸುತ್ತಿದ್ದಾರೆ. ಪುನೀತ್ ರಂಗಸ್ವಾಮಿ ಅವರ ರಚನೆ ಹಾಗೂ ನಿರ್ದೇಶನದ ಚಿತ್ರವಿದು. ಸುಧಾಕರ್ ಎಸ್. ರಾಜ್ ಅವರ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಡಿಸೆಂಬರ್ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪ್ರತಿಪದ್ ಗಂ. 12-28 ನಕ್ಷತ್ರ: ಆರ್ದ್ರಾ ಗಂ. 25-14, ಯೋಗ: ಶುಕ್ಲ (ಶುಕ್ರ) ಗಂ. 23-22 ಕರಣ: ಕೌಲವ ಗಂ. 12-28, ವೃಶ್ಚಿಕ ಮಾಸದ 30 ನೇ ದಿನ, ಮಳೆನಕ್ಷತ್ರ: ಮೂಲ 1.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-50 **ಸೂರ್ಯಾಸ್ತ:** 06-03

ಮುಸ್ಲಿಂ ದಿನಾಂಕ: 13 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 11, 3

ಮೇಷ: ಸಾಮರ್ಥ್ಯ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು ಅವಕಾಶಗಳು ಒದಗಿ ಬರಲಿವೆ. ಶತ್ರುಗಳ ಬಲೆಗೆ ಬೀಳದಂತೆ ಈ ದಿನ ಎಚ್ಚರವಹಿಸುವುದು ಅವಶ್ಯ. ಹೊಟ್ಟೆ ನೋವು ಬಾಧಿಸಬಹುದು.

ವೃಷಭ: ವ್ಯಾಪಾರ, ವ್ಯವಹಾರಗಳಲ್ಲಿ ವಿಪರೀತ ಪೈಪೋಟಿ ನಿರ್ಮಾಣವಾಗಲಿದ್ದು, ನಷ್ಟ ಸಂಭವಿಸುವ ಸಾಧ್ಯತೆ ಇದೆ. ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಸಿಗಲಿದೆ.

ಮಿಥುನ: ಸಜ್ಜನರ ಸಹವಾಸ ಮಾಡಬೇಕೆಂಬ ಹಂಬಲಕ್ಕೆ ಪೂರಕವಾದ ವಾತಾವರಣ ನಿರ್ಮಾಣವಾಗಲಿದೆ. ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸುವುದು ಅವಶ್ಯ. ಕೆಲಸದ ಬಗ್ಗೆ ಆಸಕ್ತಿ ಕಡಿಮೆಯಾಗಲಿದೆ.

ಕರ್ಕಾಟಕ: ಆಡುವ ಮಾತಿನ ಬಗ್ಗೆ ಎಚ್ಚರವಿರಲಿ ಹಾಗೂ ನುಡಿದಂತೆ ನಡೆಯುವುದನ್ನು ರೂಢಿಸಿಕೊಳ್ಳಿ. ಮನೆಯಲ್ಲಿನ ಕೆಲ ಸಮಸ್ಯೆಗಳು ಸುಲಭವಾಗಿ ಪರಿಹಾರವಾಗಲಿವೆ. ಯಂತ್ರೋಪಕರಣಗಳನ್ನು ಬಳಸುವಾಗ ಜಾಗ್ರತೆ.

ಸಿಂಹ: ಯಂತ್ರೋಪಕರಣಗಳೊಂದಿಗೆ ಅಥವಾ ಕಾರ್ಖಾನೆಯಲ್ಲಿ ಕೆಲಸ ಮಾಡುವವರಿಗೆ ಧನ ಲಾಭವಿದೆ. ಎಲೆಕ್ಟ್ರಾನಿಕ್ ಉಪಕರಣಗಳ ರಿಪೇರಿಗೆ ಖರ್ಚು ಮಾಡಬೇಕಾಗುವುದು. ಬೇಳೆ ವ್ಯಾಪಾರಿಗಳಿಗೆ ಲಾಭವಾಗಲಿದೆ.

ಕನ್ಯಾ: ಕುಟುಂಬ ಸದಸ್ಯರಲ್ಲಿ ಮೂಡಿದ್ದ ವೈಮನಸ್ಸಿನ ಹಿಂದಿನ ಕಾರಣ ಮತ್ತು ಪರಿಹಾರವನ್ನು ಕಂಡುಕೊಳ್ಳುವಿರಿ. ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿಯೊಬ್ಬರು ನೆರವಾಗುವರು. ಅಧಿಕಾರ ಪ್ರಾಪ್ತಿ ಯೋಗವಿದೆ.

ತುಲಾ: ಹೆಚ್ಚಿನ ಪರಿಶ್ರಮವಿದ್ದರೂ ನಿರೀಕ್ಷಿತ ಫಲಿತಾಂಶ ಸಿಗದ ಕಾರಣ ಬೇಸರವಾಗಬಹುದು. ಧ್ಯಾನ ಹಾಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಆಸಕ್ತಿ ಹೆಚ್ಚಲಿದೆ. ಸೇವಾನಿರತ ವ್ಯಕ್ತಿಗಳ ಜನಪ್ರಿಯತೆ ಹೆಚ್ಚುತ್ತದೆ.

ವೃಶ್ಚಿಕ: ಧಾರ್ಮಿಕ ವಿಚಾರಧಾರೆಯಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದರಿಂದ, ಮನಸ್ಸು ಧ್ಯಾನದತ್ತ ಆಕರ್ಷಿತವಾಗಲಿದೆ. ಕೊಟ್ಟ ಮಾತು ಉಳಿಸಿಕೊಳ್ಳಲು ಹೆಣಗಬೇಕಾಗಬಹುದು. ಹಳದಿ ಬಣ್ಣ ಅದೃಷ್ಟ ತರುವುದು.

ಧನು: ನಿಮ್ಮಿಂದ ಸಲಹೆ–ಸಹಕಾರವನ್ನು ಪಡೆದು, ನಿಮ್ಮನ್ನೇ ಮೂರ್ಖರನ್ನಾಗಿ ಮಾಡುವವರ ಬಗ್ಗೆ ಎಚ್ಚರ. ಮನರಂಜನೆಗಾಗಿಯೇ ಅಧಿಕ ಹಣವ್ಯಯವಾಗಲಿದೆ. ಆದಾಯದ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಮಕರ: ಕಾರ್ಯಗಳಿಗೆ ವಿಘ್ನ ಎದುರಾದಲ್ಲಿ, ಗುರು–ಹಿರಿಯರ ಸಲಹೆ ಪಡೆದು ಮುಂದುವರೆಯುವುದು ಉತ್ತಮ. ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಕಾರ್ಯಗಳು ಏರು-ಪೇರಾಗಬಹುದು. ಜಾಣತನದಿಂದ ವರ್ತಿಸಿ.

ಕುಂಭ: ವಕೀಲರಿಗೆ ಪೂರ್ವಸಿದ್ಧತೆಯ ಕೊರತೆಯಿಂದಾಗಿ, ಸಮಸ್ಯೆಗಳನ್ನು ತಾವೇ ಸೃಷ್ಟಿಸಿಕೊಂಡಂತಾಗಲಿದೆ. ಅತಿಯಾದ ನಿದ್ದೆ, ವಿಪರೀತ ವ್ಯಸನಗಳು ಹಾನಿಯುಂಟು ಮಾಡಲಿವೆ. ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ.

ಮೀನ: ಅವಿವಾಹಿತರಿಗೆ ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ ಕಂಕಣ ಬಲ ಒದಗಿ ಬರಲಿದೆ. ಸಾರಿಗೆ ಸಂಸ್ಥೆ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲ ಉಂಟಾಗಲಿದೆ. ಮನಸ್ಸಿಗೆ ಮುದ ನೀಡುವ ಸುದ್ದಿಯನ್ನು ಸಂಜೆಯೊಳಗೆ ಕೇಳಲಿದ್ದೀರಿ.

ನಿಸರ್ಗದ ನಿತ್ಯೋತ್ಸವ



ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

88

ನಮ್ಮ ಈ ಬದುಕು ನಿಸರ್ಗ ದೇವನ ಕೊಡುಗೆ. ಈ ಬದುಕಿಗೆ ಎರಡು ಅಂಗಗಳು. ಒಂದು ಬಹಿರಂಗ, ಇನ್ನೊಂದು ಅಂತರಂಗ. ದೇಹ ಬಹಿರಂಗ, ಮನಸ್ಸು ಅಂತರಂಗ. ದೇಹ ಮತ್ತು ಮನಸ್ಸು ಇವುಗಳ ಸುಂದರ ಸಮನ್ವಯವೇ ನಮ್ಮ ಬದುಕು.

ಅನ್ನ, ಅರಿವೆ ದೇಹಕ್ಕೆ ಬೇಕು. ಅರಿವು, ಆನಂದ ಮನಸ್ಸಿಗೆ ಬೇಕು. ದೇಹಕ್ಕೆ ಸಮೃದ್ಧಿ ಇರಬೇಕು. ಅಂತರಂಗಕ್ಕೆ ಸಮಾಧಾನ ಇರಬೇಕು ಅಂದರ ಬದುಕು ಪರಿಪೂರ್ಣವಾಗಿರುತ್ತದೆ. ಹೊರಗೆ ಸಮೃದ್ಧಿ ಇತ್ತು ಒಳಗೆ ಸಮಾಧಾನ ಇಲ್ಲಾಂದರ ಬದುಕು ಸುಂದರವಾಗೋದಿಲ್ಲ. ಒಳಗೆ ಸಮಾಧಾನ ಬರಬೇಕಾದರೆ ಸಮೃದ್ಧಿಯೂ ಬಹಳ ಮುಖ್ಯ. ಆರ್ಥಿಕತೆಯೂ ಬೇಕು, ಸಾರ್ಥಕತೆಯೂ ಬೇಕು. ಇವೆರಡರ ಬೆಸುಗೆಯೇ ಬದುಕು. ಇಂತಹ ಬದುಕನ್ನು ಕಟ್ಟಲು ನಾವು ಏನು ಮಾಡಬೇಕು?

ಒಂದು ಹೂವಿದೆ. ಅದರ ಆಯುಷ್ಯ ಮನುಷ್ಯನ ಹಾಗೆ ನೂರು ವರ್ಷ ಅಲ್ಲ. ಸೂರ್ಯೋದಯದಿಂದ ಆರಂಭವಾಗಿ ಸೂರ್ಯಾಸ್ತಕ್ಕೆ ಮಣ್ಣಲ್ಲಿ ಮಣ್ಣಾಗುವ ಹೂವಿನ ಬದುಕು ಎಷ್ಟು ಅದ್ಭುತ! ಅಂತಹ ಹೂವು ತನ್ನನ್ನು ನಿರ್ಮಾಣ ಮಾಡಿದ ದೇವರ ತಲೆಯ ಮೇಲೆ ಹೋಗಿ ಕುಳಿತು ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತದೆ. ಬದುಕಿದ್ದು ಒಂದೇ ದಿನ ಆದರೂ ದೇವರೇ ತನ್ನ ತಲೆ ಮೇಲೆ ಕುಳ್ಳಿರಿಸಿಕೊಂಡು ಸಂತೋಷಪಡಬೇಕಾದರೆ ಹೂವು ಮಾಡಿದ್ದಾದರೂ ಏನು? ಹೂವು ಎರಡು ಕೆಲಸ ಮಾಡ್ತೈತಿ. ಒಂದು ಸದಾ ಅರಳುವಿಕೆ. ಬರೇ ಅರಳುವಿಕೆ ಅಲ್ಲ, ಈ ಭೂಮಿಯಿಂದ ಏನು ಪಡೆದುಕೊಂಡೈತಲ್ಲ ಅದನ್ನು ಮರಳಿಸುವ ಕೆಲಸವನ್ನೂ ಮಾಡತೈತಿ. ಯಾರು ಹೂವಿನ ಹತ್ತಿರ ಹೋಗುತ್ತಾರೋ ಅವರಿಗೆ ಸೌಂದರ್ಯದ ಜೊತೆಗೆ ಸುಗಂಧ ಸೂಸಿ ಅವರ ಬದುಕೂ ಸುಂದರವಾಗಲಿ ಅಂತ ಹರಸಿ ಕಳಿಸತೈತಿ.

ಎಷ್ಟು ಮಂದಿ ಕವಿಗಳು ಹೂವಿನ ಮೇಲೆ ಪದ್ಯ ಬರೆದಾರ. ಇಷ್ಟು ಮಂದಿ ಪದ್ಯ ಬರೆದಿದ್ದರೂ ಏನಾರೂ ಗೌರವ ಧನ ಕೊಡಿ ಅಂತ ಯಾವಾಗಲಾದರೂ ಅದು ಕೇಳ್ಯೆತೇನು? ಹೂವು ಶಿವನ ತಲೆ ಮೇಲೆ ಏರಿದರೂ ಶವದ ಮೇಲೆ ಏರಿದರೂ ಸಂತೋಷ ಪಟ್ಟೈತಿ. ಶಿವ– ಶವದ ನಡುವೆ ಭೇದವನೆಣಿಸದೆ ಮುಳ್ಳಿನೊಳಗೂ ಒಂದು ಕರುಳಿದೆ ಎನ್ನುವುದನ್ನು ತೋರಿಸಿಕೊಟ್ಟೈತೆ ಹೂವು.

ಒಂದು ನದಿ ಐತಿ. ನಾವು ನದಿಗೆ ಗಂಗಾ ಪೂಜೆ ಮಾಡ್ತೀವಿ. ಯಾಕ? ಇಡೀ ವಿಶ್ವದ ನಾಗರೀಕತೆ, ಸಂಸ್ಕೃತಿಗಳೆಲ್ಲ ನದಿಯ ದಂಡೆಯ ಮೇಲೆ ಬೆಳೆದವು. ಸಿಂಧೂ ನಾಗರೀಕತೆ ಸಿಂಧೂ ನದಿಯ ದಂಡೆಯ ಮೇಲೆ, ಈಜಿಪ್ಟ್ ನಾಗರೀಕತೆ ನೈಲ್ ನದಿಯ ದಂಡೆಯ ಮೇಲೆ ಬೆಳೆದವು. ಜೀವ ವಿಕಾಸಕ್ಕೆ ಬುನಾದಿಯಾದವು ನದಿಗಳು. ನಮ್ಮ ಹೊಲದಾಗೆ ಮಾತ್ರ ನೀರು ಹರಿಬೇಕು ಪಕ್ಕದ ಹೊಲದಲ್ಲಿ ಹರಿಯ ಬಾರದು ಎಂದು ನದಿಗೆ ಹೇಳಿದರೆ 'ನೀ ಹುಚ್ಚ' ಅನತೈತಿ. ಸುಮ್ಮನೆ ನಾನು ಹರಿದು ಹೋಗುತ್ತೇನೆ. ಬೇಕಾದವರು ನನ್ನ ಕರಕೋತಾರೆ ಎನ್ನುತೈತಿ ಅದು.

ನದಿ ಯಾವಾಗಲೂ ಹರಿಯುತ್ತದೆ ಮತ್ತು ತನ್ನ ಒಡಲಿನ ಸಂಪತ್ತನ್ನು ಹಂಚತೈತಿ. ಹರಿಯುವಿಕೆ ಮತ್ತು ಹಂಚುವಿಕೆಯಿಂದ ಅದು ದೊಡ್ಡದಾಗೈತಿ. ಅದಕ್ಕೆ ಅದನ್ನು ನಾವು ಪೂಜೆ ಮಾಡ್ತೀವಿ. ಗಿಡಗಳಿಗೆ ನಿತ್ಯೋತ್ಸವ. ಯಾಕೆಂದರ ಜನರು ನಿರಂತರ ತುಳಿದರೂ ಅದು ಬೆಳೆಯೋದು ಬಿಟ್ಟಿಲ್ಲ. ತುಳಿದಿದ್ದನ್ನು ಮರೆತಿದ್ದಕ್ಕೇ ಮರ ಆಗೀನಿ ಅಂತ ಹೇಳತೈತಿ ಮರ. ತುಳಿಯೋದನ್ನು ಮರೆಯಬೇಕು ಮನುಷ್ಯ. ❖

ಪದಬಂಧ 5893


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೇಶೀ ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧ (4)
3.ಶಿರದ ರಕ್ಷಣೆಗಾಗಿ ಧರಿಸುವ ಟೊಪ್ಪಿಗೆ (4)
5.ಕಾವು ಇದ್ದಾಗಲೇ ಕಾಣಿಸಿದ ಹೊರಗಿನ ಅಂದ (3)
7.ಈತ ಕೆಲಸಕ್ಕೆ ಬಾರದವನು (4)
9.ಗುರಾಣಿ ಹಿಡಿದವನು ತೋಡಿದ ತಗ್ಗು (2)
10.ಒಂದನೊಂದು ಬಲವಾಗಿ ಅಪ್ಪಳಿಸುವಿಕೆ (2)
11.ಈಕೆ ತೆಳ್ಳನೆಯ ಉದರವುಳ್ಳವಳು (4)
14.ಹೇಡಿ ಹಿಡಿದಿರುವ ದೊಡ್ಡ ಬುಟ್ಟಿ (3)
16.ಹತ್ತು ಎನ್ನುವುದರೊಳಗೇ ಹೂಡಿದ ಸಂಚು (4)
17.ಸೇನಾನಾಯಕನಿವನು (4)

ಮೇಲಿಂದ ಕೆಳಕ್ಕೆ

1.ನಾಡಿನಲ್ಲಿರುವ ಅಲ್ಪವ್ಯಕ್ತಿ ಕಾಣಿಸಿದನೇ? (3)
2.ನೆನಪಿನಲ್ಲಿ ಉಳಿಯದಿರುವುದು (3)
3.ತಡದಿಂದ ಆದ ತಬ್ಬಿಬ್ಬು (4)
4.ಹರುಷ ಪಡುತ್ತಿರುವ ಗಂಡುವ್ಯಕ್ತಿ (3)
6.ವ್ಯಂಜನಕ್ಕೆ ಸ್ವರವನ್ನು ಸೇರಿಸಿ ಬರೆಯುವುದು (4)
7.ಈ ಪರಿ ತಪ್ಪಿಸಿಕೊಳ್ಳುವಿಕೆ (3)
8.ಮಿಡಿ ಹಿಡಿದುಕೊಂಡು ತೋರಿದ ಸಿಟ್ಟು (4)
12.ಕತ್ತು ಬಗ್ಗಿಸಿ ಹಾಕಿರುವ ಸಹಿ (4)
13.ತುಂಬಿ ಹರಿಯುವಿಕೆ (3)
14.ಅಧಿಕ್ಯವನ್ನು ಹೀಗೆನ್ನಿ (3)
15.ಗೆಳೆಯನ ಜೊತೆ ಬಂದಿರುವ ಸ್ನೇಹಿತೆ (3)



5892ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉರುಲು 3.ಹಣಾಹಣಿ 5.ಹಕ್ಕುದಾರ 7.ತಡಬಡ 8.ಣೆಹ 10.ಸಿಬ್ಬಂದಿ 12.ಹಸು 14.ಮೆಲುವಾಸು 16.ಪರಿಪೂರ್ಣ 18.ನಿರರ್ಥಕ 19.ಅಂಬುಧಿ

ಮೇಲಿಂದ ಕೆಳಕ್ಕೆ: 1.ಉದಾಹರಣೆ 2.ಲುಖದಾ 3.ಹರಿತ 4.ಹಣೆಬರಹ 6.ರತಾಸಿ 9.ಹಲಾಲುಕೋರ 11.ದಿನಪ 13.ಸುವರ್ಣಸಂಧಿ 15.ಸುನಕ 17.ರಿಬಾಅಂ

ಸುಡೊಕು 6278

	6				7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6277 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹615
12 ಕ್ಕೆ	₹80
ಮೈಸೂರು	
100ಕ್ಕೆ	₹615

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹245-577

ದ್ವಿತಳಿ (ಬಿ.ವಿ) ₹300-717

ರಷ್ಯಾದಿಂದ ಕಚ್ಚಾ ತೈಲ ಆಮದು ಇಳಿಕೆ

ನವದೆಹಲಿ (ಪಿಟಿಐ): ಭಾರತಕ್ಕೆ ನವೆಂಬರ್‌ನಲ್ಲಿ ರಷ್ಯಾದಿಂದ ಕಚ್ಚಾ ತೈಲದ ಆಮದು ಪ್ರಮಾಣದಲ್ಲಿ ಶೇ 55ರಷ್ಟು ಇಳಿಕೆಯಾಗಿದೆ ಎಂದು ಸೆಂಟರ್ ಫಾರ್ ರಿಸರ್ಚ್ ಆನ್ ಎನರ್ಜಿ ಆ್ಯಂಡ್ ಕ್ಲೀನ್ ಏರ್ (ಸಿಆರ್‌ಇಎ) ವರದಿ ತಿಳಿಸಿದೆ.

ರಷ್ಯಾವು ಉಕ್ರೇನ್ ಮೇಲೆ ಯುದ್ಧ ಆರಂಭಿಸಿದ ಬಳಿಕ ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸಿರುವ ಎರಡನೇ ಅತಿದೊಡ್ಡ ರಾಷ್ಟ್ರವಾಗಿದೆ. ಭಾರತವು ಶೇ 40ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ.

ರಷ್ಯಾವು ತೈಲ ಪೂರೈಕೆದಾರ ರಾಷ್ಟ್ರಗಳ ಪೈಕಿ ಅಗ್ರಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ಇರಾಕ್ ಮತ್ತು ಸೌದಿ ಅರೇಬಿಯಾ ಇದೆ.

ಕಚ್ಚಾ ತೈಲ ಪೂರೈಸುವ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ರಷ್ಯಾವು ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಪೂರೈಸುತ್ತದೆ. ನವೆಂಬರ್‌ನಲ್ಲಿ ಭಾರತದ ಕಚ್ಚಾ ತೈಲದ ಆಮದು 2022ರ ಜೂನ್ ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ವರದಿ ತಿಳಿಸಿದೆ.

ರಷ್ಯಾದಿಂದ ಚೀನಾ ಶೇ 47, ಭಾರತ ಶೇ 37, ಯುರೋಪಿಯನ್ ಒಕ್ಕೂಟ ಶೇ 6 ಹಾಗೂ ಟರ್ಕಿ ಶೇ 6ರಷ್ಟು ತೈಲವನ್ನು ಆಮದು ಮಾಡಿಕೊಳ್ಳುತ್ತವೆ.

ಉತ್ತಮ ಐಪಿಒ ಆಯ್ಕೆಗೆ ಸಪ್ತ ಸೂತ್ರ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಧುತ್ತೆಂದು ಒಂದೆರಡು ದಿನಗಳಲ್ಲಿ ಹಣ ಗಳಿಸಿಬಿಡಬಹುದು ಎನ್ನುವ ಉದ್ದೇಶದಿಂದ ಅನೇಕ ಹೂಡಿಕೆದಾರರು ಪೂರ್ವಾಪರ ಯೋಚಿಸದೆ ಐಪಿಒ (ಸಾರ್ವಜನಿಕ ಷೇರು ಹಂಚಿಕೆ) ಹೂಡಿಕೆಗೆ ಮುಂದಾಗುತ್ತಾರೆ. ನಿಮಗೆ ಗೊತ್ತಿರಲಿ, ಐಪಿಒ ಹೂಡಿಕೆ ಅಂದರೆ ಅದೃಷ್ಟ ಪರೀಕ್ಷೆ ಅಲ್ಲ. ಸರಿಯಾದ ಅಧ್ಯಯನದ ಮೂಲಕ ಉತ್ತಮ ಕಂಪನಿಗಳನ್ನು ಆಯ್ದುಕೊಂಡು ಐಪಿಒಗಳಲ್ಲಿ ಹಣ ಹಾಕಿದಾಗ ಮಾತ್ರ ನಿಮ್ಮ ಹೂಡಿಕೆ ಬೆಳೆಯುತ್ತದೆ. ಆತುರಾತುರವಾಗಿ ಸಿಕ್ಕಸಿಕ್ಕ ಕಂಪನಿಗಳ ಮೇಲೆ ಹೂಡಿಕೆಗೆ ಇಳಿದರೆ ಅದೃಷ್ಟ ಕೈಕೊಟ್ಟಾಗ ಕೈ ಸುಟ್ಟುಕೊಳ್ಳಬೇಕಾಗುತ್ತದೆ. ಬನ್ನಿ, ಉತ್ತಮ ಐಪಿಒ ಆಯ್ಕೆಗೆ ಅನುಸರಿಸಬೇಕಾದ ಸಪ್ತ ಸೂತ್ರಗಳ ಬಗ್ಗೆ ತಿಳಿಯೋಣ.

ಏನಿದು ಐಪಿಒ?: ಖಾಸಗಿ ಕಂಪನಿಯೊಂದು ಮೊದಲ ಬಾರಿಗೆ ಸಾರ್ವಜನಿಕರಿಗೆ ಷೇರುಗಳನ್ನು ನೀಡಿ ಬಂಡವಾಳ ಪಡೆದುಕೊಳ್ಳುವ ಪ್ರಕ್ರಿಯೆಗೆ ಐಪಿಒ ಎಂದು ಕರೆಯಲಾಗುತ್ತದೆ. ಐಪಿಒ ವೇಳೆ ಕಂಪನಿಯೊಂದು ತನ್ನ ಮಾಲೀಕತ್ವದ ಒಂದಷ್ಟು ಪಾಲನ್ನು ನೀಡಿ ದುಡ್ಡು ಸಂಗ್ರಹಿಸಿಕೊಳ್ಳುತ್ತದೆ. ಕಂಪನಿಯೊಂದು ಐಪಿಒ ನಡೆಸಿದಾಗ ನಮ್ಮ ನಿಮ್ಮಂತಹ ಜನಸಾಮಾನ್ಯರು ಆ ಕಂಪನಿಯ ಷೇರುಗಳನ್ನು ಖರೀದಿಸುವ ಅವಕಾಶ ಸಿಗುತ್ತದೆ.

ಇನಿಷಿಯಲ್ ಪಬ್ಲಿಕ್ ಆಫರಿಂಗ್ ಎನ್ನುವುದು ಐಪಿಒದ ವಿಸ್ತೃತ ರೂಪ. ಕನ್ನಡದಲ್ಲಿ ಇದನ್ನು ಸಾರ್ವಜನಿಕ ಷೇರು ಹಂಚಿಕೆ ಎಂದು ಕರೆಯಬಹುದು. ಐಪಿಒ ಪ್ರಕ್ರಿಯೆ ನಡೆದ ಬಳಿಕ ನಿರ್ದಿಷ್ಟ ಕಂಪನಿಯು ಷೇರು ಮಾರುಕಟ್ಟೆ ಪ್ರವೇಶಿಸಿ ಲಿಸ್ಟಿಂಗ್‌ನಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ. ಬ್ಯುಸಿನೆಸ್ ವಿಸ್ತರಿಸಲು, ಪ್ರವರ್ತಕರು ಹೆಚ್ಚು ಬಂಡವಾಳ ಸಂಗ್ರಹಿಸಲು, ಸಾಲ ಹಿಂದಿರುಗಿಸಲು, ಪ್ರತಿದಿನದ ಖರ್ಚು ನಿಭಾಯಿಸಲು ಕಂಪನಿಗಳು ಐಪಿಒ ಮಾಡುತ್ತವೆ.

ನೀವು ಯಾವುದೇ ಕಂಪನಿಯ ಐಪಿಒದಲ್ಲಿ ಹೂಡಿಕೆ ಮಾಡಿದರೆ ಅದರ ಲಾಭ- ನಷ್ಟ ಎರಡಕ್ಕೂ ಬಾಧ್ಯಸ್ಥರಾಗಿರುತ್ತೀರಿ. ಕಂಪನಿಯು ಬೆಳವಣಿಗೆ ಕಂಡರೆ ಲಾಭದ ಸಿಹಿ; ಹಿನ್ನಡೆ ಕಂಡರೆ ನಷ್ಟದ ಕಹಿ ನಿಮ್ಮದಾಗುತ್ತದೆ.

- **ಗೂಳಿ ಓಟವಿದೆಯೇ ನೋಡಿ:** ಈ ವರ್ಷದಲ್ಲಿ ಇಲ್ಲಿಯವರೆಗೆ ಸುಮಾರು 70 ಐಪಿಒಗಳು ಜರುಗಿವೆ. ಈ ಪೈಕಿ 56 ಕಂಪನಿಗಳು ಷೇರು ಮಾರುಕಟ್ಟೆ ಪ್ರವೇಶದ ದಿನ (ಲಿಸ್ಟಿಂಗ್ ಡೇ) ಸಕಾರಾತ್ಮಕ ಗಳಿಕೆ ಕೊಟ್ಟಿವೆ. ಇನ್ನುಳಿದ 14 ಕಂಪನಿಗಳು ಸಕಾರಾತ್ಮಕ ಗಳಿಕೆ ಕೊಟ್ಟಿಲ್ಲ. ಐಪಿಒದಲ್ಲಿ ನಿಗದಿ ಮಾಡಿದ್ದ ಬೆಲೆಗಿಂತ ಕಡಿಮೆ ಬೆಲೆಗೆ ಷೇರು ಮಾರುಕಟ್ಟೆಯಲ್ಲಿ ಲಿಸ್ಟ್ ಆಗಿವೆ.

ಅಯ್ಯೋ ಶೇ 70ರಷ್ಟು ಕಂಪನಿಗಳ ಐಪಿಒ ಲಾಭ ಕೊಟ್ಟಿವೆಯಲ್ಲ ಇನ್ಯಾಕೆ ಚಿಂತೆ ಅಂತ ಅಂದುಕೊಳ್ಳಬೇಡಿ. ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿರುವಾಗ ಹೆಚ್ಚಿನ ಐಪಿಒಗಳು ಸಕಾರಾತ್ಮಕ ಲಿಸ್ಟಿಂಗ್ ಕಂಡುಕೊಳ್ಳುತ್ತವೆ. ಯಾವ ಕಂಪನಿ, ಎಷ್ಟು ಲಾಭ ಗಳಿಸಿದೆ, ಅದರ ಭವಿಷ್ಯದ ಮುನ್ನೋಟ ಏನು ಹೀಗೆ ಹಲವು ಮಾನದಂಡಗಳ ಮಾರುಕಟ್ಟೆಯಲ್ಲಿ ಗೂಳಿ ಓಟವಿದ್ದಾಗ ಅಷ್ಟಾಗಿ ಲೆಕ್ಕಕ್ಕೆ ಬರುವುದಿಲ್ಲ. ಹಾಗಾಗಿ, ಯಾವುದೇ ಐಪಿಒಗೆ ಅರ್ಜಿ ಸಲ್ಲಿಸುವ ಮುನ್ನ ಮಾರುಕಟ್ಟೆಯ ಸ್ಥಿತಿ ಹೇಗಿದೆ ಎಂಬುದನ್ನು ನೋಡಿಕೊಳ್ಳಿ.

- **ಕಂಪನಿಯ ಸಾಲ ಎಷ್ಟಿದೆ ನೋಡಿ:** ಕಂಪನಿಯ ಬ್ಯಾಲೆನ್ಸ್ ಶೀಟ್‌ನಲ್ಲಿ ಸಾಲ ಎಷ್ಟಿದೆ ಎನ್ನುವ ಅಂಶ ನಿರ್ದಿಷ್ಟ ಐಪಿಒ ಯಶಸ್ಸು ಕಾಣುವುದೋ ಇಲ್ಲವೋ ಎನ್ನುವುದನ್ನು ನಿರ್ಧರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕಂಪನಿಯ ಬಳಿ ಇರುವ ಷೇರುಗಳಿಗೆ ಅನುಗುಣವಾಗಿ ಶೇಕಡಾವಾರು ಸಾಲ ಎಷ್ಟಿದೆ ಎನ್ನುವುದನ್ನು ಡೆಟ್ ಟು ಈಕ್ವಿಟಿ ರೇಷಿಯೊ (ಸಾಲ ಮತ್ತು ಷೇರುಗಳ ಅನುಪಾತ) ತಿಳಿಸುತ್ತದೆ. ಹಾಗಾಗಿ, ಐಪಿಒ ಮಾಡುತ್ತಿರುವ ಕಂಪನಿಯ ಸಾಲದ ಸ್ಥಿತಿಗತಿ ಬಗ್ಗೆ ತಿಳಿದುಕೊಳ್ಳಿ. ಹೆಚ್ಚು ಸಾಲ ಮಾಡಿದ್ದರೆ ಅಂತಹ ಕಂಪನಿಗಳ ಐಪಿಒಗಳಿಂದ ದೂರವಿರಿ.

- **ಕಂಪನಿ ಲಾಭದಲ್ಲಿದೆಯೇ ನೋಡಿ:** ಯಾವುದೇ ಕಂಪನಿಯ ಐಪಿಒ ಮೇಲೆ ಹೂಡಿಕೆ ಮಾಡುವಾಗ ಅದು ಲಾಭದಲ್ಲಿದೆಯೇ ಎಂದು ನೋಡಿಕೊಳ್ಳಿ. ನಿರ್ದಿಷ್ಟ ಕಂಪನಿಯ ಹೂಡಿಕೆ ಮೇಲಿನ ಗಳಿಕೆ (ರಿಟರ್ನ್ ಆನ್ ಈಕ್ವಿಟಿ) ಮತ್ತು ತೆರಿಗೆ ನಂತರದ ಗಳಿಕೆ ಉತ್ತಮವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಿ. ಐಪಿಒಗಳಲ್ಲಿ ಉತ್ತಮ ಗಳಿಕೆ ಕೊಡುವ ಬಹುತೇಕ ಕಂಪನಿಗಳ ರಿಟರ್ನ್ ಆನ್ ಈಕ್ವಿಟಿ ಶೇ 20ಕ್ಕಿಂತ ಹೆಚ್ಚಿರುತ್ತದೆ. ತೆರಿಗೆ ನಂತರದ ಗಳಿಕೆ ಶೇ 11ಕ್ಕಿಂತ ಜಾಸ್ತಿ ಇರುತ್ತದೆ ಎನ್ನುವುದನ್ನು ಹಿಂದಿನ ಅಂಕಿ-ಅಂಶಗಳು ಹೇಳುತ್ತವೆ.

- **ಬ್ರ್ಯಾಂಡ್ ಜನಪ್ರಿಯತೆ:** ಕೇವಲ ಬ್ರ್ಯಾಂಡ್‌ನ ಜನಪ್ರಿಯತೆಯನ್ನು ಆಧಾರವಾಗಿಟ್ಟುಕೊಂಡು ಐಪಿಒಗಳಲ್ಲಿ ಹೂಡಿಕೆ ಮಾಡಬೇಡಿ. ಪೇಟಿಎಂ, ಹುಂಡೈ, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್, ಎಲ್‌ಐಸಿಯಂತಹ ಹೆಸರಾಂತ ಕಂಪನಿಗಳು ಐಪಿಒ ನಡೆಸಿ ಷೇರು ಮಾರುಕಟ್ಟೆ ಪ್ರವೇಶಿಸುವಾಗ (ಲಿಸ್ಟಿಂಗ್ ಡೇ) ಹೂಡಿಕೆದಾರರ ದುಡ್ಡು ಕರಗಿಸಿವೆ. ಕಂಪನಿ ಹೆಸರಾಂತ ಬ್ರ್ಯಾಂಡ್‌ಗೆ ಸೇರಿದೆ ಎಂದು ಐಪಿಒಗೆ ಅರ್ಜಿ ಹಾಕಲು ದೌಡಾಯಿಸುವ ಬದಲು ನಿರ್ದಿಷ್ಟ ಕಂಪನಿಯ ಭವಿಷ್ಯದ ಮುನ್ನೋಟ ಮತ್ತು ಗಳಿಕೆ ಸಾಮರ್ಥ್ಯ ಎಷ್ಟಿದೆ ಎನ್ನುವುದನ್ನು ಅರಿತು ಮುನ್ನಡೆಯುವುದು ತುಂಬಾ ಮುಖ್ಯ.

- **ಗೆಲ್ಲುವ ಐಪಿಒ ಯಾವುದು?:** ಐಪಿಒ ಗಾತ್ರ ದೊಡ್ಡದಿದ್ದರೆ ಆ ಐಪಿಒ ಯಶಸ್ಸು ಕಾಣುತ್ತದೆ ಎಂದು ಅನೇಕರು ನಂಬುತ್ತಾರೆ. ಆದರೆ, ಈ ಮಾತು ಪೂರ್ಣಸತ್ಯವಲ್ಲ. ₹10 ಸಾವಿರ ಕೋಟಿಗಿಂತ ಹೆಚ್ಚಿನ ಗಾತ್ರದ ಹಲವು ಐಪಿಒಗಳು ಷೇರು ಮಾರುಕಟ್ಟೆ ಪ್ರವೇಶದ ದಿನವೇ ಮುಗ್ಗರಿಸಿವೆ. ಇತ್ತೀಚೆಗೆ ₹10 ಸಾವಿರ ಕೋಟಿಯ ಹುಂಡೈ ಐಪಿಒ ಆಯಿತು. ಆದರೆ, ಮಾರುಕಟ್ಟೆ ಪ್ರವೇಶದ ವೇಳೆಯೇ ಷೇರಿನ ಬೆಲೆ ಶೇ 7ರಷ್ಟು ಕುಸಿಯಿತು. ಹಾಗೆಂದ ಮಾತ್ರಕ್ಕೆ ದೊಡ್ಡ ಗಾತ್ರದ ಐಪಿಒ ನಡೆಸುವ ಎಲ್ಲಾ ಕಂಪನಿಗಳು ಷೇರು ಮಾರುಕಟ್ಟೆ ಪ್ರವೇಶದ ದಿನ ಕುಸಿಯುತ್ತವೆ ಎಂದಲ್ಲ.

₹11 ಸಾವಿರ ಕೋಟಿ ಗಾತ್ರದ ಸ್ವಿಗ್ಗಿ ಐಪಿಒ ಶೇ 7.69ರಷ್ಟು ಗಳಿಕೆಯೊಂದಿಗೆ ಷೇರು ಮಾರುಕಟ್ಟೆ ಪ್ರವೇಶಿಸಿತು. ಆದ್ದರಿಂದ ಐಪಿಒ ಹೂಡಿಕೆ ಮಾಡುವಾಗ ಹೂಡಿಕೆ ಗಾತ್ರವನ್ನಷ್ಟೇ ಮಾನದಂಡವಾಗಿ ಪರಿಗಣಿಸಿ ಹೂಡಿಕೆ ಮಾಡಬಾರದು.

- **ಐಪಿಒ ಯಶಸ್ಸಿನಲ್ಲಿ ಅದರ ಉದ್ದೇಶ ಮುಖ್ಯ:** ಐಪಿಒಗಳಲ್ಲಿ ಆಫರ್ ಫಾರ್ ಸೇಲ್ (ಒಎಫ್‌ಎಸ್) ಮತ್ತು ಫ್ರೆಶ್ ಇಶ್ಯೂಗಳಿರುತ್ತವೆ. ಆಫರ್ ಫಾರ್ ಸೇಲ್ ಅಂದರೆ ಕಂಪನಿಯಲ್ಲಿನ ಹಾಲಿ ಷೇರುದಾರರು ಬಂಡವಾಳ ಸಂಗ್ರಹಕ್ಕಾಗಿ ತಮ್ಮ ಷೇರುಗಳನ್ನು ಮಾರಾಟ ಮಾಡುವ ಪ್ರಕ್ರಿಯೆ. ಆಫರ್ ಫಾರ್ ಸೇಲ್ ಐಪಿಒಗಳನ್ನು ಹೂಡಿಕೆದಾರರು ಅಷ್ಟಾಗಿ ಒಪ್ಪುವುದಿಲ್ಲ. ಆಫರ್ ಫಾರ್ ಸೇಲ್‌ನಿಂದ ಕಂಪನಿಯವರಿಗೆ ಲಾಭವಾಗುತ್ತದೆ. ಹೂಡಿಕೆದಾರರಿಗೆ ಅಲ್ಲ ಎಂಬ ಭಾವನೆ ಇದೆ.

ಇನ್ನು ಐಪಿಒದಲ್ಲಿ ಫ್ರೆಶ್ ಇಶ್ಯೂ ಅಂದರೆ ಕಂಪನಿ ಬಂಡವಾಳ ಸಂಗ್ರಹಿಸಲು ಹೊಸ ಷೇರುಗಳನ್ನು ಮೊದಲ ಬಾರಿಗೆ ಮಾರಾಟ ಮಾಡುವ ಪ್ರಕ್ರಿಯೆಯಾಗಿದೆ. ಸಾಮಾನ್ಯವಾಗಿ ಹೂಡಿಕೆದಾರರು ಫ್ರೆಶ್ ಇಶ್ಯೂಗಳನ್ನು ಇಷ್ಟಪಡುತ್ತಾರೆ.

ವಾಸ್ತವದಲ್ಲಿ ಆಫರ್ ಫಾರ್ ಸೇಲ್‌ನಲ್ಲಿ ಅಂತಹ ದೋಷವಿಲ್ಲದಿದ್ದರೂ ಅದನ್ನು ಜನ ಅಷ್ಟಾಗಿ ಒಪ್ಪದ ಕಾರಣ ಐಪಿಒ ಮೇಲೆ ಅದು ಪರಿಣಾಮ ಬೀರುತ್ತದೆ. ಈ ವರ್ಷದಲ್ಲಿ ಇಲ್ಲಿಯವರೆಗೆ ನಡೆದ ಐಪಿಒಗಳ ಪೈಕಿ ಕೆಲ ಐಪಿಒಗಳು ಮಾತ್ರ ಆಫರ್ ಫಾರ್ ಸೇಲ್‌ಗೆ ಹೋಗಿವೆ. ಹಾಗಾಗಿ, ಆಫರ್ ಫಾರ್ ಸೇಲ್ ಪಾಲು ಹೆಚ್ಚಿರುವ ಐಪಿಒಗಳನ್ನು ಹೂಡಿಕೆಗೆ ಪರಿಗಣಿಸದಿರುವುದು ಒಳಿತು.

- **ಎಷ್ಟು ಮಂದಿ ಹೂಡಿಕೆ ಮಾಡಿದ್ದಾರೆ?:** ಐಪಿಒ ದಿನಾಂಕ ಘೋಷಣೆಯಾದ ಮೊದಲ ದಿನವೇ ಅದರ ಬಿಡ್ಡಿಂಗ್‌ಗೆ ಮುಗಿಬೀಳಬೇಡಿ. ಐಪಿಒಗಳಿಗೆ ಬಿಡ್ಡಿಂಗ್ ಸಲ್ಲಿಸಲು ಸಾಮಾನ್ಯವಾಗಿ 3 ದಿನಗಳ ಸಮಯಾವಕಾಶ ಇರುತ್ತದೆ.

ಮೊದಲ ದಿನ ಎಷ್ಟು ಮಂದಿ ಐಪಿಒಗೆ ಆಸಕ್ತಿ ತೋರಿಸಿದ್ದಾರೆ ಎನ್ನುವ ಮಾಹಿತಿ ಸಿಗುತ್ತದೆ. ನೀವು ಹೂಡಿಕೆ ಮಾಡಬೇಕು, ಬೇಡವೋ ಎನ್ನುವುದನ್ನು ತೀರ್ಮಾನಿಸಲು ಈ ಮಾಹಿತಿ ಬಳಸಿಕೊಳ್ಳಿ. ಸಾಮಾನ್ಯವಾಗಿ ಒಂದು ಐಪಿಒ 60 ಪಟ್ಟು ಅಥವಾ ಅದಕ್ಕಿಂತ ಜಾಸ್ತಿ ಸಬ್ ಸ್ಕ್ರೈಬ್ ಆಗಿದ್ದರೆ ಆ ಐಪಿಒ ಷೇರುಪೇಟೆ ಪ್ರವೇಶದ ದಿನ ಒಳ್ಳೆಯ ಗಳಿಕೆ ಕೊಡುವ ಸಾಧ್ಯತೆ ಹೆಚ್ಚು.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ನಾಲ್ಕನೇ ವಾರವೂ ಜಿಗಿದ ಷೇರುಪೇಟೆ



ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರವೂ ಗಳಿಕೆ ಕಂಡಿವೆ. ಡಿಸೆಂಬರ್ 13ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಅಲ್ಪ ಮೊತ್ತದ ಗಳಿಕೆ ದಾಖಲಿಸಿವೆ. 82,133 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.52ರಷ್ಟು ಗಳಿಸಿಕೊಂಡಿದೆ. 24,768 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 0.37ರಷ್ಟು ಜಿಗಿದಿದೆ.

ನವೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರದ ಪ್ರಮಾಣದಲ್ಲಿ ಚೇತರಿಕೆ, ಕೈಗಾರಿಕೆ ಉತ್ಪಾದನೆಯಲ್ಲಿ ಹೆಚ್ಚಳ, ವರ್ಷಾಂತ್ಯದಲ್ಲಿ ಖರೀದಿ ಭರಾಟೆ ಹೆಚ್ಚಾಗಬಹುದೆಂಬ ವಿಶ್ವಾಸ, ಅಮೆರಿಕದಿಂದ ಮಾಹಿತಿ ತಂತ್ರಜ್ಞಾನ ವಲಯದ ಮೇಲೆ ಹೂಡಿಕೆ ಹೆಚ್ಚಳ ನಿರೀಕ್ಷೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಏರಿಕೆಗೆ ಸಕಾರಾತ್ಮಕ ಕೊಡುಗೆ ನೀಡಿವೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 5.96, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.88, ಎನರ್ಜಿ ಶೇ 1.71, ಎಫ್‌ಎಂಸಿಜಿ ಶೇ 1.52, ಅನಿಲ ಮತ್ತು ತೈಲ ಶೇ 1.43, ಫಾರ್ಮಾ ಶೇ 1.24 ಮತ್ತು ಆಟೊ ವಲಯವು ಶೇ 0.78ರಷ್ಟು ಕುಸಿದಿವೆ.

ನಿಫ್ಟಿ ಮಾಹಿತಿ ತಂತ್ರಜ್ಞಾನ ಶೇ 2.86, ರಿಯಲ್ ಎಸ್ಟೇಟ್ ಶೇ 1.04, ಫೈನಾನ್ಸ್ ಶೇ 0.72, ಲೋಹ ಶೇ 0.45 ಮತ್ತು ಬ್ಯಾಂಕ್ ನಿಫ್ಟಿ ಶೇ 0.14ರಷ್ಟು ಗಳಿಸಿಕೊಂಡಿವೆ.

ಏರಿಕೆ–ಇಳಿಕೆ: ನಿಫ್ಟಿ 50 ಸೂಚ್ಯಂಕದಲ್ಲಿ ಏರ್‌ಟೆಲ್ ಶೇ 5, ಬಜಾಜ್ ಫೈನಾನ್ಸ್ ಶೇ 5, ವಿಪ್ರೊ ಶೇ 4, ಇನ್ಫೊಸಿಸ್ ಶೇ 4 ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 3ರಷ್ಟು ಗಳಿಸಿಕೊಂಡಿವೆ. ಟಾಟಾ ಕನ್ಸ್ಯೂಮರ್ ಪ್ರಾಡೆಕ್ಟ್ಸ್ ಶೇ 4, ಎಚ್‌ಸಿಎಲ್ ಶೇ 4, ಎನ್‌ಟಿಪಿಸಿ ಶೇ 3, ಟಾಟಾ ಮೋಟರ್ಸ್ ಶೇ 3 ಮತ್ತು ಎಕ್ಸಿಸ್ ಬ್ಯಾಂಕ್ ಶೇ 3ರಷ್ಟು ಕುಸಿದಿವೆ.

ಮುನ್ನೋಟ: ಡಿಸೆಂಬರ್ 17 ಮತ್ತು 18ರಂದು ಅಮೆರಿಕದ ಮುಕ್ತ ಮಾರುಕಟ್ಟೆ ಸಮಿತಿ ಸಭೆ ನಡೆಯಲಿದೆ. ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಲಿದೆ ಎಂದು ಮಾರುಕಟ್ಟೆ ತಜ್ಞರು ನಿರೀಕ್ಷೆ ಮಾಡಿದ್ದಾರೆ.

ಎಫ್‌ಪಿಐ: ₹22 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ಡಿಸೆಂಬರ್‌ನ ಮೊದಲ ಎರಡು ವಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹22,766 ಕೋಟಿ ಹೂಡಿಕೆ ಮಾಡಿದ್ದಾರೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಲಿದೆ ಎಂಬ ಭರವಸೆ ಹೂಡಿಕೆದಾರರಲ್ಲಿ ಮೂಡಿದೆ. ಹಾಗಾಗಿ, ದೇಶದ ಮಾರುಕಟ್ಟೆಯಲ್ಲಿ ಬಂಡವಾಳದ ಒಳ ಹರಿವಿನ ಪ್ರಮಾಣ ಹೆಚ್ಚಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ₹57,724 ಕೋಟಿ ಹೂಡಿಕೆಯಾಗಿದ್ದು, ದಾಖಲೆ ನಿರ್ಮಿಸಿತ್ತು. ಅಕ್ಟೋಬರ್‌ನಲ್ಲಿ ₹94,017 ಕೋಟಿ ಹಾಗೂ ನವೆಂಬರ್‌ನಲ್ಲಿ ₹21,612 ಕೋಟಿ ಬಂಡವಾಳ ಹಿಂಪಡೆಯಲಾಗಿತ್ತು.

‘ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಒಳಹರಿವು ಹೆಚ್ಚಳದ ಹಿಂದೆ ಹಲವು ಕಾರಣಗಳು ಬೆಸೆದುಕೊಂಡಿವೆ. ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಣದುಬ್ಬರ ನಿಯಂತ್ರಣ ಹಾಗೂ ಬಡ್ಡಿದರ ಕಡಿತ ಸಂಬಂಧ ಹಲವು ಕ್ರಮಕೈಗೊಳ್ಳುವ ನಿರೀಕ್ಷೆಯಿದೆ. ಇದು ಒಳಹರಿವು ಹೆಚ್ಚಳಕ್ಕೆ ನೆರವಾಗಿದೆ’ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಒಳನಾಡು ಜಲಮಾರ್ಗ ಬಳಕೆಗೆ ಉತ್ತೇಜನ: ಕೇಂದ್ರ

‘ಜಲವಾಹಕ’ ಯೋಜನೆಗೆ ಚಾಲನೆ



ಕೋಲ್ಕತ್ತದಲ್ಲಿ ಒಳನಾಡು ಜಲಮಾರ್ಗದಲ್ಲಿ ಸರಕು ಸಾಗಣೆ ಹಡಗುಗಳ ಸಂಚಾರಕ್ಕೆ ಕೇಂದ್ರ ಹಡಗು, ಬಂದರು ಮತ್ತು ಜಲಮಾರ್ಗ ಸಚಿವ ಸರ್ವಾನಂದ ಸೋನೊವಾಲ್ ಭಾನುವಾರ ಚಾಲನೆ ನೀಡಿದರು ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ದೇಶದ ಒಳನಾಡು ಜಲಮಾರ್ಗಗಳಲ್ಲಿ ಸರಕು ಸಾಗಣೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಭಾನುವಾರ ‘ಜಲವಾಹಕ’ ಯೋಜನೆಗೆ ಚಾಲನೆ ನೀಡಿದೆ.

ರಾಷ್ಟ್ರೀಯ ಜಲಮಾರ್ಗಗಳಾದ ಗಂಗಾ, ಬ್ರಹ್ಮಪುತ್ರ ಹಾಗೂ ಬಾರಕ್ ನದಿ ವ್ಯಾಪ್ತಿಯಲ್ಲಿ ಸುಸ್ಥಿರ ಹಾಗೂ ಕಡಿಮೆ ಖರ್ಚಿನಲ್ಲಿ ಹಡಗುಗಳ ಮೂಲಕ ಸರಕು ಸಾಗಣೆಗೆ ಪ್ರೋತ್ಸಾಹ ನೀಡುವುದು ಇದರ ಉದ್ದೇಶವಾಗಿದೆ.

ಮೂರು ಸರಕು ಸಾಗಣೆ ಹಡಗುಗಳ ಸಂಚಾರಕ್ಕೆ ಚಾಲನೆ ನೀಡಿದ ಕೇಂದ್ರ ಹಡಗು, ಬಂದರು ಮತ್ತು ಜಲಮಾರ್ಗ ಸಚಿವ ಸರ್ವಾನಂದ ಸೋನೊವಾಲ್ ಮಾತನಾಡಿ, ‘ಸಾಗಣೆ ವೆಚ್ಚ ತಗ್ಗಿಸುವ ಜೊತೆಗೆ ರಸ್ತೆ ಮತ್ತು ರೈಲು ಸಾಗಣೆಯಲ್ಲಿನ ದಟ್ಟಣೆ ಕಡಿಮೆ ಮಾಡುವುದೇ ಈ ಯೋಜನೆ ಗುರಿಯಾಗಿದೆ’ ಎಂದರು.

ಈ ಜಲಮಾರ್ಗದಲ್ಲಿ 300 ಕಿ.ಮೀ. ಗಿಂತಲೂ ಹೆಚ್ಚು ದೂರದವರೆಗೆ ಸರಕುಗಳ ಸಾಗಣೆಯ ಒಟ್ಟು ವೆಚ್ಚದ ಪೈಕಿ ಶೇ 30ರಷ್ಟು ಹಣವನ್ನು ಯೋಜನೆಯಡಿ ಸರ್ಕಾರವೇ ಭರಿಸಲಿದೆ. ಯೋಜನೆಯು ಮೂರು ವರ್ಷಗಳ ವರೆಗೆ ಜಾರಿಯಲ್ಲಿ ಇರಲಿದೆ ಎಂದು ತಿಳಿಸಿದರು.

ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ (ಐಡಬ್ಲ್ಯುಎಐ), ಒಳನಾಡು ಮತ್ತು ಕರಾವಳಿ ಶಿಪ್ಪಿಂಗ್ ಕಂಪನಿಯಿಂದ ಜಂಟಿಯಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಕೋಲ್ಕತ್ತ- ಪಟ್ನಾ- ವಾರಾಣಸಿ ಮತ್ತು ಕೋಲ್ಕತ್ತ-ಪಾಂಡು (ಗುವಾಹಟಿ) ಮಾರ್ಗದಲ್ಲಿ ಹಡಗುಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಾರತದಲ್ಲಿ ಒಳನಾಡು ಜಲಮಾರ್ಗದ ವ್ಯಾಪ್ತಿಯು 20,236 ಕಿ.ಮೀ.ನಷ್ಟಿದೆ. ಅಮೆರಿಕ ಮತ್ತು ಚೀನಾಕ್ಕೆ ಹೋಲಿಸಿದರೆ ಈ ಮಾರ್ಗದ ಬಳಕೆಯು ಕಡಿಮೆಯಿದೆ.

ಅಲ್ಟ್ರಾಟೆಕ್ ಸಿಮೆಂಟ್ ಒಳನಾಡು ಜಲಮಾರ್ಗ ಬಳಸಿದ ಮೊದಲ ಸಿಮೆಂಟ್ ಕಂಪನಿ ಎಂಬ ಹೆಗ್ಗಳಿಕೆ ಪಡೆದಿದೆ. 2023ರಲ್ಲಿ ಈ ಕಂಪನಿಯು ಒಡಿಶಾದ ಪಾರದೀಪ್ ಬಂದರಿನಿಂದ ಗುಜರಾತ್‌ನ ಅಮ್ರೇಲಿಯಲ್ಲಿ ಇರುವ ತನ್ನ ಸಿಮೆಂಟ್ ತಯಾರಿಕಾ ಘಟಕಕ್ಕೆ ಫಾಸ್ಫೋಜಿಪ್ಸಂ ಸಾಗಿಸಲು ಜಲಮಾರ್ಗ ಬಳಸಿದೆ.

ಬಾಂಗ್ಲಾ: 3,500ಕ್ಕೂ ಅಧಿಕ ಮಂದಿ ಕಣ್ಮರೆ

ಢಾಕಾ (ಪಿಟಿಐ): ‘ದೇಶದಲ್ಲಿ ಜನರು ಒತ್ತಾಯಪೂರ್ವಕವಾಗಿ ಕಣ್ಮರೆ ಆಗಿರುವ ಘಟನೆಗಳ ಹಿಂದೆ, ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಕೈವಾಡವಿದೆ’ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ರಚನೆ ಮಾಡಿದ್ದ ತನಿಖಾ ಆಯೋಗವು ತನ್ನ ವರದಿಯಲ್ಲಿ ಹೇಳಿದೆ.

‘ದೇಶದಲ್ಲಿ 3,500ಕ್ಕೂ ಅಧಿಕ ಮಂದಿ ಒತ್ತಾಯಪೂರ್ವಕವಾಗಿ ಕಣ್ಮರೆಯಾಗಿದ್ದಾರೆ’ ಎಂದು ಆಯೋಗವು ಅಂದಾಜಿಸಿದೆ.

ಮಧ್ಯಂತರ ಸರ್ಕಾರದ ಮುಖ್ಯಸ್ಥ, ಮಹಮ್ಮದ್ ಯೂನುಸ್ ಅವರ ಕಚೇರಿಯ ಮಾಧ್ಯಮ ವಿಭಾಗವು ಈ ಕುರಿತು ಹೇಳಿಕೆ ನೀಡಿದೆ. ಈ ಕೃತ್ಯಗಳ ಹಿಂದೆ, ಸದ್ಯ ಪಲಾಯನ ಮಾಡಿರುವ ರಕ್ಷಣಾ ಸಲಹೆಗಾರ ಮೇಜರ್ ಜನರಲ್ (ನಿವೃತ್ತ) ತಾರಿಖ್ ಅಹ್ಮದ್ ಸಿದ್ದೀಕ್, ಹಿರಿಯ ಪೊಲೀಸ್ ಅಧಿಕಾರಿ ಮುನೀರುಲ್ ಇಸ್ಲಾಂ ಸೇರಿದಂತೆ ಹಲವು ಅಧಿಕಾರಿಗಳ ಪಾತ್ರವೂ ಇರುವುದು ಸಾಬೀತಾಗಿದೆ ಎಂದು ಹೇಳಿದೆ.

ವಿಪಕ್ಷದ ಸಲಹೆಗೆ ಒಲವು ತೋರದ ಹಂಗಾಮಿ ಅಧ್ಯಕ್ಷ ಹಾನ್

‘ರಾಷ್ಟ್ರೀಯ ಸರ್ಕಾರ’ ರಚನೆಗೆ ಪ್ರಸ್ತಾವ

ಸೋಲ್(ಎಪಿ): ದೇಶದಲ್ಲಿ ಸೇನಾಡಳಿತ ಹೇರಿದ್ದ ಯೂನ್ ಸುಕ್ ಯೋಲ್ ಅವರಿಗೆ ವಾಗ್ದಂಡನೆ ವಿಧಿಸಿ, ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಿದ ಬೆನ್ನಲ್ಲೇ, ಸುಗಮ ಆಡಳಿತಕ್ಕಾಗಿ ಸರ್ಕಾರದೊಂದಿಗೆ ಕೈಜೋಡಿಸಲು ತಾನು ಸಿದ್ಧ ಎಂದು ದಕ್ಷಿಣ ಕೊರಿಯಾದ ವಿರೋಧ ಪಕ್ಷವೊಂದು ಭಾನುವಾರ ಹೇಳಿದೆ.

ಸಂಸತ್‌ನಲ್ಲಿ (ನ್ಯಾಷನಲ್ ಅಸೆಂಬ್ಲಿ) ಅಧಿಕ ಸ್ಥಾನ ಹೊಂದಿರುವ ಪ್ರಮುಖ ಪ್ರತಿಪಕ್ಷ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ನಾಯಕ ಲಿ ಜೊ–ಮ್ಯುಂಗ್ ಅವರು ‘ರಾಷ್ಟ್ರೀಯ ಸರ್ಕಾರ’ ರಚಿಸಬೇಕು ಎಂಬ ಪ್ರಸ್ತಾವ ಮುಂದಿಟ್ಟಿದ್ದಾರೆ.

‘ಬದಲಾದ ವ್ಯವಸ್ಥೆಯಲ್ಲಿ ಸ್ಥಿರ ಸರ್ಕಾರಕ್ಕಾಗಿ ಸಂಸತ್ ಒಟ್ಟಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಅಲ್ಲದೆ, ಹಂಗಾಮಿ ಅಧ್ಯಕ್ಷ ಹಾನ್ ಡಕ್–ಸೂ ಅವರ ವಿರುದ್ಧ ನಮ್ಮ ಪಕ್ಷ ವಾಗ್ದಂಡನೆ ಗೊತ್ತುವಳಿ ಮಂಡನೆ ಮಾಡುವುದಿಲ್ಲ’ ಎಂದೂ ಲಿ ಹೇಳಿದ್ದಾರೆ.

‘ಉದ್ದೇಶಿತ ‘ರಾಷ್ಟ್ರೀಯ ಸರ್ಕಾರ’ವು ದೇಶ ಎದುರಿಸುತ್ತಿರುವ ಸಂಕಷ್ಟ ನಿವಾರಣೆ ಹಾಗೂ ಅಂತರ-ರಾಷ್ಟ್ರೀಯ ಸಮುದಾಯದ ವಿಶ್ವಾಸ ಮರುಸ್ಥಾಪನೆಗೆ ಶ್ರಮಿಸಲಿದೆ’ ಎಂದು ಅವರು ತಿಳಿಸಿದ್ದಾರೆ.

ಆದರೆ, ಲಿ ಅವರ ಈ ಪ್ರಸ್ತಾವ ಕಾರ್ಯಗತವಾಗಲಿದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಸಂಸತ್ ಸ್ಪೀಕರ್ ಅವರೊಂದಿಗಿನ ಸಭೆ ವೇಳೆ ಹಂಗಾಮಿ ಅಧ್ಯಕ್ಷ ಹಾನ್ ಡಕ್–ಸೂ ಅವರು ಲಿ ಮುಂದಿಟ್ಟಿರುವ ಪ್ರಸ್ತಾವವನ್ನು ಪ್ರಸ್ತಾಪಿಸಿದ್ದಾರೆ. ಆದರೆ, ‘ರಾಷ್ಟ್ರೀಯ ಸರ್ಕಾರ’ ರಚನೆಗೆ ಸಂಬಂಧಿಸಿ ಒಲವು ವ್ಯಕ್ತಪಡಿಸಿಲ್ಲ ಎಂದು ಮೂಲಗಳು ಹೇಳಿವೆ.

ಪದಚ್ಯುತಿ ಪ್ರಕರಣ: ಇಂದು ವಿಚಾರಣೆ

ಯೂನ್ ಸುಕ್ ಯೋಲ್ ಅವರನ್ನು ಪದಚ್ಯುತಿಗೊಳಿಸಿರುವುದಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಸಾಂವಿಧಾನಿಕ ಕೋರ್ಟ್ ಸೋಮವಾರ (ಡಿ.16) ನಡೆಸಲಿದೆ. ಈ ಕುರಿತ ತೀರ್ಪನ್ನು 180 ದಿನಗಳ ಒಳಗಾಗಿ ಕೋರ್ಟ್ ಪ್ರಕಟಿಸಬೇಕು.

ಒಂದು ವೇಳೆ, ಪದಚ್ಯುತಿಯನ್ನು ಎತ್ತಿ ಹಿಡಿದು ತೀರ್ಪು ನೀಡಿದಲ್ಲಿ, ಆರು ತಿಂಗಳ ಒಳಗಾಗಿ ಹೊಸ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಬೇಕು.

ಮನವಿ: ಪ್ರಸಕ್ತ ರಾಜಕೀಯ ಬೆಳವಣಿಗೆ ಕುರಿತು ಸುದ್ದಿವಾಹಿನಿ ಜೊತೆ ಮಾತನಾಡಿದ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ನಾಯಕ ಲಿ ಜೊ–ಮ್ಯುಂಗ್, ‘ಯೋಲ್ ಪದಚ್ಯುತಿ ಕುರಿತು ಸಾಂವಿಧಾನಿಕ ಕೋರ್ಟ್ ಶೀಘ್ರವೇ ತನ್ನ ನಿರ್ಣಯ ಪ್ರಕಟಿಸಬೇಕು. ದೇಶದಲ್ಲಿ ಸೃಷ್ಟಿಯಾಗಿರುವ ಗೊಂದಲ ಹಾಗೂ ಜನರ ಸಂಕಷ್ಟ ನಿವಾರಿಸಲು ಇದೊಂದೇ ನಮ್ಮ ಮುಂದಿರುವ ಮಾರ್ಗ’ ಎಂದು ಹೇಳಿದ್ದಾರೆ.

ಬೈಡನ್ ಜೊತೆ ಹಾನ್ ಚರ್ಚೆ



ಹಾನ್ ಡಕ್–ಸೂ

ಹಂಗಾಮಿ ಅಧ್ಯಕ್ಷ ಹಾನ್ ಡಕ್–ಸೂ ಅವರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ದೂರವಾಣಿ ಮೂಲಕ ಭಾನುವಾರ ಮಾತನಾಡಿದ್ದಾರೆ.

ದೇಶದಲ್ಲಿನ ರಾಜಕೀಯ ಪರಿಸ್ಥಿತಿ ಹಾಗೂ ಉತ್ತರ ಕೊರಿಯಾದ ಅಣ್ವಸ್ತ್ರ ಯೋಜನೆ, ಪ್ರಾದೇಶಿಕ ಭದ್ರತೆಗೆ ಎದುರಾಗಿರುವ ಸವಾಲುಗಳ ಕುರಿತು ಚರ್ಚಿಸಿದರು ಎಂದು ಮೂಲಗಳು ಹೇಳಿವೆ.

ನವದೆಹಲಿ ಕ್ಷೇತ್ರದಿಂದ ಕೇಜ್ರಿವಾಲ್, ಕಾಲ್ಕಾಜಿ ಕ್ಷೇತ್ರದಿಂದ ಮುಖ್ಯಮಂತ್ರಿ ಆತಿಶಿ ಸ್ಪರ್ಧೆ

ಎಎಪಿ: 70 ಅಭ್ಯರ್ಥಿಗಳ ಘೋಷಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಚುನಾವಣೆ ದಿನಾಂಕ: ಮುಂದಿನ ವಾರ ಘೋಷಣೆ ಸಾಧ್ಯತೆ
- 'ದೆಹಲಿ ನ್ಯಾಯ ಯಾತ್ರಾ' ನೆಚ್ಚಿಕೊಂಡಿರುವ ಕಾಂಗ್ರೆಸ್
- 'ಪರಿವರ್ತನೆ ಯಾತ್ರೆ' ಮುಂದೂಡಿರುವ ಬಿಜೆಪಿ

ನವದೆಹಲಿ: ಆಡಳಿತಾರೂಢ ಆಮ್ ಆದ್ಮಿ ಪಕ್ಷ (ಎಎಪಿ) ಹಾಗೂ ವಿಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ದೆಹಲಿ ವಿಧಾನಸಭೆ ಚುನಾವಣೆಗೆ ಸಿದ್ಧತೆಯನ್ನು ಚುರುಕುಗೊಳಿಸಿದ್ದು, ಅಭ್ಯರ್ಥಿಗಳ ಘೋಷಣೆಯೂ ಮುಂದುವರಿದಿದೆ.

ಹೊಸ ಸರ್ಕಾರದ ಆಯ್ಕೆಗೆ ಎರಡು ತಿಂಗಳಷ್ಟು ಬಾಕಿ ಇದೆಯಾದರೂ ರಾಷ್ಟ್ರ ರಾಜಧಾನಿಯಲ್ಲಿ ಚಳಿ ನಡುವೆ ಚುನಾವಣೆಯ ಕಾವು ಈಗಾಗಲೇ ಏರತೊಡಗಿದೆ.



ಮಹತ್ವದ ಬೆಳವಣಿಗೆಯಲ್ಲಿ, ದೆಹಲಿಯ ಎಲ್ಲ 70 ಕ್ಷೇತ್ರಗಳಿಗೂ ತನ್ನ ಅಭ್ಯರ್ಥಿಗಳನ್ನು ಎಎಪಿ ಘೋಷಿಸಿದೆ. ಈ ಮೂಲಕ, ಕಾಂಗ್ರೆಸ್ ಜತೆ ಮೈತ್ರಿ ಕುರಿತು ಹಬ್ಬಿದ್ದ ಊಹಾಪೋಹಗಳಿಗೆ ತೆರೆ ಎಳೆದಿದೆ.

ಎಎಪಿ, 38 ಅಭ್ಯರ್ಥಿಗಳ ಹೆಸರು ಇರುವ ನಾಲ್ಕನೇ ಮತ್ತು ಕೊನೆಯ ಪಟ್ಟಿಯನ್ನು ಘೋಷಿಸಿದೆ. ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನವದೆಹಲಿ ಕ್ಷೇತ್ರದಿಂದ ಪುನರಾಯ್ಕೆ ಬಯಸಿದ್ದರೆ, ಮುಖ್ಯಮಂತ್ರಿ ಆತಿಶಿ ಅವರು ಕಾಲ್ಕಾಜಿ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ.

21 ಹಾಲಿ ಶಾಸಕರಿಗೆ ಮಣೆ ಹಾಕಿದೆ. ಮೂರು ಕ್ಷೇತ್ರಗಳ ಶಾಸಕರು ಪಕ್ಷ ತೊರೆದಿರುವ ಕಾರಣ, ಅಲ್ಲಿ ಹೊಸಬರಿಗೆ ಟಿಕೆಟ್ ನೀಡಿದೆ. ಕೆಲ ಶಾಸಕರ ಬದಲಾಗಿ ಅವರ ಕುಟುಂಬ ಸದಸ್ಯರನ್ನು ಕಣಕ್ಕಿಳಿಸಿರುವ ಎಎಪಿ, 10-12 ಜನ ಪಕ್ಷಾಂತರಿಗಳಿಗೂ ಟಿಕೆಟ್ ನೀಡಿದೆ. ಆತಿಶಿ ನೇತೃತ್ವದ ಸರ್ಕಾರದ ಎಲ್ಲ ಸಚಿವರು ಅವರ ಕ್ಷೇತ್ರಗಳಿಂದಲೇ ಸ್ಪರ್ಧಿಸಲಿದ್ದಾರೆ.

ಬಿಜೆಪಿ ಟಿಕೆಟ್ ಘೋಷಣೆ ವಿಳಂಬ: ಸಾಮಾನ್ಯವಾಗಿ ಎಲ್ಲ ಪಕ್ಷಗಳಿಗಿಂತಲೂ ಅಭ್ಯರ್ಥಿಗಳ ಹೆಸರುಗಳನ್ನು ಮೊದಲೇ ಘೋಷಿಸುವ ಬಿಜೆಪಿ, ಈ ಬಾರಿ ವಿಳಂಬ ತಂತ್ರಕ್ಕೆ ಮೊರೆ ಹೋದಂತಿದೆ.

ಬಿಜೆಪಿ ವಿರುದ್ಧ ಟೀಕೆ

'ಎಎಪಿ ಸಂಪೂರ್ಣ ವಿಶ್ವಾಸ ಮತ್ತು ಸಿದ್ಧತೆಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಆದರೆ, ಬಿಜೆಪಿ ಇನ್ನೂ ಪಟ್ಟಿ ಬಿಡುಗಡೆ ಮಾಡಿಲ್ಲ. ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರನ್ನೂ ಘೋಷಿಸಿಲ್ಲ' ಎಂದು ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

'ದೆಹಲಿ ಅಭಿವೃದ್ಧಿ ಕುರಿತಂತೆ ಬಿಜೆಪಿ ಯೋಜನೆ ಹೊಂದಿಲ್ಲ. ಅವರಿಗೆ ದೂರದೃಷ್ಟಿಯೂ ಇಲ್ಲ. ಕೇಜ್ರಿವಾಲ್ ಅವರನ್ನು ಅಧಿಕಾರದಿಂದ ಇಳಿಸಬೇಕು ಎಂಬುದೇ ಬಿಜೆಪಿಯವರ ಗುರಿ. ಇದೇ ಅವರ ಏಕೈಕ ನೀತಿ– ಏಕೈಕ ಘೋಷಣೆ ಹಾಗೂ ಏಕೈಕ ಕಾರ್ಯಕ್ರಮ' ಎಂದು 'ಎಕ್ಸ್' ಸಾಮಾಜಿಕ ಜಾಲತಾಣದಲ್ಲಿ ಹಿಂದಿಯಲ್ಲಿ ಪೋಸ್ಟ್ ಮಾಡಿದ್ದಾರೆ.



ಕೇಜ್ರಿವಾಲ್ ವಿರುದ್ಧ ಮಾಜಿ ಸಿ.ಎಂಗಳ ಪುತ್ರರು!

ಬಿಜೆಪಿಯು ನವದೆಹಲಿ ಕ್ಷೇತ್ರದಿಂದ ಕೇಜ್ರಿವಾಲ್ ವಿರುದ್ಧ ಪರ್ವೇಶ್ ವರ್ಮಾ ಅವರನ್ನು ಕಣಕ್ಕಿಳಿಸಲಿದೆ ಎಂದು ಹೇಳಲಾಗುತ್ತಿದೆ. ಪರ್ವೇಶ್ ಅವರು ದೆಹಲಿ ಮಾಜಿ ಮುಖ್ಯಮಂತ್ರಿ ಸಾಹಿಬ್ ಸಿಂಗ್ ವರ್ಮಾ ಪುತ್ರ.

ಈ ಕ್ಷೇತ್ರದಲ್ಲಿ ಕೇಜ್ರಿವಾಲ್ ವಿರುದ್ಧ ಕಾಂಗ್ರೆಸ್‌ನಿಂದ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಪುತ್ರ, ಮಾಜಿ ಸಂಸದ ಸಂದೀಪ್ ದೀಕ್ಷಿತ್ ಸೆಣಸಲಿದ್ದಾರೆ.

ಡಿ.8ರಂದು ಆರಂಭಿಸಬೇಕಿದ್ದ 'ಪರಿವರ್ತನಾ ಯಾತ್ರೆ'ಯನ್ನೂ ಬಿಜೆಪಿ ಮುಂದೂಡಿತ್ತು.

ಕೇಂದ್ರದ ಮಾಜಿ ಸಚಿವೆ ಸ್ಮೃತಿ ಇರಾನಿ, ಮಾಜಿ ಸಂಸದರಾದ ಪರ್ವೇಶ್ ವರ್ಮಾ ಮತ್ತು ರಮೇಶ ಬಿಧೂಡಿ ಅವರನ್ನು ಬಿಜೆಪಿ ಕಣಕ್ಕಿಳಿಸಲಿದೆ ಎಂದು ಹೇಳಲಾಗುತ್ತಿದೆ. ಈ ನಾಯಕರು ದೆಹಲಿಯ ವಿವಿಧ ಕ್ಷೇತ್ರಗಳಿಗೆ ಈಗಾಗಲೇ ಭೇಟಿ ನೀಡಿ, ಚುನಾವಣಾ ಸಿದ್ಧತೆಯಲ್ಲಿ ತೊಡಗಿರುವುದು ಈ ಮಾತಿಗೆ ಪುಷ್ಟಿ ನೀಡುವಂತಿದೆ.

ಲೋಕಸಭಾ ಚುನಾವಣೆಯಲ್ಲಿ ಅಮೇಠಿಯಿಂದ ಪರಾಭವಗೊಂಡಿರುವ ಸ್ಮೃತಿ ಇರಾನಿ ಅವರು, ಬಿಜೆಪಿಯ ದೆಹಲಿ ಘಟಕದ ಹಿರಿಯ ನಾಯಕರಾದ ವಿ.ಕೆ.ಮಲ್ಹೋತ್ರ ಹಾಗೂ ವಿಜಯ್ ಗೋಯಲ್ ಅವರನ್ನು ಭೇಟಿ ಮಾಡಿದ್ದು, ಈ ಇಬ್ಬರು ನಾಯಕರ ಸ್ಪರ್ಧೆ ಖಚಿತ ಎಂಬ ಸಂದೇಶ ರವಾನಿಸಿದ್ದಾರೆ.




21 ಅಭ್ಯರ್ಥಿಗಳ ಘೋಷಿಸಿದ ಕಾಂಗ್ರೆಸ್: ಇತ್ತೀಚೆಗೆ ತಾನು ಕೈಗೊಂಡಿದ್ದ 'ದೆಹಲಿ ನ್ಯಾಯ ಯಾತ್ರಾ' ನೆಚ್ಚಿಕೊಂಡಂತಿರುವ ಕಾಂಗ್ರೆಸ್, 21 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಘೋಷಿಸಿದೆ. ಸಂದೀಪ್ ದೀಕ್ಷಿತ್, ಕಾಂಗ್ರೆಸ್‌ನ ದೆಹಲಿ ಘಟಕದ ಮುಖ್ಯಸ್ಥ ದೇವೇಂದ್ರ ಯಾದವ್ ಪ್ರಮುಖ ಹೆಸರುಗಳಾಗಿವೆ. 2020ರಲ್ಲಿ ನಡೆದ ಚುನಾವಣೆಯಲ್ಲಿ, ಎಎಪಿ 70ರ ಪೈಕಿ 62 ಸ್ಥಾನಗಳಲ್ಲಿ ಗೆದ್ದು, ರಾಷ್ಟ್ರ ರಾಜಧಾನಿ ರಾಜಕೀಯದಲ್ಲಿ ತನ್ನ ಪ್ರಾಬಲ್ಯ ಸಾಬೀತು ಮಾಡಿತ್ತು.

ಏಕಕಾಲಕ್ಕೆ ಚುನಾವಣೆ ಮಸೂದೆ ಹಿಂದೆ ಸರಿದ ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ಒಂದು ರಾಷ್ಟ್ರ, ಒಂದು ಚುನಾವಣೆ' ಮಸೂದೆಯನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸುವ ಕುರಿತು ಪ್ರಕಟಿಸಿದ್ದ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಕೆಲವೇ ಗಂಟೆಗಳಲ್ಲಿ ಹಿಂಪಡೆದು ಅಚ್ಚರಿ ಮೂಡಿಸಿದೆ.

ಮೊದಲಿಗೆ ಪೂರಕ ಬೇಡಿಕೆಗಳ ಕುರಿತ ಅನುದಾನಕ್ಕೆ ಸಂಬಂಧಿಸಿದ ವಿಷಯಗಳಿಗೆ ಅನುಮೋದನೆ ಪಡೆಯಲು ಸರ್ಕಾರ ಬಯಸಿದೆ. ಆ ಬಳಿಕವಷ್ಟೇ 'ಒಂದು ರಾಷ್ಟ್ರ, ಒಂದು ಚುನಾವಣೆ' ಮಸೂದೆ ಮಂಡನೆ ಬಗ್ಗೆ ಚಿಂತನೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ. ಸಂಸತ್ತಿನ ಚಳಿಗಾಲದ ಅಧಿವೇಶನ ಇದೇ 20ಕ್ಕೆ ಮುಕ್ತಾಯ ಗೊಳ್ಳಲಿದೆ.



ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಪ್ರಸ್ತಾವನೆಗೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಮಸೂದೆ ಮಂಡನೆಯಾದರೆ ಆರಂಭದಲ್ಲಿಯೇ ವ್ಯಾಪಕ ವಿರೋಧ ವ್ಯಕ್ತವಾಗಬಹುದು ಎಂಬ ಕಳವಳ ಕೇಂದ್ರಕ್ಕೆ ಇದೆ ಎಂದು ಮೂಲಗಳು ಹೇಳಿವೆ.

ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಸಂವಿಧಾನ (129ನೇ ತಿದ್ದುಪಡಿ) ಮಸೂದೆ–2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ ಮಸೂದೆ– 2024 ಅನ್ನು ಸೋಮವಾರ ಮಧ್ಯಾಹ್ನ 12 ಗಂಟೆಗೆ ಮಂಡಿಸುವ ಕುರಿತು ಲೋಕಸಭಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಇದು ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಗಳಿಗೆ ಏಕಕಾಲಕ್ಕೆ ಚುನಾವಣೆ ಯನ್ನು ಮಂಡಿಸುವ ಉದ್ದೇಶ ಹೊಂದಿದ್ದ ಮಸೂದೆಗಳಾಗಿದ್ದವು. ಆದರೆ, ಇದನ್ನು ಪ್ರಕಟಿಸಿದ ಕೆಲವೇ ಗಂಟೆಗಳಲ್ಲಿ ಈ ಎರಡೂ ಮಸೂದೆಗಳನ್ನು ಕೈಬಿಟ್ಟು, ಪರಿಷ್ಕೃತ ಕಲಾಪದ ಪಟ್ಟಿಯನ್ನು ಲೋಕಸಭೆಯ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಲಾಗಿದೆ. ಈ ಮಸೂದೆಗಳ ಕುರಿತ ಪ್ರತಿಗಳನ್ನು ಕಳೆದ ವಾರ ನಿಯಮಾವಳಿ ಪ್ರಕಾರ ಸಂಸತ್ತಿನ ಸದಸ್ಯರಿಗೆ ನೀಡಲಾಗಿತ್ತು.

ಪರಿಷ್ಕೃತ ಪಟ್ಟಿಯ ಪ್ರಕಾರ, ಲೋಕಸಭೆಯಲ್ಲಿ ಪೂರಕ ಬೇಡಿಕೆಗಳ ಅನುದಾನಕ್ಕೆ ಸಂಬಂಧಿಸಿದ ಚರ್ಚೆ ನಡೆಯಲಿದೆ. ಗೋವಾ ರಾಜ್ಯದ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರು ಹೊಂದಾಣಿಕೆ ಮಸೂದೆಯನ್ನು ಸರ್ಕಾರ ಮಂಡಿಸಲಿದೆ.

ರಾಜ್ಯಸಭೆಯಲ್ಲಿ ಸಂವಿಧಾನಕ್ಕೆ ಸಂಬಂಧಿಸಿದಂತೆ ಎರಡು ದಿನಗಳ ಚರ್ಚೆಯು ಸೋಮವಾರ ಬೆಳಗ್ಗೆ 11 ಗಂಟೆಗೆ ಪ್ರಾರಂಭವಾಗಲಿದೆ.

'ಮಹಾ' ಸಂಪುಟ ವಿಸ್ತರಣೆ ● 39 ಸಚಿವರ ಪ್ರಮಾಣ

ಮೂರೂ ಪಕ್ಷಗಳ ಕೆಲ 'ನಿಷ್ಠ'ರಿಗೆ ಕೊಕ್

ಪ್ರಜಾವಾಣಿ ವಾರ್ತೆ



ನಾಗ್ಪುರದಲ್ಲಿ ನಡೆದ ಸಮಾರಂಭದಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಬಿಜೆಪಿಯ ರಾಧಾಕೃಷ್ಣ ವಿಖೆಪಾಟೀಲ್ ಅವರಿಗೆ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಭಾನುವಾರ ಹೂಗುಚ್ಛ ನೀಡಿದರು. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಡಿಸಿಎಂ ಏಕನಾಥ ಶಿಂದೆ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಮುಂಬೈ: ಮಹಾರಾಷ್ಟ್ರ ಸಚಿವ ಸಂಪುಟದ ಮೊದಲ ವಿಸ್ತರಣೆ ಭಾನುವಾರ ನಡೆದಿದೆ. 6 ಮಂದಿ ರಾಜ್ಯ ಖಾತೆ, 33 ಸಂಪುಟ ದರ್ಜೆ ಸೇರಿದಂತೆ 39 ಸಚಿವರು ನಾಗ್ಪುರದಲ್ಲಿ ಆರಂಭವಾದ ವಿಧಾನಸಭೆ ಚಳಿಗಾಲದ ಅಧಿವೇಶನದ ವೇಳೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ರಾಜ್ಯಪಾಲ ಸಿ. ಪಿ. ರಾಧಾಕೃಷ್ಣನ್ ಪ್ರತಿಜ್ಞಾ ವಿಧಿ ಬೋಧಿಸಿದ್ದಾರೆ. ಸಂಪುಟದಲ್ಲಿ ಆರು ಮಹಿಳೆಯರಿಗೂ ಸ್ಥಾನ ನೀಡಲಾಗಿದೆ. ಮುಂದಿನ 2-3 ದಿನದಲ್ಲಿ ಖಾತೆ ಹಂಚಿಕೆ ನಡೆಯುವ ನಿರೀಕ್ಷೆ ಇದೆ. ಆದರೆ, ಪಕ್ಷದ ಕೆಲ 'ನಿಷ್ಠ'ರನ್ನು ಕೈಬಿಡುವ ಮೂಲಕ 'ಮಹಾಯುತಿ' ಸರ್ಕಾರ ಅಚ್ಚರಿ ಮೂಡಿಸಿದೆ.

ಬಿಜೆಪಿ ಹಿರಿಯ ನಾಯಕರಾದ ಸುಧೀರ್ ಮುಂಗಂಟಿವಾರ್, ರವೀಂದ್ರ ಚವಾಣ್, ಎನ್‌ಸಿಪಿಯ ಛಗನ್ ಭುಜಬಲ್, ದಿಲೀಪ್ ವಲ್ಸೆ–ಪಾಟೀಲ್, ಶಿವಸೇನಾ ಮುಖಂಡರಾದ ಅಬ್ದುಲ್ ಸತ್ತಾರ್ ಹಾಗೂ ದೀಪಕ್ ಕೇಸರ್ಕರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿಲ್ಲ.

'ಪ್ರಾತಿನಿಧ್ಯಕ್ಕೆ ಒತ್ತು': ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಸಾಮಾಜಿಕ ಸಮೀಕರಣಕ್ಕೆ ಒತ್ತು ನೀಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

'ರಾಜ್ಯದ ಎಲ್ಲ ಐದು ಪ್ರದೇಶಗಳು ಹಾಗೂ ವಿವಿಧ ಸಮುದಾಯಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಇಂತಹ ಕ್ರಮ ಕೈಗೊಳ್ಳಲಾಗಿದೆ. ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ನೀಡಲಾಗಿದೆ. ಒಬಿಸಿ, ಎಸ್‌ಸಿ, ಎಸ್‌ಟಿ ಹೀಗೆ ಎಲ್ಲ ಸಮುದಾಯಗಳವರೂ ಇದ್ದು, ಇದು ಎಲ್ಲರನ್ನೂ ಒಳಗೊಳ್ಳುವ ಸಚಿವ ಸಂಪುಟವಾಗಿದೆ' ಎಂದು ಫಡಣವೀಸ್ ಹೇಳಿದ್ದಾರೆ.

ಸಂಪುಟ ಬಲಾಬಲ

ಪಕ್ಷ	ಸಚಿವರ ಸಂಖ್ಯೆ
ಬಿಜೆಪಿ	19
ಶಿವಸೇನಾ (ಶಿಂದೆ ಬಣ)	11
ಎನ್‌ಸಿಪಿ (ಅಜಿತ್ ಪವಾರ್)	9

ಪಕ್ಷದ ನಿಷ್ಠರೂ ಹಾಗೂ ಹಿರಿಯ ನಾಯಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳದಿರುವ ಕುರಿತು ಬಿಜೆಪಿ ಪ್ರತಿಕ್ರಿಯೆ ನೀಡಿಲ್ಲ. ಇನ್ನೊಂದೆಡೆ, ಈಗ ಸಂಪುಟ ಸೇರಿರುವವರಿಗೆ 'ಎರಡೂವರೆ ವರ್ಷ ಅಧಿಕಾರ' ಎಂಬ ಸೂತ್ರದ ಮೊರೆ ಹೋಗಲು ಎನ್‌ಸಿಪಿ ಹಾಗೂ ಶಿವಸೇನಾ (ಶಿಂದೆ ಬಣ) ಚಿಂತನೆ ನಡೆಸಿವೆ. ಸಚಿವರು ತೋರುವ ಸಾಧನೆಯೇ ಮಾನದಂಡವಾಗಿರಲಿದೆ ಎಂದು ಹೇಳಲಾಗುತ್ತಿದೆ.


'ಸಚಿವರ ಸಾಧನೆಯನ್ನು ಒರೆಗಲ್ಲಿಗೆ ಹಚ್ಚುವುದು ನಿಯಮಿತವಾಗಿ ನಡೆಯುವ ಪ್ರಕ್ರಿಯೆ. ಅದರ ಆಧಾರದಲ್ಲಿಯೇ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಫಡಣವೀಸ್ ಪ್ರತಿಕ್ರಿಯಿಸಿದ್ದಾರೆ.

33 ವರ್ಷಗಳ ಬಳಿಕ ಸಮಾರಂಭ: ಮಹಾರಾಷ್ಟ್ರದ ಎರಡನೇ ರಾಜಧಾನಿ ಎನಿಸಿರುವ ನಾಗ್ಪುರದಲ್ಲಿ 1991ರಲ್ಲಿ ರಾಜಭವನ ನಿರ್ಮಿಸಲಾಗಿದೆ. ಆದರೆ, 33 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಭಾನುವಾರ 39 ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆದಿದೆ. 1991ರಲ್ಲಿ ಮುಖ್ಯಮಂತ್ರಿಯಾಗಿದ್ದ ಸುಧಾಕರರಾವ್ ನಾಯ್ಕ್ ಅವರು ಸಂಪುಟ ವಿಸ್ತರಿಸಿದ್ದ ವೇಳೆ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆದಿತ್ತು.

'ಕಾಂಗ್ರೆಸ್ ಪಕ್ಷ ಇವಿಎಂ ವಿರುದ್ಧದ ಟೀಕೆ ನಿಲ್ಲಿಸಲಿ'

ನವದೆಹಲಿ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಕುರಿತ ಕಾಂಗ್ರೆಸ್ ಪಕ್ಷದ ಆಕ್ಷೇಪಣೆಯನ್ನು ತಳ್ಳಿಹಾಕಿರುವ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು, ಚುನಾವಣಾ ಫಲಿತಾಂಶಗಳನ್ನು ಒಪ್ಪಿಕೊಳ್ಳಬೇಕು ಎಂದು ಸಲಹೆ ಮಾಡಿದ್ದಾರೆ.

ಬಿಜೆಪಿ ಪರ ರಕ್ಷಣಾತ್ಮಕವಾಗಿ ದನಿ ಎತ್ತಿರುವ ಅವರು, 'ಚುನಾವಣೆಗಳಲ್ಲಿ ಸೋಲುಂಟಾದಾಗ ಇವಿಎಂಗಳನ್ನು ದೂಷಿಸುವುದು ಸರಿಯಲ್ಲ. ಇವಿಎಂ ಬಳಕೆ ಆದಾಗಲೇ ಕಾಂಗ್ರೆಸ್‌ನವರು 100ಕ್ಕೂ ಹೆಚ್ಚು ಸ್ಥಾನ ಗೆದ್ದಿದ್ದು, ಪಕ್ಷದಲ್ಲಿ ಒಂದು ರೀತಿ ಸಂಭ್ರಮವನ್ನು ಆಚರಿಸಿದ್ದಾರೆ' ಎಂದು ಸುದ್ದಿಸಂಸ್ಥೆ ಜೊತೆ ಮಾತನಾಡಿದ ಅವರು ಹೇಳಿದರು.



ಒಮರ್ ಅಬ್ದುಲ್ಲಾ

'ಮತದಾನ ವ್ಯವಸ್ಥೆ ಮೇಲೆ ನಂಬಿಕೆ ಇಲ್ಲದ ಪಕ್ಷಗಳು ಚುನಾವಣೆಗೆ ಸ್ಪರ್ಧಿಸಬಾರದು. ಇವಿಎಂಗಳ ಬಗ್ಗೆ ಆಕ್ಷೇಪಗಳಿದ್ದರೆ ಅದಕ್ಕೆ ಬದ್ಧವಾಗಿರಬೇಕು. ವಿರೋಧ ಪಕ್ಷಗಳು ಮುಖ್ಯವಾಗಿ ಕಾಂಗ್ರೆಸ್ ಈಗ ಇವಿಎಂಗಳತ್ತ ಗಮನಕೇಂದ್ರೀಕರಿಸಿದೆ' ಎಂದು ಒಮರ್ ಅಬ್ದುಲ್ಲಾ ಹೇಳಿದರು.

'ನಾನು ಸಿದ್ಧಾಂತಗಳ ಆಧಾರದಲ್ಲಿ ಮಾತನಾಡುತ್ತೇನೆ. ಸ್ವತಂತ್ರ ಚಿಂತನೆಯಿಂದ ಈ ಹಿಂದೆ ಸೆಂಟ್ರಲ್ ವಿಸ್ತಾ ಸೇರಿದಂತೆ ಹಲವು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಪರ ಮಾತನಾಡಿದ್ದೇನೆ' ಎಂದರು.

ವಯನಾಡ್: ಪರಿಹಾರ, ರಕ್ಷಣಾ ಕಾರ್ಯಕ್ಕೆ ಹಣ ಪಾವತಿಸಲು ಸೂಚನೆ

'ಗಾಯಕ್ಕೆ ಉಪ್ಪು ಸವರುತ್ತಿರುವ ಕೇಂದ್ರ'

ಕೊಚ್ಚಿ (ಪಿಟಿಐ): ವಯನಾಡ್‌ನಲ್ಲಿ ಭೂಕುಸಿತ ಸಂಭವಿಸಿದಾಗ ಭಾರತೀಯ ವಾಯುಪಡೆ ನಡೆಸಿದ ಪರಿಹಾರ ಮತ್ತು ರಕ್ಷಣಾ ಕಾರ್ಯಕ್ಕೆ ಹಣ ಪಾವತಿಸುವಂತೆ ಕೇಂದ್ರ ಸರ್ಕಾರ ಕೇಳಿರುವುದನ್ನು ಕೇರಳದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಅವರು ಭಾನುವಾರ ಟೀಕಿಸಿದ್ದಾರೆ.

ಕೇಂದ್ರದ ಕ್ರಮವು ಗಾಯದ ಮೇಲೆ ಉಪ್ಪು ಸವರುವ ಕೆಲಸ ಎಂದು ಅವರು ಹೇಳಿದ್ದಾರೆ. ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ವಿಪತ್ತು ಪರಿಹಾರಕ್ಕೆ ನೀಡುವುದಾಗಿ ಭರವಸೆ ಇತ್ತಿದ್ದ ಹಣವನ್ನು ಕೊಡುವಲ್ಲಿಯೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ವಿಫಲವಾಗಿದೆ ಎಂದು ಅವರು ದೂರಿದರು. ಇದು ರಾಜ್ಯದ ಜನರನ್ನು ಅಣಕಿಸುವುದಕ್ಕೆ ಸಮ ಎಂದು ಅವರು ಹೇಳಿದರು.



ಕೇರಳಕ್ಕೆ ನ್ಯಾಯಸಮ್ಮತವಾಗಿ ಬರಬೇಕಿರುವ ಮೊತ್ತವನ್ನು ಕೂಡಾ ಕೇಂದ್ರ ಸರ್ಕಾರ ತಡೆಹಿಡಿದಿದೆ

ಪಿಣರಾಯಿ ವಿಜಯನ್
ಕೇರಳ ಮುಖ್ಯಮಂತ್ರಿ

'ಈಗ ವಾಯುಪಡೆಯ ಹೆಸರಿನಲ್ಲಿ ಹೊಸ ಬಿಲ್ ಒಂದನ್ನು ನೀಡಲಾಗಿದೆ' ಎಂದರು. ಅಕ್ಟೋಬರ್ 22ರಂದು 'ಏರ್‌ಲಿಫ್ಟ್ ಬಾಕಿ ಶುಲ್ಕದ ಪಾವತಿ' ಹೆಸರಿನಲ್ಲಿ ಮುಖ್ಯ ಕಾರ್ಯದರ್ಶಿ ಕಚೇರಿಗೆ ಬಂದಿರುವ ಪತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರವಾಗಿ ಬಾಲಗೋಪಾಲ್ ಈ ಮಾತು ಆಡಿದರು.

2018ರ ಪ್ರವಾಹದ ಸಂದರ್ಭದಲ್ಲಿ ಕೈಗೊಂಡ ಪರಿಹಾರ ಕಾಮಗಾರಿಗಳ ₹100 ಕೋಟಿಗೂ ಹೆಚ್ಚಿನ ಬಾಕಿ ಮೊತ್ತ, ವಯನಾಡ್‌ನಲ್ಲಿ ಈ ವರ್ಷದ ಜುಲೈ 30ರಂದು ಉಂಟಾದ ಭೂಕುಸಿತದ ನಂತರ ಭಾರತೀಯ ವಾಯುಪಡೆ ನಡೆಸಿದ ಕಾರ್ಯಾಚರಣೆಗಳ ₹13 ಕೋಟಿ ಬಿಲ್ ಬಾಕಿ ಮೊತ್ತದ ವಿವರವು ಆ ಪತ್ರದಲ್ಲಿ ಇದೆ.

ಪತ್ರದ ವಿಚಾರವಾಗಿ ಕೇರಳ ಸರ್ಕಾರ ವಿವಾದ ಸೃಷ್ಟಿಸುತ್ತಿದೆ ಎಂದು ಬಿಜೆಪಿ ಮುಖಂಡ ರಾಜೀವ್ ಚಂದ್ರಶೇಖರ್ ಅವರು ಟೀಕಿಸಿದ್ದಾರೆ. 'ಭಾರತೀಯ ವಾಯುಪಡೆ ನಡೆಸುವ ಕಾರ್ಯಾಚರಣೆಗಳಿಗೆ ಹಣ ಪಾವತಿಸುವ ಕೆಲಸವನ್ನು ಎಲ್ಲ ರಾಜ್ಯಗಳೂ ಸಹಜವಾಗಿಯೇ ಮಾಡುತ್ತಿವೆ. ಆದರೆ, ₹2 ಲಕ್ಷ ಕೋಟಿ ವಾರ್ಷಿಕ ಬಜೆಟ್ ಇರುವ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರಕ್ಕೆ ಇದು ವಿವಾದವಾಗಿದೆ, ಏಕೆ' ಎಂದು ಅವರು ಎಕ್ಸ್ ಮೂಲಕ ಪ್ರಶ್ನಿಸಿದ್ದಾರೆ.

ಶಬರಿಮಲೆ: 29 ದಿನದಲ್ಲಿ ₹163.89 ಕೋಟಿ ಆದಾಯ

ತಿರುವನಂತಪುರ (ಪಿಟಿಐ): ಪ್ರಸಿದ್ಧ ಧಾರ್ಮಿಕ ಸ್ಥಳ ಶಬರಿಮಲೆಗೆ ಡಿಸೆಂಬರ್ 14ರವರೆಗಿನ ಕಳೆದ 29 ದಿನಗಳಲ್ಲಿ ಒಟ್ಟು 22 ಲಕ್ಷ ಅಯ್ಯಪ್ಪ ಸ್ವಾಮಿ ಭಕ್ತರು ಭೇಟಿ ನೀಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ 4.51 ಲಕ್ಷ ಅಧಿಕ ಭಕ್ತರು ಭೇಟಿ ನೀಡಿದ್ದಾರೆ.

ತಿರುವಾಂಕೂರು ದೇವಸ್ಥಾನ ಮಂಡಳಿಯ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ಈ ಮಾಹಿತಿ ನೀಡಿದ್ದು, 'ದೇವಸ್ಥಾನದ ವರಮಾನ ಈ ವರ್ಷ ಕಳೆದ ಸಾಲಿಗೆ ಹೋಲಿಸಿದರೆ ₹22.76 ಕೋಟಿ ಹೆಚ್ಚಾಗಿದೆ. 29 ದಿನದಲ್ಲಿ 22,67,956 ಲಕ್ಷ ಭಕ್ತರು ಭೇಟಿ ನೀಡಿದ್ದು, ಒಟ್ಟು ₹163.89 ಕೋಟಿ ವರಮಾನ ಬಂದಿದೆ. ಈ ಪೈಕಿ ಅರವಣ (ಪ್ರಸಾದ) ಮಾರಾಟದಿಂದಲೇ ₹82.67ಕೋಟಿ ವರಮಾನ ಬಂದಿದೆ' ಎಂದು ತಿಳಿಸಿದರು.

ನಟನ ಅಪಹರಿಸಿದ್ದ ನಾಲ್ವರು ಸೆರೆ

ಬಿಜ್ನೋರ್/ಮೀರತ್: ನಟ ಮುಷ್ತಾಕ್ ಮೊಹಮ್ಮದ್ ಖಾನ್ ಅವರನ್ನು ದೆಹಲಿ ವಿಮಾನನಿಲ್ದಾಣದಿಂದ ಅಪಹರಿಸಿ, ಒತ್ತೆಯಾಳಾಗಿ ಇರಿಸಿಕೊಂಡು ಹಣಕ್ಕಾಗಿ ಒತ್ತಾಯಿಸಿದ್ದ ತಂಡದ ನಾಲ್ವರು ಸದಸ್ಯರನ್ನು ಪೊಲೀಸರು ಬಂಧಿಸಿದ್ದಾರೆ.



ಮುಷ್ತಾಕ್ ಅವರನ್ನು ಉತ್ತರ ಪ್ರದೇಶದ ಬಿಜ್ನೋರ್ ಜಿಲ್ಲೆಯಲ್ಲಿ ಒತ್ತೆಯಾಳಾಗಿ ಇರಿಸಿಕೊಂಡಿದ್ದ ಇದೇ ತಂಡ ಬಾಲಿವುಡ್‌ನ ಹಿರಿಯ ನಟ ಶಕ್ತಿ ಕಪೂರ್ ಅವರ ಅಪಹರಣಕ್ಕೂ ಸಂಚು ನಡೆಸಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಸಾರ್ಥಕ್ ಚೌಧರಿ, ಸಬಿಯುದ್ದೀನ್, ಅಜೀಂ, ಶಶಾಂಕ್ ಬಂಧಿತರು. ಇವರಿಂದ ₹1.04 ಲಕ್ಷ ವಶ ಪಡಿಸಿಕೊಳ್ಳಲಾಗಿದೆ. ತಂಡ ಬೇರೆ ಯಾರಾದರೂ ನಟರ ಅಪಹರಿಸಿತ್ತೆ ಎಂದು ತನಿಖೆ ನಡೆಸಲಾಗುತ್ತಿದೆ ಎಂದು ಬಿಜ್ನೋರ್ ಜಿಲ್ಲಾ ಎಸ್‌ಪಿ ಅಭಿಷೇಕ್ ಝಾ ತಿಳಿಸಿದರು. ಮುಷ್ತಾಕ್ ಅವರ ಕಾರ್ಯಕ್ರಮ ಮೇಲುಸ್ತುವಾರಿ ವ್ಯವಸ್ಥಾಪಕ ಶಿವಂ ಯಾದವ್ ಅವರು ಡಿ.9ರಂದು ದೂರು ನೀಡಿದ್ದರು. ಕಾರ್ಯಕ್ರಮಕ್ಕೆ ಆಹ್ವಾನಿಸುವ ಸೋಗಿನಲ್ಲಿ ದೆಹಲಿಗೆ ಕರೆಸಿದ್ದ ದುಷ್ಕರ್ಮಿಗಳು ಅಪಹರಿಸಿದ್ದರು ಎಂದು ತಿಳಿಸಿದರು.

ನ.21ರಂದು ಮುಷ್ತಾಕ್ ಖಾನ್ ಅವರ ಬ್ಯಾಂಕ್ ಖಾತೆಯಿಂದ ಒಟ್ಟು ₹2.2 ಲಕ್ಷ ಪಡೆದಿದ್ದಲ್ಲದೆ, ಮೀರತ್ ಮತ್ತು ಮುಜಾಫರ್‌ನಗರ್‌ನಲ್ಲಿ ಶಾಪಿಂಗ್ ಮಾಡಿದ್ದರು ಎಂದು ಅವರು ವಿವರಿಸಿದರು.

ಚೆನ್ನೈನಲ್ಲಿ 'ಡಯಾಬಿಟಿಸ್ ಬಯೋಬ್ಯಾಂಕ್'

ದೇಶದಲ್ಲೇ ಮೊದಲು

ನವದೆಹಲಿ (ಪಿಟಿಐ): ಮಧುಮೇಹ ಕುರಿತು ಸಂಶೋಧನೆಗೆ ನೆರವಾಗುವ, ದೇಶದ ಮೊದಲ 'ಡಯಾಬಿಟಿಸ್ ಬಯೋಬ್ಯಾಂಕ್' ಅನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಚೆನ್ನೈನಲ್ಲಿ ಸ್ಥಾಪಿಸಿದೆ.

ಮದ್ರಾಸ್ ಡಯಾಬಿಟಿಸ್ ರಿಸರ್ಚ್ ಫೌಂಡೇಷನ್ (ಎಂಡಿಆರ್‌ಎಫ್) ಸಹಯೋಗದಲ್ಲಿ ಇದನ್ನು ಸ್ಥಾಪಿಸಲಾಗಿದೆ.

'ಸಂಸ್ಥೆಯಲ್ಲಿಯೇ ಕಾರ್ಯನಿರ್ವಹಿಸುವ ಈ 'ಬಯೋಬ್ಯಾಂಕ್', ಮಧುಮೇಹಕ್ಕೆ ಸಂಬಂಧಿಸಿದ ಜೈವಿಕ ಮಾದರಿಗಳ ಸಂಗ್ರಹ, ವಿಶ್ಲೇಷಣೆ ಹಾಗೂ ದತ್ತಾಂಶ ಸಿದ್ಧಪಡಿಸಲಿದೆ' ಎಂದು ಎಂಡಿಆರ್‌ಎಫ್ ಮುಖ್ಯಸ್ಥ ಡಾ.ವಿ.ಮೋಹನ್ ತಿಳಿಸಿದ್ದಾರೆ.

ಟೈಪ್–1, ಟೈಪ್–2 ಹಾಗೂ ಗರ್ಭಧಾರಣೆ ಸಂದರ್ಭದಲ್ಲಿ ಮಹಿಳೆಯರಲ್ಲಿ ಕಂಡುಬರುವ ಡಯಾಬಿಟಿಸ್ ಹಾಗೂ ಮಕ್ಕಳಲ್ಲಿ ಕಾಣಿಸುವ ಡಯಾಬಿಟಿಸ್‌ಗೆ ಸಂಬಂಧಿಸಿದ ರಕ್ತದ ಮಾದರಿಗಳ ಸಂಗ್ರಹ ಇಲ್ಲಿದೆ ಎಂದು ತಿಳಿಸಿದ್ದಾರೆ.

ಡಯಾಬಿಟಿಸ್‌ಗೆ ಕಾರಣವಾಗುವ ಅಂಶಗಳು, ಡಯಾಬಿಟಿಸ್‌ನಿಂದ ಕಂಡು ಬರುವ ಇತರ ಆರೋಗ್ಯ ಸಮಸ್ಯೆಗಳ ಕುರಿತು ಹೆಚ್ಚಿನ ಸಂಶೋಧನೆಗೆ ಇಲ್ಲಿನ ದತ್ತಾಂಶ ಒದಗಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

'ಡಯಾಬಿಟಿಸ್ ಬಯೋಬ್ಯಾಂಕ್' ಸ್ಥಾಪನೆಯ ಉದ್ದೇಶ ಹಾಗೂ ಸಂಸ್ಥೆ ಕುರಿತು ಸಮಗ್ರ ವಿವರಗಳನ್ನು ಒಳಗೊಂಡ ವರದಿ 'ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ರಿಸರ್ಚ್'ನಲ್ಲಿ ಕಳೆದ ವಾರ ಪ್ರಕಟವಾಗಿದೆ.

ಹೆಡ್–ಸ್ಮಿತ್ ಬ್ಯಾಟಿಂಗ್ ಅಬ್ಬರ

ಗಾಬಾ ಟೆಸ್ಟ್: ಸರಣಿಯಲ್ಲಿ ಸತತ ಎರಡನೇ ಶತಕ ಗಳಿಸಿದ ಟ್ರಾವಿಸ್; ಬೂಮ್ರಾಗೆ ಐದು ವಿಕೆಟ್

• ಮಧು ಜವಳಿ

ಬ್ರಿಸ್ಬೇನ್: ರೋಹಿತ್ ಶರ್ಮಾ ಬಳಗದ 'ತಲೆನೋವು' ಗಾಬಾ ಕ್ರೀಡಾಂಗಣದಲ್ಲಿ ದುಪ್ಪಟ್ಟಾಯಿತು. ಕೆಲವು ವರ್ಷಗಳ ಹಿಂದೆ ಭಾರತ ತಂಡವನ್ನು ಬಹುತೇಕ ಎಲ್ಲ ಮಾದರಿಗಳಲ್ಲಿ ಕಾಡುತ್ತಿದ್ದ ಆಸ್ಟ್ರೇಲಿಯಾದ ಸ್ಟಿವನ್ ಸ್ಮಿತ್ ಮತ್ತು ಇತ್ತೀಚಿನ ದಿನಗಳಲ್ಲಿ ಸತಾಯಿಸುತ್ತಿರುವ ಟ್ರಾವಿಸ್ ಹೆಡ್ ಅವರಿಬ್ಬರೂ ಭಾನುವಾರ ಅಬ್ಬರಿಸಿದರು.

ಇದರಿಂದಾಗಿ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೂರನೇ ಪಂದ್ಯದ ಎರಡನೇ ದಿನದಾಟದಲ್ಲಿ ಆಸ್ಟ್ರೇಲಿಯಾ 7 ವಿಕೆಟ್‌ಗಳಿಗೆ 405 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತು. ಬೀಸಾಟವಾಡಿದ ಹೆಡ್ (152; 160ಎ, 4X18) ಮತ್ತು ಮಂಜುಗಡ್ಡೆಯಷ್ಟೇ ತಣ್ಣಗೆ ಆಡಿದ ಸ್ಮಿತ್ (101; 190ಎ, 4X12) ಅವರು ತಮ್ಮ ದ್ವಿಶತಕದ ಜೊತೆಯಾಟದ ಮೂಲಕ ಆಸ್ಟ್ರೇಲಿಯಾಕ್ಕೆ ಆಸರೆಯಾದರು. ಇವರಿಬ್ಬರೂ ಕ್ರೀಸ್‌ನಲ್ಲಿ ಜೊತೆಗೂಡುವ ಮುನ್ನ ಆತಿಥೇಯರ ಇನಿಂಗ್ಸ್ ಸ್ವಲ್ಪಮಟ್ಟಿಗೆ ನಡುಗಿತ್ತು. ಆದರೆ ಇವರಿಬ್ಬರೂ ಭಾರತದ ಹಿಡಿತದಿಂದ ಪಂದ್ಯವನ್ನೇ ಕಿತ್ತುಕೊಳ್ಳುವಂತೆ ಆಡಿದರು. ದಿನದಾಟದ ಕೊನೆ ಅವಧಿಯಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ (72ಕ್ಕೆ5) ತಿರುಗೇಟು ನೀಡುವ ಮೂಲಕ ಒಂದಿಷ್ಟು ಸಮಾಧಾನ ತಂದರು.

ಈ ಸರಣಿಯಲ್ಲಿ ಎರಡನೇ ಬಾರಿಗೆ ಬೂಮ್ರಾ 'ಪಂಚಗುಚ್ಛ' ಗಳಿಸಿದರು. ಆದರೂ ಭಾರತದ ದಾಳಿಯಲ್ಲಿ ವಿಶೇಷವೇನೂ ಇರಲಿಲ್ಲ. ಅದರಲ್ಲೂ ವೇಗಿ ಮೊಹಮ್ಮದ್ ಸಿರಾಜ್ ಮತ್ತು ಸ್ಪಿನ್ನರ್ ರವೀಂದ್ರ ಜಡೇಜ ಅವರ ಆಟ ನಿರಾಶೆ ಮೂಡಿಸಿತು.

ಮಳೆಯಿಂದ ಸ್ಥಗಿತಗೊಂಡ ಮೊದಲ ದಿನದಾಟದಲ್ಲಿ ಆಸ್ಟ್ರೇಲಿಯಾ 13.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 28 ರನ್ ಗಳಿಸಿತ್ತು. ಎರಡನೇ ದಿನದಾಟದ ಆರಂಭದಲ್ಲಿ ಬೂಮ್ರಾ ಅವರು ಆರಂಭಿಕ ಬ್ಯಾಟರ್‌ಗಳಾದ ಉಸ್ಮಾನ್ ಖ್ವಾಜಾ (21 ರನ್) ಮತ್ತು ನೇಥನ್ ಮೆಕ್‌ಸ್ವೀನಿ (9 ರನ್) ಅವರ ವಿಕೆಟ್‌ಗಳನ್ನು ಬೇಗನೆ ಗಳಿಸಿದರು. ಇನ್ನೊಂದು ಬದಿಯಿಂದ ನಿತೀಶ್ ರೆಡ್ಡಿ ಕೂಡ ಮಾರ್ನಸ್ ಲಾಬುಷೇನ್ (12 ರನ್) ಅವರ ವಿಕೆಟ್ ಗಳಿಸಿದರು. ಇದರಿಂದಾಗಿ ತಂಡವು 75 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಆದರೆ ಎಡಗೈ ಬ್ಯಾಟರ್ ಹೆಡ್ ಮತ್ತು ಬಲಗೈ ಬ್ಯಾಟರ್ ಸ್ಮಿತ್ ಅವರ 4ನೇ ವಿಕೆಟ್ ಜೊತೆಯಾಟದ ಭರಾಟೆಗೆ ಭಾರತ ತಂಡದ ದೋಣಿ ದಿಕ್ಕು ತಪ್ಪಿತು. ಅವರಿಬ್ಬರೂ 241 ರನ್ (302 ಎಸೆತ) ಸೇರಿಸಿದರು. ಮೊದಲ ಅವಧಿಯ ಎರಡೂವರೆ ಗಂಟೆಯಲ್ಲಿ ವಿಕೆಟ್ ಪತನಕ್ಕೆ ಅವಕಾಶ ಕೊಡಲಿಲ್ಲ. ಊಟದ ವೇಳೆಗೆ 43 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 104 ರನ್‌ಗಳು ಸ್ಕೋರ್ ಬೋರ್ಡ್‌ನಲ್ಲಿದ್ದವು. ಆದರೆ ವಿರಾಮದ ನಂತರ ಎಲ್ಲ ಬೌಲರ್‌ಗಳಿಗೂ ಬೆವರಿಳಿಸಿದರು. ಊಟಕ್ಕೂ ಮುನ್ನ ಕೇವಲ 76 ರನ್‌ಗಳು ಸೇರಿದ್ದವು. ಅದರ ನಂತರ ಮತ್ತು ಚಹಾ ವಿರಾಮಕ್ಕೂ ಮುನ್ನದ ಅವಧಿಯಲ್ಲಿ 130 ರನ್‌ಗಳು ಹರಿದುಬಂದವು.

ಹೆಡ್ ಅವರನ್ನು ಕಟ್ಟಿಹಾಕುವ ತಂತ್ರಗಾರಿಕೆಯಲ್ಲಿ ಭಾರತ ತಂಡವು ಮತ್ತೊಮ್ಮೆ ಎಡವಿತು. ಪಿಚ್ ಮೇಲೆ ಅತಿಯಾದ ನಿರೀಕ್ಷೆ ಇಟ್ಟುಕೊಂಡಂತೆ ಕಂಡ ಬೌಲರ್‌ಗಳು ಆಫ್‌ಸೈಡ್‌ನಲ್ಲಿ ಫುಲ್ ಲೆಂಗ್ತ್ ಎಸೆತಗಳನ್ನು ಪ್ರಯೋಗಿಸಿದರು. ಆದರೆ ಎಡಗೈ ಬ್ಯಾಟರ್ ಕಟ್ ಹೊಡೆತಗಳನ್ನು ಆಡಿ, ಸಫಲರಾದರು. ಸಿರಾಜ್ ಕೆಲವು ಬೌನ್ಸರ್‌ಗಳನ್ನು ಪ್ರಯೋಗಿಸಿದರು. ಆದರೆ ಆಗ ಕಾಲ ಮಿಂಚಿತ್ತು. ಸ್ಕೋರ್ ಬೋರ್ಡ್ ನಲ್ಲಿ ರನ್ ಗಳಿಕೆ ಏರುತ್ತಿತ್ತು.

ಇನ್ನೊಂದು ಬದಿಯಲ್ಲಿ ಸ್ಮಿತ್ ತಮ್ಮ ಲಯ ಕಂಡುಕೊಳ್ಳಲು ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡುತ್ತಿದ್ದರು. ನಿಧಾನವಾಗಿ ಆಟಕ್ಕೆ ಕುದುರಿಕೊಂಡ ನಂತರ ದೊಡ್ಡ ಹೊಡೆತಗಳನ್ನು ಪ್ರಯೋಗಿಸಿದರು. ಹೊಸ ಚೆಂಡಿನಲ್ಲಿಯೂ ಬೌಲರ್‌ಗಳಿಗೆ ಹೆಚ್ಚಿನ ಫಲ ಸಿಗಲಿಲ್ಲ. ಅದರಲ್ಲೂ ಈ ಜೋಡಿ ರನ್ ಗಳಿಸಿತು. ಛಲ ಬಿಡದ ಬೂಮ್ರಾ ಎಸೆತದಲ್ಲಿ ಡ್ರೈವ್ ಮಾಡಲೆತ್ನಿಸಿದ ಸ್ಮಿತ್ ರೋಹಿತ್ ಶರ್ಮಾಗೆ ಕ್ಯಾಚಿತ್ತರು. ಜೊತೆಯಾಟ ಮುರಿಯಿತು. ಇದಕ್ಕೂ ಸ್ವಲ್ಪ ಹೊತ್ತಿಗೆ ಮುನ್ನ ರೋಹಿತ್ ಅವರು ಹೆಡ್ (112 ರನ್) ಕ್ಯಾಚ್ ಪಡೆಯುವ ಪ್ರಯತ್ನದಲ್ಲಿ ವಿಫಲರಾಗಿದ್ದರು.

ಬೂಮ್ರಾ ತಮ್ಮ ಐದನೇ ವಿಕೆಟ್ ರೂಪದಲ್ಲಿ ಹೆಡ್ ಅವರನ್ನು ಔಟ್ ಮಾಡಿದರು. ಪಂತ್ ಪಡೆದ ಕ್ಯಾಚ್‌ಗೆ ಹೆಡ್ ನಿರ್ಗಮಿಸಿದರು. ನಂತರದ ಆಟದಲ್ಲಿ 78 ರನ್‌ಗಳ ಅಂತರದಲ್ಲಿ ಕೇವಲ 1 ವಿಕೆಟ್ ಮಾತ್ರ ಭಾರತಕ್ಕೆ ಒಲಿಯಿತು. ಅಲೆಕ್ಸ್ ಕ್ಯಾರಿ (ಬ್ಯಾಟಿಂಗ್ 45) ಮತ್ತು ಮಿಚೆಲ್ ಸ್ಟಾರ್ಕ್ (ಬ್ಯಾಟಿಂಗ್ 7) ಕ್ರೀಸ್‌ನಲ್ಲಿದ್ದಾರೆ.



6 ಇನಿಂಗ್ಸ್; 3 ಶತಕ

ಬ್ರಿಸ್ಬೇನ್ (ಪಿಟಿಐ): ಆಸ್ಟ್ರೇಲಿಯಾದ ಬ್ಯಾಟರ್ ಟ್ರಾವಿಸ್ ಹೆಡ್ ಅವರು ಭಾರತದ ವಿರುದ್ಧದ ಕಳೆದ ಆರು ಇನಿಂಗ್ಸ್‌ಗಳಲ್ಲಿ 3 ಶತಕ ಗಳಿಸಿದ್ದಾರೆ. ಭಾನುವಾರ ಅವರು ಗಳಿಸಿದ 152 ರನ್‌ಗಳ ಶತಕವೂ ಒಂದಾಗಿದೆ. ಈ ಸರಣಿಯಲ್ಲಿ ಇದು ಎರಡನೇಯದ್ದು.

'ನನ್ನ ಜೊತೆಗೆ ಇವತ್ತು ಅದೃಷ್ಟವೂ ಇತ್ತು. ಜಸ್‌ಪ್ರೀತ್ ಬೂಮ್ರಾ ಅವರು ಕೆಲವು ಉತ್ತಮ ಸ್ಪೆಲ್‌ಗಳನ್ನು ಬೌಲಿಂಗ್ ಮಾಡಿದರು. ಅದರಲ್ಲಿ ನಾವು ಹಾಗೂ ಹೀಗೂ ಪಾರಾದೆ. ಬೂಮ್ರಾ ಅವರು ಪ್ರಯೋಗಿಸಿದ್ದ ಎಸೆತಗಳೂ ಪರಿಣಾಮಕಾರಿಯಾಗಿದ್ದವು' ಎಂದು ಹೆಡ್ ದಿನದಾಟದ ನಂತರ ಅಧಿಕೃತ ಪ್ರಸಾರಕ ವಾಹಿನಿಯಲ್ಲಿ ಹೇಳಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 7ಕ್ಕೆ405 (101 ಓವರ್‌ಗಳಲ್ಲಿ)

ಉಸ್ಮಾನ್ ಸಿ ಪಂತ್ ಬಿ ಬೂಮ್ರಾ 21 (54ಎ, 4X3)
ನೇಥನ್ ಸಿ ಕೊಹ್ಲಿ ಬಿ ಬೂಮ್ರಾ 9 (49ಎ, 4X1)
ಮಾರ್ನಸ್ ಸಿ ಕೊಹ್ಲಿ ಬಿ ರೆಡ್ಡಿ 12 (55ಎ)
ಸ್ಮಿತ್ ಸಿ ರೋಹಿತ್ ಬಿ ಬೂಮ್ರಾ 101 (190ಎ, 4X12)
ಹೆಡ್ ಸಿ ಪಂತ್ ಬಿ ಬೂಮ್ರಾ 152 (160ಎ, 4X18)
ಮಾರ್ಷ್ ಸಿ ಕೊಹ್ಲಿ ಬಿ ಬೂಮ್ರಾ 5 (16ಎ)
ಕ್ಯಾರಿ ಬ್ಯಾಟಿಂಗ್ 45 (47ಎ, 4X5, 6X1)
ಕಮಿನ್ಸ್ ಸಿ ಪಂತ್ ಬಿ ಸಿರಾಜ್ 20 (33ಎ, 4X1)
ಸ್ಟಾರ್ಕ್ ಬ್ಯಾಟಿಂಗ್ 7 (7ಎ)

ಇತರೆ: 33 (ಲೆಗ್‌ಬೈ 17, ವೈಡ್ 11, ನೋಬಾಲ್ 5),

ವಿಕೆಟ್ ಪತನ: 1–31 (ಉಸ್ಮಾನ್ ಖ್ವಾಜಾ; 1.1), 2–38 (ನೇಥನ್ ಮೆಕ್‌ಸ್ವೀನಿ; 18.3), 3–75 (ಮಾರ್ನಸ್ ಲಾಬುಷೇನ್; 33.2), 4–316 (ಸ್ಟೀವನ್ ಸ್ಮಿತ್; 82.6), 5–326 (ಮಿಚೆಲ್ ಮಾರ್ಷ್; 86.2), 6–327 (ಟ್ರಾವಿಸ್ ಹೆಡ್; 86.5), 7–385 (ಪ್ಯಾಟ್ ಕಮಿನ್ಸ್; 97.5)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 25–7–72–5, ಮೊಹಮ್ಮದ್ ಸಿರಾಜ್ 22.2–4–97–1, ಆಕಾಶ್ ದೀಪ್ 24.4–5–78–0, ನಿತೀಶ್ ಕುಮಾರ್ ರೆಡ್ಡಿ 13–1–65–1, ರವೀಂದ್ರ ಜಡೇಜ 16–2–76-0

ಮಹಿಳಾ ಪ್ರೀಮಿಯರ್ ಲೀಗ್ ಬಿಡ್: ರಾಣಾಗೆ ನಿರಾಸೆ

ಸಿಮ್ರನ್, ಕಮಲಿನಿಗೆ ಕೋಟಿ ಮೌಲ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈನ ಮಧ್ಯಮ ಕ್ರಮಾಂಕದ ಬ್ಯಾಟರ್ ಸಿಮ್ರನ್ ಶೇಖ್ ಅವರನ್ನು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಹರಾಜಿನಲ್ಲಿ ಗುಜರಾತ್ ಜೈಂಟ್ಸ್ ತಂಡವು ₹1.90 ಕೋಟಿ ಮೌಲ್ಯಕ್ಕೆ ತನ್ನ ತೆಕ್ಕೆಗೆಳೆದುಕೊಂಡಿತು.

ಡಬ್ಲ್ಯುಪಿಎಲ್‌ನ ಐದು ಫ್ರ್ಯಾಂಚೈಸಿಗಳು ಒಟ್ಟು 19 ಆಟಗಾರ್ತಿಯರ ಆಯ್ಕೆಗಾಗಿ ಇಲ್ಲಿ ಭಾನುವಾರ ನಡೆದ ಹರಾಜು ಪ್ರಕ್ರಿಯೆಯಲ್ಲಿ ಪೈಪೋಟಿ ನಡೆಸಿದವು. 91 ಭಾರತೀಯ ಮತ್ತು 29 ವಿದೇಶಿ ಆಟಗಾರ್ತಿಯರು ಬಿಡ್‌ನಲ್ಲಿದ್ದರು. ಈ ಪೈಕಿ ಭಾರತದ ಅನ್‌ಕ್ಯಾಪ್ಡ್ ಆಟಗಾರ್ತಿಯರೇ ಹೆಚ್ಚಿನ ಪಾಲು ಪಡೆದದ್ದು ವಿಶೇಷ.

ಮೊದಲ ಎರಡು ಆವೃತ್ತಿಗಳಲ್ಲಿ ಯು.ಪಿ ವಾರಿಯರ್ಸ್ ಪರ ಕಣಕ್ಕೆ ಇಳಿದಿದ್ದ 22 ವರ್ಷ ವಯಸ್ಸಿನ ಸಿಮ್ರನ್, ಬಿಡ್‌ನಲ್ಲಿ ಅತಿ ಹೆಚ್ಚು ಮೊತ್ತ ಪಡೆದರು. ₹10 ಲಕ್ಷ ಮೂಲ ಬೆಲೆ ಹೊಂದಿದ್ದ ಅವರಿಗೆ ಅದೃಷ್ಟ ಖುಲಾಯಿಸಿತು. ಅನ್‌ಕ್ಯಾಪ್ಡ್ ಆಟಗಾರ್ತಿಯಾಗಿರುವ ಅವರನ್ನು ವಾರಿಯರ್ಸ್ ತಂಡವು ಕೈಬಿಟ್ಟಿತ್ತು. ಡಬ್ಲ್ಯುಪಿಎಲ್‌ನಲ್ಲಿ ಯು.ಪಿ ಪರ ಅವರು 11 ಪಂದ್ಯ ಆಡಿ 29 ರನ್ ಗಳಿಸಿದ್ದಾರೆ.

ಭಾನುವಾರ ನಡೆದ 19 ವರ್ಷದೊಳಗಿನವರ ಟಿ20 ಏಷ್ಯಾ ಕಪ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಅಜೇಯ 44 ರನ್ ಗಳಿಸಿ ಮಿಂಚಿದ ತಮಿಳುನಾಡಿನ 16 ವರ್ಷ ವಯಸ್ಸಿನ ವಿಕೆಟ್‌ಕೀಪರ್– ಬ್ಯಾಟರ್ ಜಿ.ಕಮಲಿನಿ ಬಂಪರ್ ಮೊತ್ತ ಪಡೆದರು. ಅವರನ್ನು 1.60 ಕೋಟಿ ಮೌಲ್ಯಕ್ಕೆ ಮುಂಬೈ ಇಂಡಿಯನ್ಸ್ ತನ್ನದಾಗಿಸಿಕೊಂಡಿತು. ₹10 ಲಕ್ಷ ಮೂಲ ಬೆಲೆ ಹೊಂದಿದ್ದ ಅವರಿಗೆ ಮುಂಬೈ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಪೈಪೋಟಿ ನಡೆಸಿದ್ದವು.

ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಉತ್ತರಾಖಂಡದ ಪ್ರೇಮಾ ರಾವತ್ ಅವರನ್ನು ₹1.2 ಕೋಟಿಗೆ ಖರೀದಿಸಿತು. 23 ವರ್ಷ ವಯಸ್ಸಿನ ಆಲ್‌ರೌಂಡರ್ ಪ್ರೇಮಾ ಅವರಿಗೆ ಇದು ಚೊಚ್ಚಲ ಡಬ್ಲ್ಯುಪಿಎಲ್ ಆಗಿದೆ. ಅವರೊಂದಿಗೆ ಜೋಶಿತಾ ಜೆ.ವಿ, ರಾಘ್ವಿ ಬಿಸ್ತ್ ಮತ್ತು ಜಾಗ್ರವಿ ಪವಾರ್ ಬೆಂಗಳೂರು ತಂಡದ ಪಾಲಾದರು. ಇವರೆಲ್ಲರೂ ಭಾರತದ ಅನ್‌ಕ್ಯಾಪ್ಡ್ ಆಟಗಾರ್ತಿಯರು.

ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ದಿಯಾಂದ್ರ ಡಾಟಿನ್ ₹1.7 ಕೋಟಿಗೆ ಗುಜರಾತ್ ಜೈಂಟ್ಸ್ ತಂಡವನ್ನು ಸೇರಿಕೊಂಡರು. ₹50 ಲಕ್ಷ ಮೂಲ ಬೆಲೆ ಹೊಂದಿದ್ದ 33 ವರ್ಷ ವಯಸ್ಸಿನ ಈ ಆಟಗಾರ್ತಿಯನ್ನು ಪಡೆಯಲು ಜೈಂಟ್ಸ್ ಮತ್ತು ವಾರಿಯರ್ಸ್ ಫ್ರಾಂಚೈಸಿಗಳು ಪೈಪೋಟಿ ನಡೆಸಿದ್ದರು.

ಸ್ನೇಹಾ ರಾಣಾಗೆ ನಿರಾಸೆ: ಅಚ್ಚರಿ ಎಂಬಂತೆ ಭಾರತದ ಅನುಭವಿ ಆಟಗಾರ್ತಿಯರಾದ ಸ್ನೇಹಾ ರಾಣಾ, ಪೂನಮ್ ಯಾದವ್, ಸುಷ್ಮಾ ವರ್ಮಾ ಅವರ ಖರೀದಿಗೆ ಯಾವುದೇ ತಂಡಗಳು ಆಸಕ್ತಿ ತೋರಲಿಲ್ಲ. ಅವರೊಂದಿಗೆ ತೇಜಲ್ ಹಸಬ್ನಿಸ್, ಸಿ.ಪ್ರತ್ಯುಷಾ (ಭಾರತ), ಹೀಥರ್ ನೈಟ್, ಲಾರೆನ್ ಬೆಲ್ (ಇಂಗ್ಲೆಂಡ್), ಒರ್ಲಾ ಪ್ರೆಂಡರ್‌ಗಸ್ಟ್ (ಐರ್ಲೆಂಡ್), ಕಿಮ್ ಗಾರ್ತ್ (ಆಸ್ಟ್ರೇಲಿಯಾ) ಅವರಿಗೂ ನಿರಾಸೆಯಾಯಿತು.



ಸಿಮ್ರಾನ್ ಶೇಖ್



ಜಿ.ಕಮಲಿನಿ

ಡಬ್ಲ್ಯುಪಿಎಲ್: ಆಟಗಾರ್ತಿಯರ ಪಡೆದ ಮೌಲ್ಯ

ಆಟಗಾರ್ತಿಯರು	ಪಡೆದ ಮೌಲ್ಯ (₹ಕೋಟಿಗಳಲ್ಲಿ)
ಡೆಲ್ಲಿ ಕ್ಯಾಪಿಟಲ್ಸ್	
ಎನ್. ಚಾರಿಣಿ	0.55
ನಂದಿನಿ ಕಶ್ಯಪ್	0.10
ಸಾರಾ ಬ್ರೈಸ್	0.10
ನಿಕಿ ಪ್ರಸಾದ್	0.10
ಗುಜರಾತ್ ಜೈಂಟ್ಸ್	
ಸಿಮ್ರಾನ್ ಶೇಖ್	1.9
ದಿಯಾಂದ್ರ ಡಾಟಿನ್	1.7
ಡೇನಿಯಲ್ ಗಿಬ್ಸನ್	0.30
ಪ್ರಕಾಶಿಕಾ ನಾಯ್ಕ್	0.10
ಮುಂಬೈ ಇಂಡಿಯನ್ಸ್	
ಜಿ.ನಂದಿನಿ	1.6
ನಾಡಿನೆ ಡೆ ಕ್ಲರ್ಕ್	0.30
ಅಕ್ಷಿತಾ ಮಹೇಶ್ವರಿ	0.20
ಸಂಸ್ಕೃತಿ ಗುಪ್ತ	0.10
ರಾಯಲ್ ಚಾಲೆಂಜರ್ಸ್ ಬೆಂಗಳೂರು	
ಪ್ರೇಮಾ ರಾವತ್	1.2
ಜೋಶಿತಾ ವಿ.ಜೆ	0.10
ರಾಘ್ವಿ ಬಿಸ್ಟ್	0.10
ಜಾಗ್ರವಿ ಪವಾರ್	0.10
ಯು.ಪಿ. ವಾರಿಯರ್ಸ್	
ಅಲನಾ ಕಿಂಗ್	0.30
ಆರುಷಿ ಗೋಯೆಲ್	0.10
ಕ್ರಾಂತಿ ಗೌಡ	0.10

ಜೂನಿಯರ್ ಏಷ್ಯಾ ಕಪ್ ಹಾಕಿ: ಚೀನಾಗೆ ಸೋಲು

ಭಾರತದ ವನಿತೆಯರಿಗೆ ಪ್ರಶಸ್ತಿ

ಮಸ್ಕತ್ (ಪಿಟಿಐ): ಗೋಲ್‌ಕೀಪರ್ ನಿಧಿ ಪೆನಾಲ್ಟಿ ಶೂಟೌಟ್‌ನಲ್ಲಿ ತೋರಿದ ಅಮೋಘ ಆಟದ ಬಲದಿಂದ ಭಾರತ ವನಿತೆಯರ ತಂಡವು ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಫೈನಲ್‌ನಲ್ಲಿ ಬಲಿಷ್ಠ ಚೀನಾ ತಂಡವನ್ನು ಮಣಿಸಿ ಪ್ರಶಸ್ತಿ ಉಳಿಸಿಕೊಂಡಿತು.

ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ನಿಗದಿತ ಅವಧಿಯ ಪಂದ್ಯವು 1–1 ಗೋಲುಗಳಿಂದ ರೋಚಕ ಟೈ ಆಗಿತ್ತು. ನಂತರ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ 3–2ರಿಂದ ಭಾರತ ಜಯಭೇರಿ ಬಾರಿಸಿ ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದಿತು. ಶೂಟೌಟ್ ವೇಳೆ ಮೂರು ಬಾರಿಯ ಚಾಂಪಿಯನ್ ಚೀನಾ ತಂಡದ ಫಾರ್ವರ್ಡ್ ಆಟಗಾರ್ತಿಯರ ಮೂರು ಪ್ರಯತ್ನಗಳನ್ನು ವಿಫಲಗೊಳಿಸಿ, ಪರಾಕ್ರಮ ಮೆರೆದ ನಿಧಿ ಗೆಲುವಿನ ರೂವಾರಿಯಾದರು. ನಿಗದಿತ ಅವಧಿಯ ಪಂದ್ಯದಲ್ಲೂ ನಿಧಿ ಉತ್ತಮ ಆಟ ಪ್ರದರ್ಶಿಸಿದ್ದರು.

ಪಂದ್ಯದ 30ನೇ ನಿಮಿಷದಲ್ಲಿ ನಾಯಕಿ ಜಿಂಜುವಾಂಗ್ ತಾನ್, ಚೀನಾ ತಂಡಕ್ಕೆ ಮುನ್ನಡೆ ಒದಗಿಸಿದರು. ಹೀಗಾಗಿ, ಮಧ್ಯಂತರದ ವೇಳೆಗೆ ಚೀನಾ ತಂಡವು 1–0 ಮುನ್ನಡೆ ಪಡೆದಿತ್ತು. 41ನೇ ನಿಮಿಷದಲ್ಲಿ ಭಾರತದ ಸಿವಾಚ್ ಕನಿಕಾ ಚೆಂಡನ್ನು ಗುರಿ ಸೇರಿಸಿದಾಗ ತಂಡಗಳ ಸ್ಕೋರ್ 1–1 ಸಮನಾಯಿತು.

ಶೂಟೌಟ್‌ನಲ್ಲಿ ಭಾರತದ ಸಾಕ್ಷಿ ರಾಣಾ, ಇಶಿಕಾಮ, ಸುನೆಲಿಟಾ ಟೊಪ್ಪೊ ಭಾರತದ ಪರ ಚೆಂಡನ್ನು ಗುರಿ ಸೇರಿಸಿದರು. ಮುಮ್ತಾಜ್ ಖಾನ್ ಮತ್ತು ಕನಿಕಾ ಸಿವಾಚ್ ಅವರ ಪ್ರಯತ್ನಗಳನ್ನು ಚೀನಾದ ಗೋಲ್‌ಕೀಪರ್ ವಿಫಲಗೊಳಿಸಿದರು.



ಭಾರತ (ನೀಲಿ) ಮತ್ತು ಚೀನಾ ಆಟಗಾರ್ತಿಯರ ನಡುವೆ ಪೈಪೋಟಿ –ಎಕ್ಸ್ ಚಿತ್ರ

ಬಹುಮಾನ ಘೋಷಣೆ: ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದ ಭಾರತ ತಂಡದ ಎಲ್ಲ ಆಟಗಾರ್ತಿಯರಿಗೆ ತಲಾ ₹ 2 ಲಕ್ಷ ಮತ್ತು ನೆರವಿ ಸಿಬ್ಬಂದಿಗೆ ತಲಾ ₹ 1 ಲಕ್ಷ ಬಹುಮಾನವನ್ನು ಹಾಕಿ ಇಂಡಿಯಾ ಘೋಷಣೆ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಪ್ಯಾಂಥರ್ಸ್‌ಗೆ ಮಣಿದ ತಲೈವಾಸ್

ಪುಣೆ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಭಾನುವಾರ 34–27ರಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು.

ವಿರಾಮದ ವೇಳೆ 20–13ರಿಂದ ಮುನ್ನಡೆ ಸಾಧಿಸಿದ್ದ ಜೈಪುರ ತಂಡವು ಉತ್ತರಾರ್ಧದಲ್ಲೂ ಅದೇ ಅಂತರವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಜೈಪುರ ಪರ ಅರ್ಜುನ್ ದೇಶ್ವಾಲ್ ಮತ್ತು ನೀರಜ್ ನರ್ವಾಲ್ ತಲಾ ಆರು ಪಾಯಿಂಟ್ಸ್ ಗಳಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಯುಪಿ ಯೋಧಾಸ್ 30–27ರಿಂದ ಯು ಮುಂಬಾ ತಂಡವನ್ನು ಮಣಿಸಿತು. ಯೋಧಾಸ್ ಪರ ಭವಾನಿ ರಜಪೂತ್ 7 ಮತ್ತು ಗಗನ್ ಗೌಡ 5 ಅಂಕ ಗಳಿಸಿದರು.

ರೇಸ್: ಗಿಲ್– ಅನಿರುದ್ಧಗೆ ಪ್ರಶಸ್ತಿ

ತುಮಕೂರು: ಭಾರತದ ರೇಸ್ ಚಾಲಕ ಗೌರವ್ ಗಿಲ್ ಮತ್ತು ಸಹ ಚಾಲಕ ಅನಿರುದ್ಧ ರಂಗನೇಕರ್ ಇಲ್ಲಿ ಭಾನುವಾರ ಮುಕ್ತಾಯಗೊಂಡ ಎಫ್‌ಎಂಎಸ್‌ಸಿಐ ಇಂಡಿಯನ್ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್‌ನ ಕೆ1000 ರ್‍ಯಾಲಿಯ ಕೊನೆಯ ಸುತ್ತಿನ ಸ್ಪರ್ಧೆಯಲ್ಲಿ ಚಾಂಪಿಯನ್ ಆದರು. ಗಿಲ್ ಮತ್ತು ಅನಿರುದ್ಧ ಜೋಡಿಗೆ ಇದು ಹ್ಯಾಟ್ರಿಕ್ ಪ್ರಶಸ್ತಿಯಾಗಿದೆ.

ಅರ್ಕಾ ಮೋಟಾರ್ ಸ್ಪೋರ್ಟ್ಸ್‌ನ ಕರ್ಣ ಕಡೂರು ಮತ್ತು ಅನುಭವಿ ಚಾಲಕ ಮೂಸಾ ಷರೀಫ್ ಅವರು 2024ರ ಇಂಡಿಯನ್ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್‌ನ ಸಮಗ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಭಾರತ ಶುಭಾರಂಭ

ಕೌಲಾಲಂಪುರ (ಪಿಟಿಐ): ಸೋನಮ್ ಯಾದವ್ (6ಕ್ಕೆ 4) ಅವರ ಕೈಚಳಕ ಮತ್ತು ಜಿ.ಕಮಲಿನಿ (ಔಟಾಗದೇ 44;29ಎ) ಅವರ ಬ್ಯಾಟಿಂಗ್ ನೆರವಿನಿಂದ ಭಾರತ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನವನ್ನು 9 ವಿಕೆಟ್‌ಗಳಿಂದ ಮಣಿಸಿ ಶುಭಾರಂಭ ಮಾಡಿತು.

ಭಾನುವಾರ ನಡೆದ 'ಎ' ಗುಂಪಿನ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಪಾಕಿಸ್ತಾನ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 67 ರನ್ ಗಳಿಸಿತು. ಗುರಿಯನ್ನು ಬೆನ್ನತ್ತಿದ ಭಾರತ ತಂಡವು 7.5 ಓವರ್‌ಗಳಲ್ಲಿ 1 ವಿಕೆಟ್‌ಗೆ 68 ರನ್ ಗಳಿಸಿತು.

ಭಾರತ ಮಂಗಳವಾರ ನೇಪಾಳವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 67 (ಕೋಮಲ್ ಖಾನ್ 24; ಸೋನಮ್ ಯಾದವ್ 6ಕ್ಕೆ 4). ಭಾರತ: 7.5 ಓವರ್‌ಗಳಲ್ಲಿ 1 ವಿಕೆಟ್‌ಗೆ 68 (ಜಿ. ಕಮಲಿನಿ ಔಟಾಗದೇ 44, ಸಾನಿಕಾ ಚಳಕೆ ಔಟಾಗದೇ 19).

ಮುಂಬೈಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ

ಫೈನಲ್ ವೀಕ್ಷಿಸಿದ 15 ಸಾವಿರ ಪ್ರೇಕ್ಷಕರು; ಸೂರ್ಯಾಂಶ್, ಸೂರ್ಯ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ಸೇರಿದ್ದ 15 ಸಾವಿರಕ್ಕೂ ಹೆಚ್ಚು ಅಭಿಮಾನಿಗಳ ಮುಂದೆ ಮುಂಬೈ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟ್ರೋಫಿಗೆ ಮುತ್ತಿಟ್ಟರು.

ತಾರಾ ವರ್ಚಸ್ಸಿನ ಆಟಗಾರರು ತುಂಬಿರುವ ಮುಂಬೈ ತಂಡವು ನಿರೀಕ್ಷೆಯಂತೆಯೇ ಫೈನಲ್‌ನಲ್ಲಿ ಮಧ್ಯಪ್ರದೇಶ ಎದುರು 5 ವಿಕೆಟ್‌ಗಳಿಂದ ಜಯಿಸಿತು. ಮುಂಬೈ ತಂಡವು ಎರಡನೇ ಬಾರಿಗೆ ಈ ಪ್ರಶಸ್ತಿ ಗೆದ್ದಿತು. 2022ರ–23ರಲ್ಲಿ ಮುಂಬೈ ಟ್ರೋಫಿ ಜಯಿಸಿದಾಗ ನಾಯಕರಾಗಿದ್ದ ಅಜಿಂಕ್ಯ ರಹಾನೆ ಈ ಬಾರಿ ಸರಣಿಶ್ರೇಷ್ಠ ಗೌರವಕ್ಕೆ ಪಾತ್ರರಾದರು.

ಫೈನಲ್‌ನಲ್ಲಿ ಭಾರತ ತಂಡದ ಆರು ಆಟಗಾರರಿದ್ದ ಮುಂಬೈ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಾರ್ದೂಲ್ ಠಾಕೂರ್ ಮತ್ತು ರಾಯಸ್ಟನ್ ದಿಯಾಸ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಮಧ್ಯಪ್ರದೇಶ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 174 ರನ್ ಗಳಿಸಿತ್ತು. ಮಧ್ಯಪ್ರದೇಶ ತಂಡದ ನಾಯಕ ರಜತ್ ಪಾಟೀದಾರ್ 40 ಎಸೆತಗಳಲ್ಲಿ ಅಜೇಯ 81 ರನ್ ಗಳಿಸಿದರು. ಅರ್ಧ ಡಜನ್ ಬೌಂಡರಿ ಮತ್ತು ಅಷ್ಟೇ ಸಂಖ್ಯೆ ಸಿಕ್ಸರ್‌ಗಳನ್ನು ಸಿಡಿಸಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡುವ ರಜತ್ ಬೆಂಗಳೂರು ಅಭಿಮಾನಿಗಳಿಗೆ ಚಿರಪರಿಚಿತರು. ಅದರಿಂದಾಗಿ ಪಂದ್ಯದುದ್ದಕ್ಕೂ ಗ್ಯಾಲರಿಯಿಂದ ಆರ್‌ಸಿಬಿ.. ಆರ್‌ಸಿಬಿ.. ಘೋಷಣೆಗಳು ಮೊಳಗುತ್ತಲೇ ಇದ್ದವು. ಅದಕ್ಕೆ ತಕ್ಕಂತೆ ಅವರೂ ತಮ್ಮ ಬ್ಯಾಟಿಂಗ್ ಮೂಲಕ ರಂಜಿಸಿದರು. ಆದರೆ, ಅವರ ತಂಡದ ಬೌಲರ್‌ಗಳು ಮುಂಬೈ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಲಿಲ್ಲ. ಟೂರ್ನಿಯುದ್ದಕ್ಕೂ ಮಿಂಚಿರುವ ಅಜಿಂಕ್ಯ ರಹಾನೆ (37; 30ಎ), ಸೂರ್ಯಕುಮಾರ್ ಯಾದವ್ (48; 35ಎ) ಹಾಗೂ ಸೂರ್ಯಾಂಶ್ ಶೇಡಗೆ (ಅಜೇಯ 36; 15ಎ) ಅವರ ಅಬ್ಬರದ ಆಟದಿಂದಾಗಿ ತಂಡವು 17.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 180 ರನ್ ಗಳಿಸಿ ಜಯಿಸಿತು.

ಮುಂಬೈ ತಂಡದ ಆರಂಭಿಕ ಬ್ಯಾಟರ್ ಪೃಥ್ವಿ ಶಾ (10), ಶ್ರೇಯಸ್ (16) ಮತ್ತು ಶಿವಂ ದುಬೆ (9) ಅವರು ಬೇಗನೆ ಔಟಾದರು. ಈ ಸಂದರ್ಭಗಳಲ್ಲಿ ಇನಿಂಗ್ಸ್ ಮೇಲೆ ಹಿಡಿತ ಸಾಧಿಸುವ ಅವಕಾಶ ರಜತ್ ಬಳಗಕ್ಕೆ ಇತ್ತು. ಆದರೆ, ಅವರ ಪ್ರಯತ್ನಕ್ಕೆ ಸೂರ್ಯಕುಮಾರ್ ಮತ್ತು ಸೂರ್ಯಾಂಶ್ ಅವರು ಅಡ್ಡಗಾಲು ಹಾಕಿದರು. ತಮ್ಮ ಅಬ್ಬರದ ಬ್ಯಾಟಿಂಗ್ ಮೂಲಕ ತಂಡಕ್ಕೆ ಜಯದ ಕಾಣಿಕೆ ನೀಡಿದರು. ಈ ಸಲದ ಟೂರ್ನಿಯಲ್ಲಿ ಕರ್ನಾಟಕ ತಂಡವು ಗುಂಪು ಹಂತದಲ್ಲಿಯೇ ಸೋತು ನಿರ್ಗಮಿಸಿತ್ತು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ: 20 ಓವರ್‌ಗಳಲ್ಲಿ 8ಕ್ಕೆ174 (ಸುಧ್ರಾಂಶು ಸೇನಾಪತಿ 23, ರಜತ್ ಪಾಟೀದಾರ್ ಔಟಾಗದೆ 81, ಶಾರ್ದೂಲ್ ಠಾಕೂರ್ 41ಕ್ಕೆ2, ರಾಯಸ್ಟನ್ ದಾಸ್ 32ಕ್ಕೆ2) ಮುಂಬೈ: 17.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 180 (ಅಜಿಂಕ್ಯ ರಹಾನೆ 37, ಸೂರ್ಯಕುಮಾರ್ ಯಾದವ್ 48, ಸೂರ್ಯಾಂಶ್ ಶೆಡಗೆ ಔಟಾಗದೆ 36, ತ್ರಿಪುರೇಶ್ ಸಿಂಗ್ 34ಕ್ಕೆ2) **ಫಲಿತಾಂಶ:** ಮುಂಬೈ ತಂಡಕ್ಕೆ 5 ವಿಕೆಟ್ ಜಯ. ಪಂದ್ಯಶ್ರೇಷ್ಠ: ಸೂರ್ಯಾಂಶ್ ಶೆಡಗೆ. ಸರಣಿ ಶ್ರೇಷ್ಠ: ಅಜಿಂಕ್ಯ ರಹಾನೆ.



ಮುಂಬೈ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರಿಗೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟ್ರೋಫಿ ಪ್ರದಾನ ಮಾಡಿದರು –ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸ್ಮೃತಿ, ಜೆಮಿಮಾ ಆಟಕ್ಕೆ ಒಲಿದ ಜಯ

ನವೀ ಮುಂಬೈ (ಪಿಟಿಐ): ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಮತ್ತು ಜೆಮಿಮಾ ರಾಡ್ರಿಗಸ್ ಅವರ ಬ್ಯಾಟಿಂಗ್ ಬಲದಿಂದ ಭಾರತ ವನಿತೆಯರ ತಂಡವು ಭಾನುವಾರ ಇಲ್ಲಿ ನಡೆದ ವೆಸ್ಟ್ ಇಂಡೀಸ್ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಜಯಗಳಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಸರಣಿಯ ಮೊದಲ ಪಂದ್ಯದಲ್ಲಿ 49 ರನ್‌ಗಳಿಂದ ಭಾರತ ತಂಡವು ಗೆದ್ದಿತು. ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ಟಾಸ್ ಗೆದ್ದ ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ (54; 33ಎ, 4X7, 6X2) ಮತ್ತು ಜೆಮಿಮಾ (73; 35ಎ, 4X9, 6X2) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 195 ರನ್ ಗಳಿಸಿತು. ಗುರಿ ಬೆನ್ನಟ್ಟಿದ ವಿಂಡೀಸ್ ಬಳಗವು 20 ಓವರ್‌ಗಳಲ್ಲಿ 7ಕ್ಕೆ 146 ರನ್ ಗಳಿಸಿತು. ತಂಡದ ಒಲನಾ ಜೋಸೆಫ್ (49; 33ಎ) ಮತ್ತು ಅರ್ಧಶತಕ ಗಳಿಸಿದ ದಿಯಾಂದ್ರ ಡಾಟಿನ್ (52; 28ಎ) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 195 (ಸ್ಮೃತಿ ಮಂದಾನ 54, ಉಮಾ ಚೆಟ್ರಿ 24, ಜೆಮಿಮಾ ರಾಡ್ರಿಗಸ್ 73, ಕರಿಷ್ಮಾ 18ಕ್ಕೆ2) ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 7ಕ್ಕೆ 146 (ಒಲನಾ ಜೋಸೆಫ್ 49, ದಿಯಾಂದ್ರ ಡಾಟಿನ್ 52, ತಿತಾಸ್ ಸಾಧು 37ಕ್ಕೆ3, ದೀಪ್ತಿ ಶರ್ಮಾ 21ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 49 ರನ್ ಜಯ.



ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ (ಕೆಟಿಟಿಎ) ಆಶ್ರಯದಲ್ಲಿ ಭಾನುವಾರ ಆರಂಭಗೊಂಡ ಯುಟಿಟಿ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಉದ್ಘಾಟನೆ ವೇಳೆ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಮತ್ತು ಕೆಟಿಟಿಎ ಅಧ್ಯಕ್ಷ ರಕ್ಷ ರಾಮಯ್ಯ ಟೇಬಲ್ ಟೆನಿಸ್ ಆಡಿದರು

ಯುಟಿಟಿ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್

ಪೂಜಾಗೆ ವೇದಲಾಕ್ಷಿ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವೇದಲಾಕ್ಷಿ ದೇವಿ ಅವರು ಯುಟಿಟಿ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನ ಗುಂಪು ಹಂತದ ಅರ್ಹತಾ ಸುತ್ತಿನಲ್ಲಿ ಪಿಎಸ್‌ಪಿಬಿಯ ಅನುಭವಿ ಆಟಗಾರ್ತಿ ಪೂಜಾ ಸಹಸ್ರಬುಧೆ ಅವರಿಗೆ ಆಘಾತ ನೀಡಿ ಮುಖ್ಯ ಸುತ್ತಿಗೆ ಹತ್ತಿರವಾದರು.

ಇಲ್ಲಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಆರಂಭಗೊಂಡ ಟೂರ್ನಿಯ ಪಂದ್ಯದಲ್ಲಿ 0–2ರಿಂದ ಹಿನ್ನಡೆಯಲ್ಲಿದ್ದ ಕರ್ನಾಟಕದ ಆಟಗಾರ್ತಿ ಪುಟಿದೆದ್ದು, ಸತತ ಮೂರು ಗೇಮ್‌ಗಳನ್ನು ಗೆದ್ದುಕೊಂಡರು. ಮೊದಲೆರಡು ಗೇಮ್‌ಗಳಲ್ಲಿ ಪಾರಮ್ಯ ಮೆರೆದಿದ್ದ ಪೂಜಾ ನಂತರ ಹಿಡಿತ ಕಳೆದುಕೊಂಡರು.

ಕರ್ನಾಟಕದ ಪ್ರೇಕ್ಷಾ ತಿಲಾವತ್ 11-9, 6-11, 5-11, 11-7, 12-10 ರಿಂದ ಹರಿಯಾಣದ ಸ್ನೇಹಾ ಭೌಮಿಕ್ ಅವರನ್ನು ಸೋಲಿಸಿದರು. ಒಂದು ಹಂತದಲ್ಲಿ 1–2 ಗೇಮ್‌ಗಳ ಹಿನ್ನಡೆಯಲ್ಲಿದ್ದ ಪ್ರೇಕ್ಷಾ ನಂತರ ಸತತವಾಗಿ ಎರಡು ಗೇಮ್‌ಗಳನ್ನು ಗೆದ್ದುಕೊಂಡರು.

ಪುರುಷರ ಸಿಂಗಲ್ಸ್‌ನಲ್ಲಿ ತೆಲಂಗಾಣದ ವರುಣಿ ಜೈಸ್ವಾಲ್ 11-7, 8-11, 5-11, 11-3, 11-9ರಿಂದ ಪಶ್ಚಿಮ ಬಂಗಾಳದ ಯುವ ಪ್ರತಿಭೆ ಸಯಾನಿ ಪಾಂಡಾ ವಿರುದ್ಧ ಗೆಲುವು ಸಾಧಿಸಿದರು.

ಪಶ್ಚಿಮ ಬಂಗಾಳದ ಅನಿಕೇತ್ ಸೇನ್ ಚೌಧರಿ 11-6, 7-11, 11-5, 11-5ರಿಂದ ಅಸ್ಸಾಂನ ರೌನಕ್ ಕರ್ ವಿರುದ್ಧ ಜಯ ಗಳಿಸಿ ಮುಖ್ಯ ಸುತ್ತಿಗೆ ಸಮೀಪವಾದರು.

ಪುರುಷರ ಸಿಂಗಲ್ಸ್ ಮುಖ್ಯ ಸುತ್ತಿನಲ್ಲಿ ಹರ್ಮೀತ್ ದೇಸಾಯಿ ಮತ್ತು ಅಂಕುರ್ ಭಟ್ಟಾಚಾರ್ಜಿ ಹಾಗೂ ಮಹಿಳೆಯರ ಸಿಂಗಲ್ಸ್‌ನಲ್ಲಿ ಸುತೀರ್ಥ ಮುಖರ್ಜಿ ಮತ್ತು ಸ್ವಸ್ತಿಕಾ ಘೋಷ್ ಕ್ರಮವಾಗಿ ಮೊದಲೆರಡು ಶ್ರೇಯಾಂಕ ಪಡೆದಿದ್ದಾರೆ.